ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

31 ಡಿಸೆಂಬರ್ 2014 ಪುಟ 20 ರೂ. 15/-



ಎ.ಕೆ.ಸುಬ್ಬಯ್ಯ ರಾಜ್ಯದ ಆಸ್ತಿ

ಬಟ್ಟೆಯಲ್ಲಿತ್ತು ಸ್ವಾಮಿಯ 'ಪ್ರಸಾದ'





ಪಾಕಿಸ್ತಾನ



ತಲೆಕೆಟ್ಟ ಸಾಬರ ಹುಚ್ಚಾಟಗಳು


ಾಲಂಬಿಗೆ ದೇವನೂರು ಪತ್ರ





ಕಂಬಳ ಜನಪದ ಕ್ರೀಡೆಯೇ?

ಅಂಚಿನಿಂದ....



ಡಾ.ವಾಸು ಎಚ್.ವಿ.

ಕಾಯಿಲೆಯ ಸಂಶೋಧನೆಗೆ ಇಡೀ ದೇಹದ ಅಗತ್ಯವಿರುವುದಿಲ್ಲ, ಪೋಸ್ಟ್ ಮಾರ್ಟಂ ಮಾಡಿ, ದೇಹದ ನಿರ್ದಿಷ್ಟ ಭಾಗಗಳ ಕೆಲವು ತುಣುಕುಗಳನ್ನು ಸಂಗ್ರಹಿಸಿಟ್ಟುಕೊಳ್ಳಲಾಗುತ್ತದೆ. ಅವುಗಳನ್ನು ನಂತರ ಅಧ್ಯಯನ ಮಾಡಿದರೆ, ಕೆಲವು ಸಂಗತಿಗಳು ಗೊತ್ತಾಗುತ್ತವೆ. ಯಾವುದೇ ರೋಗದಿಂದ ಸಾಯುವ ವ್ಯಕ್ತಿಯ ಪೋಸ್ಟ್ ಮಾರ್ಟಂ ನಡೆಸಿ, ಈ ರೀತಿಯ ಅಧ್ಯಯನ ಮಾಡಿದರೆ, ಅದರಿಂದ ಸಂಶೋಧನೆಗೆ ಅನುಕೂಲಗಳಿರುತ್ತವೆ.

ದೇಹದಾನ



ಪತ್ರಿಕೆಯ ಅಂಕಣಕಾರ ಯೋಗೀಶ್ ಮಾಸ್ಟರ್ ಅವರ ತಾಯಿ ಗಿರಿಜಾ ಕಳೆದ ವಾರ ತೀರಿಕೊಂಡರು. ತಾಯಿಯ ಇಚ್ಛೆಯಂತೆ ಅವರ ದೇಹವನ್ನು ಬೆಂಗಳೂರು ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಯಿತು.

ಕಮಲಮ್ಮ ಎಂಬ ಆ ತಾಯಿ ನನಗೆ ಫೋನ್ ಮಾಡಿದಾಗ ಆಶ್ಚರ್ಯವಾಗಿತ್ತು. 'ನಿನ್ನ ಜೊತೆ ಮಾತನಾಡಬೇಕು. ಒಬ್ಬನೇ ಸಿಗಬೇಕು. ಬೇರೆಯವರಿಗೆ ಹೇಳೋದು ಬೇಡ' ಎಂದು ಫೋನಿನಲ್ಲಿ ಹೇಳಿದ್ದರು. ಅವರಿಗೆ ನನ್ನ ಜೊತೆ ಪ್ರತ್ಯೇಕವಾಗಿ ಮಾತನಾಡುವಂತದ್ದು ಅಂಥದ್ದೇನಿರಬಹುದು ಎಂದು ಹೊಳೆದಿರಲಿಲ್ಲ. ಕೊನೆಗೆ ಸಿಕ್ಕರು. ಅವರು ಹೇಳಿದ ವಿಚಾರ ಕೇಳಿ ಮತ್ತೂ ಆಶ್ಚರ್ಯವಾಯಿತು. ಅವರು ತಮ್ಮ ಸಾವಿನ ನಂತರ ದೇಹದಾನ ಮಾಡಲು ಇಚ್ಛಿಸಿದ್ದರು! ಬಹುಶಃ ಎರಡನೆಯ ತರಗತಿಯಷ್ಟು ಮಾತ್ರ ಓದಿರಬಹುದಾದ, ತುಮಕೂರು ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ ತಮ್ಮ ಬಹುತೇಕ ಜೀವನವನ್ನು ಸವೆಸಿದ್ದ, ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಈಗಲೂ ಎಲ್ಲಾ ಸಂಪ್ರದಾಯಗಳನ್ನು ಪಾಲಿಸುತ್ತಿದ್ದ, ಈಗಷ್ಟೇ ವೃದ್ಧಾಪ್ಯಕ್ಕೆ ಕಾಲಿಟ್ಟಿದ್ದ ಆಕೆಗೆ ಇಂತಹದೊಂದು ವಿಚಾರ ಹೊಳೆದಿದ್ದು ಹೇಗೆ?

ಅಷ್ಟುಹೊತ್ತಿಗೆ ಅವರ ದೇಹವು 5 ಸಾರಿ ಶಸ್ತ್ರಚಿಕಿತ್ಸೆಗೆ ಒಳಗಾಗಿತ್ತು, ಎರಡು ಬಾರಿ ಅಪಘಾತದ ಕಾರಣಕ್ಕೆ, ಇನ್ನು ಮೂರು ಬಾರಿ ಕ್ಯಾನ್ಸರ್‌ನ ಕಾರಣಕ್ಕೆ. ಅವರ ಆಸ್ಪತ್ರೆ ಅನುಭವ, ತನ್ನ ದೇಹವು ಇನ್ನಷ್ಟು ಸಂಶೋಧನೆಗೆ ಒಳಗಾದರೆ ಮುಂದಿನ ತಲೆಮಾರಿಗೆ ಉಪಯೋಗಕ್ಕೆ ಬರಬಹುದು ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿರಬಹುದು ಎಂದುಕೊಂಡೆ. ಏಕೆಂದರೆ, ಸತ್ತ ನಂತರ ದೇಹದಾನ ಮಾಡಿದರೆ, ಅದು ಸಂಶೋಧನೆಗೆ ಬಳಕೆಯಾಗುತ್ತದೆಂದು ಬಹಳಷ್ಟು ಜನರು ಭಾವಿಸುತ್ತಾರೆ. ವಾಸ್ತವದಲ್ಲಿ ಸಾಮಾನ್ಯವಾಗಿ ಅಂತಹ ದೇಹಗಳನ್ನು ಮೆಡಿಕಲ್ ಕಾಲೇಜಿನ ಅಂಗರಚನಾ ಶಾಸ್ತ್ರ (Anatomy) ವಿಭಾಗಕ್ಕೆ ನೀಡಲಾಗುತ್ತದೆ. ಅಲ್ಲಿ ಕಾಯಿಲೆಯ ಕುರಿತ ಸಂಶೋಧನೆಯೇನೂ ನಡೆಯುವುದಿಲ್ಲ. ವೈದ್ಯಕೀಯ ವಿದ್ಯಾರ್ಥಿಗಳು ಮೊದಲ ವರ್ಷದಲ್ಲಿ ಮಾಡಬೇಕಾದ ದೇಹಛೇದನ (Dissection)ಕ್ಕೆ ಮನುಷ್ಯ ದೇಹಗಳು ಅಗತ್ಯವಿರುತ್ತವೆ. ಅದಕ್ಕೆ ಈ ದೇಹಗಳು ಉಪಯೋಗಕ್ಕೆ ಬರುತ್ತವೆ.

ಕಾಯಿಲೆಯ ಸಂಶೋಧನೆಗೆ ಇಡೀ ದೇಹದ ಅಗತ್ಯವಿರುವುದಿಲ್ಲ, ಪೋಸ್ಟ್ ಮಾರ್ಟಂ ಮಾಡಿ, ದೇಹದ ನಿರ್ದಿಷ್ಟ ಭಾಗಗಳ ಕೆಲವು ತುಣುಕುಗಳನ್ನು ಸಂಗ್ರಹಿಸಿಟ್ಟುಕೊಳ್ಳಲಾಗುತ್ತದೆ. ಅವುಗಳನ್ನು ನಂತರ ಅಧ್ಯಯನ ಮಾಡಿದರೆ, ಕೆಲವು ಸಂಗತಿಗಳು ಗೊತ್ತಾಗುತ್ತವೆ. ಯಾವುದೇ ರೋಗದಿಂದ ಸಾಯುವ ವ್ಯಕ್ತಿಯ ಪೋಸ್ಟ್ ಮಾರ್ಟಂ ನಡೆಸಿ, ಈ ರೀತಿಯ ಅಧ್ಯಯನ ಮಾಡಿದರೆ, ಅದರಿಂದ ಸಂಶೋಧನೆಗೆ ಅನುಕೂಲಗಳಿರುತ್ತವೆ. ಅಂತಹ ಸಂಶೋಧನಾ ಪ್ರವೃತ್ತಿ ನಮ್ಮ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಬಹಳ ಕಡಿಮೆ. ಆ ಪ್ರವೃತ್ತಿ ಇದ್ದುದರಲ್ಲಿ ನಿಮ್ಹಾನ್ಸ್ ಸಂಸ್ಥೆಯಲ್ಲಿ ಚೆನ್ನಾಗಿದೆ. ಈಗ ಹಾಲಿ ಡೀನ್ ಆಗಿರುವ ಡಾ.ಸತೀಶ್‌ಚಂದ್ರ ರೋಗಿಗಳ ಸಂಬಂಧಿಕರಿಗೆ ಪೋಸ್ಟ್ ಮಾರ್ಟಂಗೆ ಒಪ್ಪಿಗೆ ಕೊಡಲು ಮನವರಿಕೆ ಮಾಡುತ್ತಿದ್ದ ವಿಧಾನವನ್ನು ಅವರೊಂದಿಗೆ ಕೆಲ ತಿಂಗಳು ಕೆಲಸ ಮಾಡಿದ್ದಾಗ ಕಂಡಿದ್ದೇನೆ. 'ನೋಡೀಮ್ಮಾ, ನಿಮ್ಮ ಮಗುವಿಗೆ ಇನ್ನೂ 4 ವರ್ಷ ವಯಸ್ಸು. ಅದಕ್ಕೆ ಬಂದಿರುವ ಕಾಯಿಲೆಗೆ ನಮಗೆ ತಿಳಿದಿರುವಷ್ಟು ಚಿಕಿತ್ಸೆ ಕೊಟ್ಟಿದ್ದೇವೆ. ಆದ್ರೂ ಈ ಮಗುವನ್ನು ಬದುಕಿಸಿಕೊಳ್ಳಲು ಆಗಲಿಲ್ಲ, ನಮಗೂ ಇದರಿಂದ ಬೇಜಾರಾಗಿದೆ. ಯಾಕೆ ಉಳಿಸಿಕೊಳ್ಳಲು ಆಗಲಿಲ್ಲ ಎನ್ನುವುದರ ಬಗ್ಗೆ ಸಂಶೋಧನೆ ಮಾಡಬೇಕು. ಅದನ್ನು ಮಾಡಿದರೆ, ನಾಳೆ ಇರಿತಹುದೇ ಮಕ್ಕಳು ಸಾಯುವುದನ್ನು ತಪ್ಪಿಸಲಿಕ್ಕೆ ಆಗುತ್ತದೆ. ಅದಕ್ಕೆ ನಿಮ್ಮ ಮಗುವಿನ ದೇಹದ ಶವಪರೀಕ್ಷೆ ಮಾಡಬೇಕು. ಇದೀ ದೇಹ ವಿಕಾರವಾಗುವುದಿಲ್ಲ, ಓಪನ್ ಮಾಡಿ, ಕೆಲವು ಸಣ್ಣ ಪೀಸ್‌ಗಳನ್ನು ಮಾತ್ರ ತೆಗೆದುಕೊಂಡು, ನಂತರ ನೀಟಾಗಿ ಹೊಲಿಗೆ ಹಾಕಿ ಕೊಡ್ತಾರೆ. ನೀವಿದಕ್ಕೆ ಒಪ್ಪಿಗೆ ಕೊಡಬೇಕು'. ಸಮಾಧಾನದಲ್ಲಿ, ಹೆತ್ತವರ ನೋವಿನಲ್ಲೂ ಭಾಗಿಯಾಗಿ ಹೇಳುತ್ತಿದ್ದ ಇಂತಹ ಮಾತುಗಳಿಗೆ ಸಾಮಾನ್ಯವಾಗಿ ಕರಗುತ್ತಿದ್ದರು. ಒಪ್ಪಿಗೆ ಕೊಟ್ಟು ಶವಪರೀಕ್ಷೆಗೆ ಅನುವು ಮಾಡಿಕೊಡುತ್ತಿದ್ದರು.

ವೈದ್ಯಕೀಯ ಜ್ಞಾನವು ಸಾಮಾನ್ಯರಿಗೆ ಅಷ್ಟಾಗಿ ಇರದ ಕಾರಣಕ್ಕೆ ಮತ್ತು ಅದನ್ನು ಸೂಕ್ತವಾಗಿ ಎಲ್ಲರಿಗೂ ವಿವರಿಸಿ ಹೇಳುವ ಉತ್ಸುಕತೆ ವೈದ್ಯ ಸಮುದಾಯಕ್ಕೆ ಇಲ್ಲದ ಕಾರಣಕ್ಕೆ ಹಲವು ಮಿಥ್ಯೆಗಳು ಜನರಲ್ಲಿ ಚಾಲ್ತಿಯಲ್ಲಿವೆ. ಅಂತಹುದರಲ್ಲಿ ಒಂದು ಇಡೀ ದೇಹವನ್ನು ಸಂಶೋಧನೆಗೆ ನೀಡುವುದೂ ಸೇರಿಕೊಂಡಿದೆ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ತಲೆಯ ಕುರಿತಾಗಿಯೂ ಇಂತಹ ಒಂದು ದಂತಕಥೆ ಅಲ್ಲಲ್ಲಿ ಕೇಳಿಬರುತ್ತದೆ. ಅವರ ತಲೆ ಬಹಳ ಜೀನಿಯಸ್ ತಲೆಯಾಗಿದ್ದರಿಂದ, ಅವರು ಸತ್ತಾಗ ಮೆದುಳನ್ನು ತೆಗೆದು ಸಂಶೋಧನೆಗೆ ತೆಗೆದುಕೊಂಡರಂತೆ ಎಂದು ಹಲವರು ಹೇಳುವುದನ್ನು ಕೇಳಿದ್ದೇನೆ.

ವ್ಯಕ್ತಿಗತವಾಗಿ ಹತ್ತಿರದ್ದಾಗಿದ್ದ ಒಂದು ಕುಟುಂಬದ ಮಹಿಳೆ ಈಚೆಗೆ ತೀರಿಕೊಂಡರು. ಐವತ್ತು ವರ್ಷವೂ ಮುಟ್ಟಿರದ ಆಕೆಗೆ ಕಾಯಿಲೆ ಹತ್ತಿಕೊಂಡಾಗ ನೋಡದೇ ಹೋದದ್ದು ಇನ್ನೂ ಬಹಳ ವರ್ಷ ಕಾಡುತ್ತಿರುತ್ತದೆ. ಏಕೆಂದರೆ, ಕಾಯಿಲೆ ಗೊತ್ತಾದ ಕೇವಲ 20 ದಿನಗಳಲ್ಲಿ ಅವರು ತೀರಿಕೊಂಡರು. ಈ ರೀತಿಯಾಗಿ ಸತ್ತಾಗ ಅವರ ಮಗಳು 'ಸಂಶೋಧನೆಗಾಗಿ ದೇಹವನ್ನು ಕೊಡೋಣ. ತಾಯಿ ಏಕೆ ಸತ್ತರೆಂದು ಇದರಿಂದ ಗೊತ್ತಾಗುತ್ತದೆ' ಎಂದು ಹೇಳಿದರು. ಸೂಕ್ತ ವೈದ್ಯಕೀಯ ಮಾರ್ಗದರ್ಶನವಿಲ್ಲದೇ, ಸಂಶೋಧನೆಗೆ ಅನುಕೂಲವಾಗಬಹುದಾಗಿದ್ದ ಪೋಸ್ಟ್‌ಮಾರ್ಟಂ ಸಹ ನಡೆಯಲಿಲ್ಲ, ನಮ್ಮಲ್ಲಿ ಅಸಲೀ ವೈಜ್ಞಾನಿಕ ಸಂಗತಿಗಳಿಗಿಂತ ವೇಗವಾಗಿ ಮತ್ತು ವ್ಯಾಪಕವಾಗಿ ಅರ್ಧ ಸತ್ಯಗಳು, ವದಂತಿಗಳು ಮತ್ತು ದಂತಕತೆಗಳು ಹರಡುತ್ತವೆ. ಇದು ವಿಜ್ಞಾನದ ಬೆಳವಣಿಗೆಯನ್ನೂ ಕುಂಠಿತಗೊಳಿಸಿವೆ.

ಇರಲಿ, ಈಗ ದೇಹದಾನ ಮಾಡಲಿಚ್ಛಿಸಿದ ತಾಯಿಯ ವಿಚಾರಕ್ಕೆ ಮರಳಿ ಬರೋಣ. ಅವರು ದೇಹದಾನ ಮಾಡಲು ಬಯಸಿದ್ದು ಇವ್ಯಾವ ಕಾರಣಕ್ಕೂ ಅಲ್ಲ. 'ನಾನು ಸತ್ತ ನಂತರ ನನ್ನ ಮಗ ಅಂತ್ಯಸಂಸ್ಕಾರ ಮಾಡಬಾರದು. ನಾನು ಈ ಬಗ್ಗೆ ದೃಢನಿಶ್ಚಯ ಮಾಡಿದ್ದೇನೆ. ಹಾಗಾಗಿ ದೇಹ ಮೆಡಿಕಲ್ ಕಾಲೇಜಿಗೆ ಹೋಗಲಿ'. ಈ ರೀತಿಯೂ ದೇಹದಾನ ಮಾಡುವವರು ಇದ್ದಾರೆಯೇ ಎಂದು ವಿಷಾದವೆನ್ನಿಸಿತು. ಆದರೆ ಅದು ಅವರ ಆಯ್ಕೆಯಾಗಿತ್ತು. ಈಚಿನ ದಿನಗಳಲ್ಲಿ ದೇಹದಾನ ಮಾಡುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಅವರಲ್ಲಿ ಬಹುತೇಕರು ನಾಸ್ತಿಕರಾಗಿರುತ್ತಾರೆ. ಭೌತಿಕವಾದೀ ದೃಷ್ಟಿಕೋನದಿಂದ ನೋಡಿ, ಸತ್ತ ನಂತರ ಈ ದೇಹ ಒಂದು ನಿರ್ಜೀವ ವಸ್ತುವಷ್ಟೇ. ಅದರ ಉಪಯೋಗ ಮನುಷ್ಯಕುಲಕ್ಕಾಗಲಿ ಎಂಬ ಅನಿಸಿಕೆ ಅವರದ್ದಾಗಿರುತ್ತದೆ. ಪರಮ ಧಾರ್ಮಿಕರಾಗಿದ್ದೂ, ದೇಹಕ್ಕೆ 'ಸಂಸ್ಕಾರ' ಮಾಡದೇ ಅದು 'ಉಪಯೋಗವಾಗಲಿ' ಎಂಬ ನೆಲೆಯಿಂದ ಮುಂದಾಗುವುದು ಪಾರ್ಸಿ ಸಮುದಾಯ. ಹಿಂದೆ ಬೆಟ್ಟದ ಮೇಲೆ ಒಂದು ಕಡೆ ದೇಹವನ್ನು ಇಟ್ಟು ಪಕ್ಷಿಗಳು ತಿನ್ನಲಿ ಎಂದು ಬಿಟ್ಟು ಬಿಡುತ್ತಿದ್ದರು. ಭಾರೀ ಶ್ರೀಮಂತರು ಇರುವ ಈ ಸಮುದಾಯವು ಈಗೀಗ ದೊಡ್ಡ ನಿವೇಶನದಲ್ಲಿ ಎತ್ತರದ ಕಾಂಪೌಂಡ್ ಕಟ್ಟಿ, ಅದರೊಳಗೆ ದೇಹವನ್ನು ಇಟ್ಟು ಪಕ್ಷಿಗಳಿಗೆ ಆಹಾರವಾಗಲಿ ಎಂದು ಬಿಡುವುದು ನಡೆಯುತ್ತಿದೆ.

ಕಮಲಮ್ಮನವರಿಗೆ ಪರಿಚಯವಿದ್ದ ವೈದ್ಯನಾಗಿ, ಅವರನ್ನು ಮೆಡಿಕಲ್ ಕಾಲೇಜಿಗೆ ಕರೆದುಕೊಂಡು ಹೋದೆ. ಅಂಗರಚನಾಶಾಸ್ತ್ರ ವಿಭಾಗದ ಮುಖ್ಯಸ್ಥರು ಅಗತ್ಯವಿದ್ದ

ಪ್ರಕ್ರಿಯೆಯನ್ನು ಮುಗಿಸಿದರು. 'ನೀವು ಬಹಳ ಉ...
ತೀರ್ಮಾನ ತೆಗೆದುಕೊಂಡಿದ್ದೀರಿ. ನಿಮಗೆ ಒಳ್ಳೆ...
ದೀರ್ಘ ಆಯಸ್ಸು ನಿಮಗೆ ದೇವರು ಕರುಣಿಸಲಿ...
ಕೈಮುಗಿದು ಹೇಳಿದರು. ದೇಹದಾನಕ್ಕೆ ಒಪ್ಪಿಗೆ...
ಫಾರಂನಲ್ಲೂ, ಈ ದೀರ್ಘಾಯುಸ್ಸಿನ ಆಶ...
ಬರೆಯಲಾಗಿರುತ್ತದೆ. ಸದ್ಯ ನಮ್ಮ ವಿಜ್ಞಾನದ...
ಇಷ್ಟು ಸಂವೇದನೆಯನ್ನು ಹೊಂದಿವೆ. ದೇ...
ಮಾಡುತ್ತೇನೆಂದು ಬರೆದುಕೊಟ್ಟ ವ್ಯಕ್ತಿ ಎಷ್ಟು ಬೆ...
ಅಷ್ಟು ಒಳ್ಳೆಯದು ಅಂತ ಭಾವಿಸದೇ, ಅಂತಹ...
ತೀರ್ಮಾನ ತೆಗೆದುಕೊಂಡ ವ್ಯಕ್ತಿ ದೀರ್ಘ ಕಾ...
ಬದುಕಬೇಕು ಎಂದು ಆಶಿಸಲಾಗುತ್ತದೆ...
ಕಮಲಮ್ಮನವರೂ ಫಾರಂಗಳನ್ನು ಓದಿ ಸಹಿ ಹಾ...
ಈಗ ಎರಡು ತಿಂಗಳ ಕೆಳಗೆ ಅವರು ತೀರಿಕೆ...
ಅವರನ್ನು ಮುತುವರ್ಜಿಯಿಂದ ನೋಡಿಕೊ...
ಮನೆಯವರು, ತಾಯಿಯ ಆಶೆಯಂತೆ ದೇಹವ...
ಮಾಡಿದರು.

'ಪತ್ರಿಕೆ'ಗೆ ಅಂಕಣ ಬರೆಯುತ್ತಿರುವ ಯ...
ಮಾಸ್ತರ್ ಅವರೂ ಈಚೆಗೆ ತಮ್ಮ ತಾ...
ಮೃತದೇಹವನ್ನು ದಾನ ಮಾಡಿದರು. ಇದೇ...
ತೀರಿಕೊಂಡ ಮೈಸೂರಿನ ಕ್ರಾಂತಿಕಾರಿ ಪೆ...
ರಾಮಲಿಂಗಂ ಅವರ ಇಚ್ಛೆಯಂತೆ ಅವರ ದೇ...
ಮೆಡಿಕಲ್ ಕಾಲೇಜಿಗೆ ನೀಡಲಾ...
ಅನಂತಮೂರ್ತಿಯವರ 'ಸಂಸ್ಕಾರ'ವು ವಿವಾದಕ್ಕೆ...
ಮೇಲೆ, ಇದುವರೆಗೂ ತಮ್ಮ ಮರಣೋತ್ತರ ಸಂದ...
ಅಷ್ಟಾಗಿ ತಲೆಗೆ ಹಚ್ಚಿಕೊಳ್ಳದಿದ್ದ ಹಲವು ...
ದೇಹದಾನದ ಬಗ್ಗೆ ಗಂಭೀರವಾಗಿ ಯೋಚಿಸು...

ತೀವ್ರವಾದ ದುಃಖದ ಸಂದರ್ಭವಾದ...
ಹೊತ್ತಿನಲ್ಲಿ ಜೀವವಿಲ್ಲದ ದೇಹದ ಉಪಯೋಗದ...
ಯೋಚಿಸುವುದು ಅಷ್ಟೇನೂ ಸುಲಭವಲ್ಲದ ಸಂಗತಿ...
ದಾವಣಗೆರೆಯಿಂದ ವರದಿ ಬರೆಯುತ್ತಿದ್ದ ಚಂ...
ತೋರಣಘಟ್ಟ, ಅವರ ಕುಟುಂಬದ ಒಂದು...
ದುರಂತದ ಸಂದರ್ಭದಲ್ಲಿ, ಅವರ ಸಂಗಾತಿ ಯ...
ಅವರು ತೋರಿದ ವಿವೇಕ ನಮ್ಮೆಲ್ಲರಲ್ಲಿ ಅವರ...
ಗೌರವವನ್ನು ಮತ್ತಷ್ಟು ಹೆಚ್ಚಿಸಿತು. ಒಂದು...
ಹೆಚ್ಚು ಕಾಲ ಕೋಮಾ ಸ್ಥಿತಿಯಲ್ಲಿದ್ದ ಅವರ ಮಗ...
ಆಸ್ಪತ್ರೆಯಲ್ಲಿ ತೀರಿಕೊಂಡ. ಸಾವು ನಿರೀಕ್ಷಿತವ...
ಅದನ್ನು ಸ್ವೀಕರಿಸುವುದು ಸುಲಭವಾಗಿರಲಿಲ್ಲ, ಅದು...
ಆದೇ ಆಸ್ಪತ್ರೆಯಲ್ಲಿ ಅವರ ಜೀವನ ಸಂಗಾತಿ ಶಸ್ತ್ರ...
ಅರಿವಳಿಕೆಯಿಂದ ಚೇತರಿಸಿಕೊಳ್ಳದೇ ಐಸಿ...
ಅಪ್ರಜ್ಞಾವಸ್ಥೆಯಲ್ಲಿದ್ದರು. ಆರಂಭಿಕ ಷಾಕ್‌ನಿಂದ...
ಯಶೋದಾ ಅವರು ನಂತರದ ಒಂದೆರಡು ಗ...
ಸ್ಥಿಮಿತಕ್ಕೆ ಬಂದು, ಅವನ ಕಣ್ಣುಗಳನ...
ಮಾಡಬಹುದಾ ಎಂದು ಕೇಳಿದರು. ಅದರ...
ಎರಡು ಗಂಟೆಗಳಲ್ಲಿ ಆ ಎರಡು ಕಣ್ಣುಗಳನ...
ಆಸ್ಪತ್ರೆಯವರು ಬಂದು ತೆಗೆದುಕೊಂಡು ಹ...
ಆದೇ ದಿನ ಸಂಜೆ ಇಬ್ಬರು ಅಂಧರಿಗೆ...
ಜೋಡಿಸಲಾಯಿತು.

ಅಲ್ಲಿಂದ ವಾರದ ನಂತರ ಪ್ರಜ್ಞೆಗೆ...
ಚಂದ್ರಶೇಖರ್‌ರಿಗೆ ಸುಮಾರು 2 ವಾರ ಮಗ...
ಸುದ್ದಿ ತಿಳಿಸಿರಲಿಲ್ಲ. ಅದು ತಿಳಿದ ನಂತರ...
ಖಿನ್ನರಾದರು. ಆದರೆ, ತಮ್ಮ ಮಗನ ಕಣ್ಣು...
ಸಂದರ್ಭದಲ್ಲೂ ದಾನ ಮಾಡುವ ತಿ...
ತೆಗೆದುಕೊಂಡಿದ್ದು ಅವರಿಗೆ ಸಮಾಧಾನ...
ಇಂತಹವುಗಳಿಂದ, ನಮ್ಮ ಇಡೀ ಸಮಾಜ...
ವೈಚಾರಿಕವಾಗಿ, ವೈಜ್ಞಾನಿಕವಾಗಿ ಯೋಚಿಸು...
ಹಾಗೂ ಇನ್ನಷ್ಟು ಮಾನವೀಯವಾದ ಸ...
ನಿರ್ಮಾಣದ ಸಾಧ್ಯತೆಯ ಕುರಿತು ನಮ್ಮೆಲ್ಲರ...
ಸಾಕಾರವಾಗಬಹುದು ಎಂಬ ಆಶಾವಾದ ಹೆ...

ಪ್ರಾಣತೆತ್ತ ಅಮಾಯಕ ಮಕ್ಕಳು ನಮ್ಮವರಿಗೆ ಪಾಠವನ್ನು ಕಲಿಸಲಿ...

ಪೇಶಾವರದಲ್ಲಿ ನಡೆದಿರುವ ಅಮಾಯಕ ಮಕ್ಕಳ ...ಹೋಮ ಎಂಥವರನ್ನೂ ಬೆಚ್ಚಿಬೀಳಿಸುವಂತಿದೆ. ...ಕ್ಕಳು ಯಾವ ದೇಶದವರು, ಯಾವ ಧರ್ಮದವರು, ಸಮುದಾಯದವರು ಎಂಬುದೆಲ್ಲ ಅಮುಖ್ಯವಾಗಿ ನಮ್ಮ ಮಕ್ಕಳೇ ಎಂಬಂತೆ ಎಲ್ಲರ ಮನ ...ಯುತ್ತಿದೆ, ಕಣ್ಣೀರು ಹರಿಯುತ್ತಿದೆ. ಯಾವ ...ಧವನ್ನೂ ಮಾಡದ, ಯಾವ ರಾಜಕೀಯದಲ್ಲೂ ...ಲ್ಲದ ಆ ಮುಗ್ಧ ಮಕ್ಕಳ ಮೇಲಾದ ದಾಳಿ ಎಲ್ಲರಲ್ಲಿನ ...ನತ್ವವನ್ನು ಬಡಿದೆಬ್ಬಿಸಿದೆ. ಯಾವ ಧರ್ಮ ಇಂತಹ ...ತ್ಯವನ್ನು, ಯಾವ ದೇವರು ಇಂತಹ ಪೈಶಾಚಿಕತೆಯನ್ನು ...ವಿಸುತ್ತಾನೆ? ದೇವರು ಮತ್ತು ಧರ್ಮದ ಹೆಸರಲ್ಲಿ ...ಬರ್ಬರತೆಯನ್ನು ಎಸಗುವವರನ್ನು ಮನುಷ್ಯರು ...ಕರೆಯಲಾದೀತೆ? ಎಂದೆಲ್ಲ ಪ್ರಶ್ನಿಸುವಂತೆ ಮಾಡಿದೆ. ...ಧರ್ಮ ಎಂಬುದು ಉಗ್ರವಾದವಾದಾಗ, ...ಯಕ್ಕೆ ಅಸ್ತ್ರವಾದಾಗ ಎಂತಹ ಅಪಾಯಗಳು ...ಸುತ್ತವೆ ಎಂಬುದನ್ನೂ ತೋರಿಸಿಕೊಟ್ಟಿದೆ.

...ಮಾಯಕ ಮಕ್ಕಳ ಮಾರಣಹೋಮ ಪಾಕಿಸ್ತಾನದ ಮತ್ತು ಅಲ್ಲಿನ ತೆಹ್ರಿಕ್-ಎ-ತಾಲಿಬಾನ್ ಎಂಬ ...ಮಿ ಸಂಘಟನೆಯ ನಡುವಿನ ಸಂಘರ್ಷದ ಪ್ರತಿಫಲ. ಸೈನ್ಯವು ವಾಜಿಕಿಸ್ತಾನ್ ಪ್ರದೇಶದಲ್ಲಿ ಉಗ್ರವಾದಿಗಳ ...ಮೇಲೆ ದಾಳಿ ಮಾಡಿದಾಗ ತಮ್ಮ ಮಕ್ಕಳು ...ವ ಸೈನ್ಯದಲ್ಲಿರುವವರ ಮಕ್ಕಳು ಓದುವ ಶಾಲೆಯ ದಾಳಿ ಮಾಡಿ ಪ್ರತೀಕಾರ ತೀರಿಸಿಕೊಂಡಿದ್ದೇವೆ ತೆಹ್ರಿಕ್-ಎ-ತಾಲಿಬಾನ್ ಘೋಷಿಸಿದೆ.

...ದರೆ "ಯಾವ ಕಾರಣಕ್ಕೂ ಅಮಾಯಕ ಮಕ್ಕಳ ಸರಿಯಾದದ್ದಲ್ಲ, ಯಾವ ಧರ್ಮವೂ ಇದನ್ನು ...ದಿಲ್ಲ" ಎಂದು ಜಗತ್ತೇ ಇವತ್ತು ಒತ್ತಿ ಹೇಳುತ್ತಿದೆ. ...ವಾಗಿ ದೊಡ್ಡವರ 'ಯುದ್ಧದಾಟ'ದಲ್ಲಿ ಹೀಗೆ ...ಯಕ ಮಕ್ಕಳು ಕೊಲೆಯಾಗಿರುವುದು ಇದು ...ನೇನಲ್ಲ, ಕೊನೆಯದೂ ಅಲ್ಲ. ಅಷ್ಟೇ ಅಲ್ಲ, ಇವತ್ತು ...ವರದ ಮಕ್ಕಳಿಗಾಗಿ ಕಣ್ಣೀರಿಡುತ್ತಿರುವ ಎಲ್ಲರ ...ೂ ಮಕ್ಕಳ ರಕ್ತ ಅಂಟಿಕೊಂಡಿದೆ.

...ಶಾವರ್ ಪ್ರಕರಣದ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ...ನಿಷ್ಕಳಂಕರ ಕಗ್ಗೊಲೆ' ಎಂದು ಕರೆದಿದೆ. ಅದೇ ...ಕ ದೇಶ ವಿಯಟ್ನಾಮ್ ಮೇಲೆ ನೇಪಾಮ್ ಬಾಂಬ್ ...ಗ ಚಿಕ್ಕ ಹುಡುಗಿಯೊಬ್ಬಳು ದೇಹ ಸುಟ್ಟ ನಗ್ನ ...ಲ್ಲಿ ಕಣ್ಣೀರಿಡುತ್ತಾ ಓಡುತ್ತಿರುವ ಚಿತ್ರ ಇನ್ನೂ ಎಲ್ಲರ ...ಲ್ಲಿ ಹಸಿಯಾಗಿಯೇ ಇದೆ. ಅದೇ ಅಮೆರಿಕ ...ಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ...ಬಾಂಬ್ ಸ್ಫೋಟಿಸಿ ಲಕ್ಷಾಂತರ ಜನರನ್ನು-ಮಕ್ಕಳು, ...ಯರು, ವೃದ್ಧರು ಸೇರಿದಂತೆ-ಒಂದೇ ಏಟಿಗೆ ಕೊಂದು ...ಎಲ್ಲರಿಗೂ ಗೊತ್ತು.

...ರ್ಮನಿಯಲ್ಲಿ ಹಿಟ್ಲರ್‌ನ ನಾಜಿ ಸೈನ್ಯ ಪುಟ್ಟ ...ನ್ನೂ ಗ್ಯಾಸ್ ಚೇಂಬರ್‌ಗಳಲ್ಲಿ ಕೊಂದು ಹಾಕಿತ್ತು. ...ಸ್ಥೆಯ ಪ್ರಕಾರ ರುವಾಂಡಾ ದೇಶದಲ್ಲಿ ನಡೆದ ...ಕ ಯುದ್ಧದಲ್ಲಿ ಮೂರು ಲಕ್ಷ ಮಕ್ಕಳು ...ದ್ದರು. ಬಾಸ್ನಿಯಾ ದೇಶದಲ್ಲಿ ನಡೆದ ಯುದ್ಧದಲ್ಲೂ ...ರು ಮಕ್ಕಳು 'ನಾಪತ್ತೆ'ಯಾಗಿದ್ದರು.

...ರಿಯಾ ದೇಶದ ಸರ್ಕಾರವೇ ತನ್ನ ಜನರ ಮೇಲೆ ಗ್ಯಾಸ್ ಸ್ಫೋಟಿಸಿದ ನಂತರ ಸಾಲಾಗಿ ...ಸಲಾಗಿದ್ದ ಪುಟ್ಟಮಕ್ಕಳ ಶವಗಳ ಚಿತ್ರವೂ ನಮ್ಮ ...ದೆ. ಕಳೆದ ಮೂರು ವರ್ಷಗಳಿಂದ ಅಲ್ಲಿ ...ತ್ತಿರುವ ಯುದ್ಧದಲ್ಲಿ -ಯೂನಿಸೆಫ್ ಪ್ರಕಾರ-ಹತ್ತು ...ಮಕ್ಕಳು ಸತ್ತಿದ್ದಾರೆ.

ಇತ್ತೀಚೆಗೆ ಗಾಜಾ ಪಟ್ಟಿಯಲ್ಲಿ ನಡೆದ ಸಂಘರ್ಷದಲ್ಲಿ-ಅರಬ್ಬರ ಮತ್ತು ಯಹೂದಿಗಳ-ಎರಡೂ ಕಡೆ ಮಕ್ಕಳು ಸಾವನ್ನಪ್ಪಿದ್ದರು. ಅಮೆರಿಕ ಈಗಲೂ ಆಫಘಾನಿಸ್ತಾನ ಮತ್ತು ಇರಾಕ್ ಮೇಲೆ ಪ್ರತಿನಿತ್ಯ ನಡೆಸುತ್ತಿರುವ ಡ್ರೋನ್ ದಾಳಿಗಳಲ್ಲಿ ಪುಟ್ಟ ಮಕ್ಕಳೂ ಸಾಯುತ್ತಿದ್ದಾರೆ.

ಅದೆಲ್ಲ ದೂರದ ಮಾತಾಯಿತು. ಭಾರತ ಮತ್ತು ಪಾಕಿಸ್ತಾನಕ್ಕೆ ಬರುವುದಾದರೆ, ನಮ್ಮ ಎರಡೂ ದೇಶಗಳು ಜನ್ಮವೆತ್ತಿದ್ದೇ ರಕ್ತಪಾತದ ಮಧ್ಯೆ. ದೇಶವಿಭಜನೆಯ ಸಮಯದಲ್ಲಿ ಎರಡೂ ಕಡೆ ಅಮಾಯಕ ಮಕ್ಕಳ ಮತ್ತು ಮಹಿಳೆಯರ ಕಗ್ಗೊಲೆಗಳು ಸಂಭವಿಸಿದ್ದವು. ಅದು ಈಗಲೂ ನಿಂತಿಲ್ಲ. ದೆಹಲಿಯ 1984ರ ಸಿಖ್ಖರ ವಿರುದ್ಧದ ಗಲಭೆಯಲ್ಲಿ ನೂರಾರು ಮಕ್ಕಳ ಹೆಣಗಳೂ ಉರುಳಿದ್ದವು. 2002ರ ಗೋಧ್ರಾ ರೈಲು ದುರಂತದಲ್ಲಿ ಬೆಂದು ಕರುಕಲಾದವರಲ್ಲಿ 25 ಮಕ್ಕಳೂ ಇದ್ದವು. ಅದಾದ ನಂತರ ಸಂಭವಿಸಿದ ಕೋಮು ಗಲಭೆಗಳಲ್ಲಿ ಮಕ್ಕಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿತ್ತು, ತಂದೆತಾಯಂದಿರ ಮುಂದೆಯೇ ಅವರ ಮಕ್ಕಳನ್ನು ಕಡಿದು ಹಾಕಲಾಗಿತ್ತು, ಇನ್ನೂ ಜನ್ಮವೆತ್ತದಿರುವ ಭ್ರೂಣಗಳನ್ನು ಗರ್ಭದಿಂದ ಸೀಳಿ ಬೆಂಕಿಗೆ ಎಸೆಯಲಾಗಿತ್ತು... ಆ ಗಲಭೆಗಳಲ್ಲಿ ಮಡಿದ ಸುಮಾರು ಮೂರು ಸಾವಿರ ಜನರಲ್ಲಿ ನೂರಾರು ಮಕ್ಕಳೂ ಇದ್ದರು... ಇನ್ನು ಸ್ವಾತಂತ್ರ್ಯ ಬಂದ ನಂತರ ದೇಶದಾದ್ಯಂತ ಸಂಭವಿಸಿರುವ ನೂರಾರು ಕೋಮು ಗಲಭೆಗಳಲ್ಲಿ, ಭಯೋತ್ಪಾದಕ ಪ್ರಕರಣಗಳಲ್ಲಿ ಸತ್ತ ಮಕ್ಕಳ ಲೆಕ್ಕವಿಟ್ಟವರಿಲ್ಲ.

ಅದಕ್ಕೆ ಅಂದದ್ದು ಎಲ್ಲರ ಕೈಗಳಿಗೂ ಅಮಾಯಕ ಮಕ್ಕಳ ರಕ್ತ ಅಂಟಿದೆ ಎಂದು.

ಆದರೂ ಪೇಶಾವರದ ಪ್ರಕರಣ ನಮ್ಮಲ್ಲಿ ದುಃಖ ಉಮ್ಮಳಿಸುವಂತೆ ಮಾಡಿದೆ. ಈ ಹುಚ್ಚು ಜಗತ್ತಿನಲ್ಲಿ ಏನೂ ತಿಳಿಯದ ಮಕ್ಕಳಿಗೆ ರಕ್ಷಣೆಯೇ ಇಲ್ಲವೆ ಎಂದು ಪ್ರಶ್ನಿಸುವಂತಾಗಿದೆ. ಎಲ್ಲಾ ಧರ್ಮಗಳ ಮೂಲ ಉದ್ದೇಶ ಸಮುದಾಯಗಳನ್ನು ಕಟ್ಟುವುದು, ಸಹಿಷ್ಣುತೆಯನ್ನು ಬೆಳೆಸುವುದು, ಜನರನ್ನು ಒಂದಾಗಿಸುವುದು. ಆದರೆ ಧರ್ಮದ ಹೆಸರಲ್ಲಿ ಇಂತಹ ಕ್ರೌರ್ಯ ಹೇಗೆ ಸಾಧ್ಯವಾಯಿತು? ಅದಕ್ಕೆ ಕಾರಣಗಳೇನು? ಕಾರಣಕರ್ತರಾರು ಎಂದು ನೋಡುವ ಅಗತ್ಯವನ್ನು ಹುಟ್ಟುಹಾಕಿದೆ.

ಧರ್ಮವೆಂಬುದು ದೇಶವೊಂದರ ಅಸ್ತಿತ್ವಕ್ಕೆ ಬುನಾದಿಯಾದರೆ ಅದೆಂತಹ ದುರಂತಕ್ಕೆ ಕಾರಣವಾಗುತ್ತದೆ ಎಂಬುದಕ್ಕೆ ಪಾಕಿಸ್ತಾನಕ್ಕಿಂತ ದೊಡ್ಡ ಉದಾಹರಣೆ ಇನ್ನೊಂದಿರಲಾರದು. ಇವತ್ತು ಅಲ್ಲಿನ ಪ್ರಭಾವಿ ಮುಲ್ಲಾಗಳು ಸರ್ಕಾರದ ಮೇಲೆ, ಕಾರ್ಯಾಂಗದ ಮೇಲೆ, ಸೈನ್ಯದ ಮೇಲೆ, ಕೊನೆಗೆ ನ್ಯಾಯಾಂಗದ ಮೇಲೆಯೂ ಹಿಡಿತ ಸಾಧಿಸಿದ್ದಾರೆ. ಈ ಕಾರಣಕ್ಕೇ ಯಾರಿಗೂ ಅವರನ್ನು ಎದುರು ಹಾಕಿಕೊಳ್ಳುವ ಧೈರ್ಯವಿಲ್ಲ, ಹಾಗೆ ಧೈರ್ಯ ತೋರಿದವರ ಕೊಲೆಗಳು ಹಾಡುಹಗಲೇ ನಡೆಯುತ್ತದೆ.

ರಾಜಕಾರಣಿಗಳೂ ಉಗ್ರರನ್ನು ಬೆಂಬಲಿಸುತ್ತಲೇ ಬಂದಿದ್ದಾರೆ. ಒಂದೆಡೆ ನವಾಜ್ ಶರೀಫರ ಸರ್ಕಾರ ಮುಂಬೈ ಮೇಲಿನ ದಾಳಿಗೆ ಕಾರಣನಾಗಿದ್ದ ಹಫೀಜ್ ಸಯೀದ್ ಎಂಬ ಭಯೋತ್ಪಾದಕನಿಗೆ ರಕ್ಷಣೆ ಕೊಟ್ಟಿದೆ. ಇನ್ನೊಂದೆಡೆ ಲಷ್ಕರ್-ಎ-ತೊಯ್ಬಾ ಎಂಬ ಸಂಘಟನೆಯನ್ನು ಪೋಷಿಸುತ್ತಿದೆ. ಇದೆಲ್ಲದರೊಂದಿಗೆ ಸೌದಿ ಅರೇಬಿಯಾದಿಂದ ಪಾಕಿಸ್ತಾನದ ಮಸೀದಿಗಳಿಗೆ ಹಣದ ಹೊಳೆಯೇ ಹರಿದುಬರುತ್ತಿದ್ದು ಯುವಕರಲ್ಲಿ 'ಜಿಹಾದ್' ಬಗೆಗಿನ ತಪ್ಪು ಕಲ್ಪನೆಗಳನ್ನು ಬಿತ್ತಿ ಅವರನ್ನೆಲ್ಲ ಉಗ್ರರನ್ನಾಗಿ ಪರಿವರ್ತಿಸಲಾಗುತ್ತಿದೆ. ಇದೆಲ್ಲ ಗೊತ್ತಿದ್ದೂ ಸರ್ಕಾರ ತೆಪ್ಪಗಿದೆ.

ವಿರೋಧ ಪಕ್ಷಗಳಲ್ಲಿ ಪ್ರಮುಖವಾದ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ ಪಕ್ಷದ ನಾಯಕ ಮತ್ತು ಮಾಜಿ ಕ್ರಿಕೆಟಿಗ ಇಮ್ರಾನ್ ಖಾನ್ ಹಿಂದಿನಿಂದಲೂ ಉಗ್ರವಾದಿಗಳ ಬಗ್ಗೆ ಮೃದು ಧೋರಣೆಯನ್ನು ಅನುಸರಿಸುತ್ತಾ ಬಂದಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಮೊನ್ನೆಯ ಕಗ್ಗೊಲೆಗೆ ತಾನೇ ಕಾರಣ ಎಂದು ತೆಹ್ರಿಕ್-ಎ-ತಾಲಿಬಾನ್ ಘೋಷಿಸಿದ ನಂತರವೂ ಆ ಪ್ರಕರಣವನ್ನು ಇಮ್ರಾನ್ ಖಾನ್ ಟೀಕಿಸಿದರೆ ಹೊರತು ಅದಕ್ಕೆ ಕಾರಣವಾದ ಸಂಘಟನೆಯನ್ನು ಖಂಡಿಸುವ ತಾಕತ್ತಾಗಲಿ, ನೈತಿಕ ಶಕ್ತಿಯಾಗಲಿ ಅವರಲ್ಲಿರಲಿಲ್ಲ.

ಇವತ್ತು ಪಾಕಿಸ್ತಾನದಲ್ಲಿ ತಾಲಿಬಾನಿಗಳು ಅಕ್ರಮವಾಗಿ ನ್ಯಾಯಾಲಯಗಳನ್ನು ನಡೆಸುತ್ತಾರೆ. ಅಲ್ಲಿ ಆಸ್ತಿ ವಿವಾದ, ಖಾಸಗಿ ವಿಚಾರಗಳು ಇತ್ಯಾದಿಗಳ ವ್ಯಾಜ್ಯಗಳ ಕುರಿತು 'ತೀರ್ಪು' ನೀಡುತ್ತಾರೆ. ಯಾವನು ಬೇಕಾದರೂ ತಾನೊಬ್ಬ ಮುಲ್ಲಾ ಎಂದು ಘೋಷಿಸಿಕೊಂಡು ಫತ್ವಾಗಳನ್ನು ಹೊರಡಿಸಬಲ್ಲ. ಪರಿಣಾಮವಾಗಿ ಇಂದು ಪಾಕಿಸ್ತಾನದಲ್ಲಿನ ಉಗ್ರರಿಗೆ ಕೇಳುವವರು ಹೇಳುವವರು ಯಾರೂ ಇಲ್ಲದಂತಾಗಿದೆ. ಮಾತ್ರವಲ್ಲ, ಅವರು ಪಾಕಿಸ್ತಾನದ ಮಕ್ಕಳನ್ನೇ ಬರ್ಬರವಾಗಿ ಕೊಲ್ಲುವ ಮಟ್ಟಕ್ಕೆ ಬೆಳೆದು ನಿಂತಿದ್ದಾರೆ.

ಇಷ್ಟೆಲ್ಲ ಹೇಳಿದ್ದಕ್ಕೆ ಕಾರಣವಿದೆ. ಅದೇನೆಂದರೆ ಭಾರತದ ಜಾತ್ಯತೀತರು ಹಿಂದೂತ್ವವಾದಿಗಳ ಮೂಲಭೂತವಾದವನ್ನು ವಿರೋಧಿಸಿದಾಗಲೆಲ್ಲ ಅವರಿಂದ ಕೂಡಲೆ ಬರುವ ಪ್ರತಿಕ್ರಿಯೆ "ನಿಮ್ಮನ್ನೆಲ್ಲ ಪಾಕಿಸ್ತಾನಕ್ಕೆ ಕಳುಹಿಸಿದರೆ ನಿಮಗೆ ಬುದ್ಧಿ ಬರುತ್ತದೆ." ಜಾತ್ಯತೀತರ ಎಚ್ಚರಿಕೆಯ ಹಿಂದಿರುವುದು "ಭಾರತ ಪಾಕಿಸ್ತಾನವಾಗಬಾರದು" ಎಂಬ ಕಾಳಜಿ ಆ ಬುದ್ಧಿಹೀನರಿಗೆ ಅರ್ಥವಾಗುವುದಿಲ್ಲ. ಅವರೆಲ್ಲ ಜಾತ್ಯತೀತರ ಎಚ್ಚರಿಕೆಯ ಮಾತನ್ನು ಕೇಳುವುದಿಲ್ಲ, ಆದರೆ ಪಾಕಿಸ್ತಾನದಲ್ಲಾಗುತ್ತಿರುವುದನ್ನು ನೋಡಿಯಾದರೂ ಅವರಿಗೆ ಬುದ್ಧಿ ಬರಲಿ ಎಂಬ ಆಶಯವಂತೂ ಜಾತ್ಯತೀತರಲ್ಲಿ ಇದೆ.

ಆದರೆ ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ಅದು ಸುಲಭ ಸಾಧ್ಯವಲ್ಲ ಎನಿಸುತ್ತಿದೆ. ಪಾಕಿಸ್ತಾನದಲ್ಲಿ ಅದೆಷ್ಟು ಮುಲ್ಲಾಗಳು ಶಾಸಕರು ಮತ್ತು ಸಂಸದರು ಆಗಿದ್ದಾರೋ ಗೊತ್ತಿಲ್ಲ ಆದರೆ ಭಾರತದಲ್ಲಿ ಕಾವಿ ತೊಟ್ಟಿರುವ ಹಲವಾರು ಸ್ವಾಮಿಗಳು ಮತ್ತು ಸಾಧ್ವಿಗಳು ಇವತ್ತು ಹಲವಾರು ರಾಜ್ಯಗಳಲ್ಲಿ ಶಾಸಕರಾಗಿದ್ದಾರೆ, ಕೇಂದ್ರದಲ್ಲಿ ಸಂಸದರೂ, ಮಂತ್ರಿಗಳೂ ಆಗಿದ್ದಾರೆ. ಕಾವಿ ತೊಡುವ ಮೂಲಕ ಎಲ್ಲವನ್ನೂ ತ್ಯಜಿಸುವ ಜನ ಯಾಕೆ ಅಧಿಕಾರದಲ್ಲಿದ್ದಾರೆ ಎಂಬ ಪ್ರಶ್ನೆಯೇ ನಮ್ಮ ಜನರನ್ನು ಕಾಡದಿರುವುದು ಅಚ್ಚರಿ ಮೂಡಿಸುತ್ತದೆ.

ಇರಲಿ, ಇತ್ತೀಚೆಗೆ ಹಲವು ಸ್ವಾಮಿಗಳು ಮತ್ತು ಸಾಧ್ವಿಗಳು ಆಡಿರುವ ಮಾತನ್ನು ಗಮನಿಸುವುದು ಅಗತ್ಯವೆನಿಸುತ್ತದೆ. ಕೇಂದ್ರದಲ್ಲಿ ಮಂತ್ರಿಣಿಯಾಗಿರುವ ಸಾಧ್ವಿ ನಿರಂಜನ ಜ್ಯೋತಿ ಎಂಬಾಕೆ "ಹರಾಮ್‌ಜಾದೆಗಳು ಅಧಿಕಾರಕ್ಕೆ ಬರಬೇಕೆ?" ಎಂದು ಪ್ರಶ್ನಿಸುವ ಮೂಲಕ ಎಲ್ಲ ಅಲ್ಪಸಂಖ್ಯಾತ ಸಮುದಾಯಗಳನ್ನು ಅವಮಾನಿಸಿದ್ದಾಳೆ. ಸಾಕ್ಷಿ ಮಹಾರಾಜ್ ಎಂಬ ಮತ್ತೊಬ್ಬ ಕಾವಿಧಾರಿ ಸಂಸದ ಮಹಾತ್ಮ ಗಾಂಧಿಯನ್ನು ಕೊಂದ ಗೋಡ್ಸೆಗೆ 'ದೇಶಭಕ್ತ' ಸ್ಥಾನವನ್ನು ನೀಡಿದ್ದಾನೆ. ಸ್ವಾಮಿ ಯೋಗಿ ಆದಿತ್ಯನಾಥ್ ಎಂಬ ಇನ್ನೂ ಒಬ್ಬ 'ಸನ್ಯಾಸಿ' ಸಂಸದ ಉತ್ತರ ಪ್ರದೇಶದಲ್ಲಿ ಕಪೋಲಕಲ್ಪಿತ 'ಲವ್ ಜಿಹಾದ್' ಎಂಬ ಭೂತವನ್ನು ಹರಿಬಿಟ್ಟು ಕೋಮು ಗಲಭೆಗಳಿಗೆ ಕಾರಣನಾಗಿದ್ದಾನೆ.

ಇವರೆಲ್ಲರೂ ಹಿಂದೂತ್ವ ಮೂಲಭೂತ ಸಂಘಟನೆಯಾದ ಆರೆಸ್ಸೆಸ್‌ನ ರಾಜಕೀಯ ಮುಖವಾಡವಾಗಿರುವ ಬಿಜೆಪಿಯ ಸದಸ್ಯರು. ಇವರಲ್ಲದೆ, ಇತ್ತೀಚೆಗೆ ಉತ್ತರ ಪ್ರದೇಶದ ರಾಜ್ಯಪಾಲ ರಾಮ್ ನಾಯಕ್ (ಈತನೂ ಆರೆಸ್ಸೆಸ್ ಹಿನ್ನೆಲೆಯವನು) "ಯಾರು ಎಷ್ಟೇ ವಿರೋಧಿಸಿದರೂ ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ನಿರ್ಮಿಸಲೇ ಬೇಕು" ಎಂದಿದ್ದಾನೆ. ಇದೇ ಹೊತ್ತಿಗೆ ಸುಷ್ಮಾ ಸ್ವರಾಜ್ ಎಂಬ ಮತ್ತೊಬ್ಬ ಬಿಜೆಪಿ ನಾಯಕಿ "ಭಗವದ್ಗೀತೆ ರಾಷ್ಟ್ರೀಯ ಧರ್ಮ ಗ್ರಂಥವಾಗಬೇಕು" ಎಂದಿದ್ದಾಳೆ. ಕಂಡಕಂಡವರ ಮುಂದೆ ತನ್ನ ಹಸ್ತಗಳನ್ನು ಚಾಚಿ ಭವಿಷ್ಯ ಕೇಳುವ ಸ್ಮೃತಿ ಇರಾನಿ ಎಂಬ ಇನ್ನೊಂದು ಹೆದ್ದ ಶಿಖಾಮಣಿ ಶಾಲೆಗಳಲ್ಲಿ ಸಂಸ್ಕೃತವನ್ನು ಕಡ್ಡಾಯ ಮಾಡುವ ಪ್ರಯತ್ನ ಮಾಡಿದ್ದಾಳೆ. ಜೊತೆಗೆ ಕ್ರಿಸ್ಮಸ್ ಹಬ್ಬದ ದಿನದಂದು ಶಾಲೆ-ಕಾಲೇಜುಗಳಿಗೆ ರಜೆ ಕೊಡದೆ ಆ ದಿನವನ್ನು ಮಾಜಿ ಪ್ರಧಾನಿ ವಾಜಪೇಯಿ ಮತ್ತು ಹಿಂದೂತ್ವವಾದಿಗಳ ಪ್ರಮುಖ ನಾಯಕರಲ್ಲಿ ಒಬ್ಬನಾಗಿದ್ದ ಮದನ್ ಮೋಹನ್ ಮಾಳ್ವಿಯಾ ನೆನಪಲ್ಲಿ 'ಸಮರ್ಥ ಆಡಳಿತ ದಿನ'ವಾಗಿ ಆಚರಿಸಬೇಕೆಂಬ ಸುತ್ತೋಲೆಯನ್ನೂ ಹೊರಡಿಸಿದ್ದಳು.

ಇದೆಲ್ಲದರ ಬೆನ್ನಲ್ಲೇ ವಿಶ್ವ ಹಿಂದೂ ಪರಿಷತ್ 'ಘರ್ ವಾಪಸಿ' ಎಂಬ ತನ್ನ ಮತಾಂತರ ಕಾರ್ಯಕ್ರಮಕ್ಕೆ ಜನರಿಂದ ಚಂದಾ ಸಂಗ್ರಹಿಸುತ್ತಿದೆಯಲ್ಲದೆ ಇತ್ತೀಚೆಗೆ ಹಲವು ಬಡ ಮತ್ತು ಅಸಹಾಯಕ ಮುಸಲ್ಮಾನರಿಗೆ ರೇಷನ್ ಕಾರ್ಡ್ ತರಹದ ಆಮಿಷ ಒಡ್ಡಿ 'ಹಿಂದೂ' ಧರ್ಮಕ್ಕೆ ಮತಾಂತರಿಸಿದೆ. ತಮಾಷೆಯ ಸಂಗತಿಯೆಂದರೆ ಜಾತಿಯನ್ನೇ ಆಧಾರವಾಗಿಟ್ಟುಕೊಂಡಿರುವ, ಅಸ್ತಿತ್ವದಲ್ಲೇ ಇಲ್ಲದ ಈ 'ಹಿಂದೂ ಧರ್ಮ'ದಲ್ಲಿ ಈ ಮತಾಂತರಗೊಂಡವರು ಯಾವ ಜಾತಿಯನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದು ಎಂದು ವಿಎಚ್‌ಪಿಯ ನಾಯಕನೊಬ್ಬ ಹೇಳಿದ್ದಾನೆ. ಹಾಗೊಮ್ಮೆ ಮಾಜಿ ಮುಸಲ್ಮಾನನೊಬ್ಬ ಈಗ ಹಾಲಿ ಮಾಧ್ವ ಬ್ರಾಹ್ಮಣನಾಗಲು ನಿರ್ಧರಿಸಿದರೆ ನಮ್ಮ ಪೇಜಾವರ ಶ್ರೀಗಳ ಪ್ರತಿಕ್ರಿಯೆ ಏನಾಗಿರುತ್ತದೆ ಎಂಬ ಕುತೂಹಲ ನನಗಂತೂ ಇದೆ!

ಪಾಕಿಸ್ತಾನದಲ್ಲಿ ಭುಟ್ಟೋ ಪ್ರಧಾನಿ ಆಗಿದ್ದಾಗ ಹೇಗೆ ಅಲ್ಲಿ ಮುಲ್ಲಾಗಳು ಚಿಗುರಿದ್ದರೋ ಹಾಗೆ ಭಾರತದಲ್ಲಿ 70ರ ದಶಕದಲ್ಲಿ ಮೊದಲ ಬಾರಿಗೆ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಹಿಂದೂ ಮೂಲಭೂತವಾದಿಗಳು ಚಿಗುರಿದ್ದರು. ಅಲ್ಲಿ ಹೇಗೆ ಜಿಯಾ ಉಲ್ ಹಕ್ ತನ್ನ ರಾಜಕೀಯ ಲಾಭಕ್ಕಾಗಿ ಮುಲ್ಲಾಗಳನ್ನು ಪ್ರೋತ್ಸಾಹಿಸಿದನೋ ಹಾಗೆ ಇಲ್ಲೂ ವಾಜಪೇಯಿ ಕಾಲದಲ್ಲಿ ಆರೆಸ್ಸೆಸ್ ಅನ್ನು ಪ್ರೋತ್ಸಾಹಿಸಲಾಗಿತ್ತು. ಆ ದೇಶದಲ್ಲಿ ಹೇಗೆ ನಿಧಾನವಾಗಿ ಮುಲ್ಲಾಗಳು ಅಧಿಕಾರವನ್ನು ಚಲಾಯಿಸಲಾರಂಭಿಸಿದರೋ ಇಲ್ಲೂ ಕಳೆದ ದಶಕದಲ್ಲಿ ಹಿಂದೂ ಮೂಲಭೂತವಾದಿಗಳು ಅಕ್ರಮವಾಗಿ ಅಧಿಕಾರ ಚಲಾಯಿಸುತ್ತಾ ಬಂದಿದ್ದಾರೆ.

ಈಗ ತನ್ನ ಜೀವನಪರ್ಯಂತ ಆರೆಸ್ಸೆಸ್‌ನ ಸದಸ್ಯನಾಗಿದ್ದ ಮೋದಿಯೇ ಪ್ರಧಾನಿ ಹುದ್ದೆಯಲ್ಲಿ ಕೂತಿದ್ದಾನೆ. ಆತನ ಬೆನ್ನಿಗೆ ಆರೆಸ್ಸೆಸ್ ನಿಂತಿದ್ದರೆ ಆತನ ಸುತ್ತ ಸ್ವಾಮಿ, ಸಾಧ್ವಿ, ಮಹಾರಾಜ, ಸ್ವರಾಜ್, ಸ್ಮೃತಿ ತರಹದ ಭೂತಗಳು ನೆರೆದಿದ್ದಾವೆ. ಮೋದಿ ಸೇರಿದಂತೆ ಇವರೆಲ್ಲರೂ ಹಿಂದೂತ್ವ ಮೂಲಭೂತವಾದಿಗಳೇ. ಈ ಗುಂಪನ್ನು ನೋಡಿದಾಗ ರಾಜಕೀಯ ಮತ್ತು ಹಿಂದೂತ್ವ ಮೂಲಭೂತವಾದ ಸಂಪೂರ್ಣವಾಗಿ ಬೆರೆತುಹೋಗಿರುವುದು ಸ್ಪಷ್ಟವಾಗುತ್ತದೆ.

ಮುಲ್ಲಾ ಆಗಲಿ, ಪಾದ್ರಿ ಆಗಲಿ, ಪೂಜಾರಿ ಆಗಲಿ, ಅವರ ಸ್ಥಾನ ಮಸೀದಿ, ಚರ್ಚ್ ಮತ್ತು ದೇವಸ್ಥಾನಗಳಿಗೆ ಸೀಮಿತವಾಗಿರಬೇಕು. ಯಾಕೆಂದರೆ ಬಹು ಧರ್ಮ, ಆಚಾರ, ವಿಚಾರ, ಭಾಷೆ, ಸಂಸ್ಕೃತಿ, ಸಮುದಾಯಗಳಿರುವ ಭಾರತದಂತಹ ಜಾತ್ಯತೀತ ದೇಶದಲ್ಲಿ ಸರ್ಕಾರ ಎಂದಿಗೂ ಎಲ್ಲ ಧರ್ಮಗಳಿಂದ ದೂರವಿರಬೇಕು. ಅದಕ್ಕೆ ಬದಲಾಗಿ ಸರ್ಕಾರದ ಜುಟ್ಟು ಮೂಲಭೂತವಾದಿಗಳ ಕೈಗಳಿಗೆ ಹೋದರೆ ಏನಾಗುತ್ತದೆ ಎಂಬುದನ್ನು ಪೇಶಾವರ ತೋರಿಸಿದೆ.

ನಾಳೆ ನಮ್ಮ ದೇಶದಲ್ಲೂ ಇಂತಹದ್ದೊಂದು ದುರಂತ ಸಂಭವಿಸಬಾರದೆಂದರೆ, ನಮ್ಮ ಮಕ್ಕಳೂ ಹತ್ಯೆಯಾಗಬಾರದೆಂದರೆ ಭಾರತ ಪಾಕಿಸ್ತಾನ ಆಗದಂತೆ ಎಲ್ಲರೂ ಎಚ್ಚರ ವಹಿಸಬೇಕಿದೆ. ಮೂಲಭೂತವಾದಿಗಳನ್ನು ಅಧಿಕಾರದಿಂದ ಆದಷ್ಟು ಬೇಗನೆ ಒದ್ದೋಡಿಸಬೇಕಿದೆ.

ಪೇಶಾವರದಲ್ಲಿ ಪ್ರಾಣತೆತ್ತ ಅಮಾಯಕ ಮಕ್ಕಳು ನಮ್ಮ ದೇಶದವರಿಗೆ ಅಷ್ಟಾದರೂ ಪಾಠವನ್ನು ಕಲಿಸಲಿ... ●

ಕಂಡಹಾಗೆ



● ಗೌರಿ ಲಂಕೇಶ್
editorlankesh@gmail.com

ಪೇಶಾವರ ಮಕ್ಕಳಿಗೆ ಮರುಗುತ್ತಿರುವ ಭಾರತದ ಮಕ್ಕಳು



ವೈದ್ಯಕೀಯ ಪರೀಕ್ಷೆಯಲ್ಲಿ ಸಿಕ್ಕಿತು ಸ್ವಾಮಿ ಪ್ರಸಾದ



ಇಂಥ ನಡತೆಗೆಟ್ಟವ ಗುರುಪೀಠದಲ್ಲಿ ಇರಬೇಕಾ? ಇಂಥವನ ಪಾದಪೂಜೆ ಮಾಡಬೇಕಾ? ಸ್ತ್ರೀ ಮೋಹದಲ್ಲಿ ಟೊಳ್ಳಾಗಿರುವ ಸ್ವಾಮಿಯಿಂದ ಮಂತ್ರಾಕ್ಷತೆ ಪಡೆದರೇನು ಫಲ? ಮಠ-ಪೀಠ ಬಗೆಗಿನ ಶ್ರದ್ಧಾಭಕ್ತಿಯಿಂದ ತನ್ನ ಬಳಿ ಬಂದ ಎರಡು ಬೆಳೆದು ನಿಂತ ಹೆಣ್ಮಕ್ಕಳ ತಾಯಿಯನ್ನು ನಂಬಿಸಿ-ವಶೀಕರಿಸಿ ಲೈಂಗಿಕ ಅತ್ಯಾಚಾರ ನಡೆಸಿದ ಕಳ್ಳ ಸ್ವಾಮಿಯಿಂದ ಪೀಠ ಮಲೀನ ಆಗಿಲ್ಲವಾ? ಇದೆಲ್ಲಾ ಯೋಚಿಸಬೇಕಾಗಿರುವುದು ಬ್ರಾಹ್ಮಣ ಬುದ್ಧಿವಂತರು!





ರಾಮಚಂದ್ರಾಪುರ ಮಠದ ಸೋಗಲಾಡಿ ಸ್ವಾಮಿ ರಾಘವ ತನ್ನ ರಾಮಕಥಾ ನಾಟಕ ಮಂಡಳಿಯ ಗಾಯಕಿಯ ಒಳ ಬಟ್ಟೆಗಳಲ್ಲಿ ಇಟ್ಟ 'ಪ್ರಸಾದ'ವೇ ಈಗಾತನಿಗೆ ಗಂಡಾಂತರಕಾರಿಯಾಗಿ ಪರಿಣಮಿಸಿದೆ! ಧಾರ್ಮಿಕ ಮತ್ತು ಭಾವನಾತ್ಮಕ ಬ್ಲ್ಯಾಕ್‌ಮೇಲ್ ಹದವಾಗಿ ಪ್ರಯೋಗಿಸಿ ಅಮಾಯಕ ಗಾಯಕಿ ಪ್ರೇಮಲತಾರನ್ನು ವರ್ಷಾನುಗಟ್ಟಲೆ ಹರಿದು ಮುಕ್ಕಿದ ಈ ಕಚ್ಚೆ ಹರುಕ ಸ್ವಾಮಿ ಮಹತ್ವದ ಮೂರು ವೈದ್ಯಕೀಯ ಪರೀಕ್ಷೆ ಬೇಡವೇ ಬೇಡವೆಂದು ರಚ್ಚೆ ಹಿಡಿದು ಕುಂತಿದ್ದಾನೆ. ಈ ಟೆಸ್ಟ್‌ಗಳಾದರೆ ತನ್ನ ಕಾಮಕಾಂಡ ಬಯಲಾಗಿ ಸುಖ-ಸಂಪತ್ತಿನ ಪೀಠ ತ್ಯಾಗ ಮಾಡುವ ಒತ್ತಡ ಭುಗಿಲೇಳುತ್ತದೆಂಬ ಆತಂಕ ರಾಘುನನ್ನು ಕಾಡುತ್ತಿದೆ!

ಆದರೆ ಈಗಾಗಿರುವ ಹದಿಮೂರು ವೈದ್ಯಕೀಯ ಪರೀಕ್ಷೆಗಳೇ ರಾಘು ಪರಮ ಅತ್ಯಾಚಾರ ಸ್ವಾಮಿ ಎಂಬುದನ್ನು ಸಾಬೀತು ಮಾಡಿಬಿಟ್ಟಿದೆ. ಪ್ರೇಮಲತಾ ಸಿಐಡಿ ಪೊಲೀಸರಿಗೆ ಸಾಕ್ಷವೆಂದು ನೀಡಿದ್ದ ಬಟ್ಟೆಯಲ್ಲಿ ಸ್ವಾಮಿ ಪ್ರಸಾದ ಪ್ರಾಪ್ತವಾಗಿದೆ! "ಅದು" ವೈದ್ಯಕೀಯ ಪರೀಕ್ಷೆಯಲ್ಲಿ ಸಿಕ್ಕಿದ ರಾಘುನ ಡಿಎನ್‌ಎ ಜತೆ ಕರಾರುವಾಕ್ಕಾಗಿ ಹೊಂದಿಕೆ ಆಗುತ್ತಿದೆ. ಅಲ್ಲಿಗೆ ಬ್ರಾಹ್ಮಣರ ಶ್ರದ್ಧಾ-ಭಕ್ತಿಯ ರಾಮಚಂದ್ರಾಪುರ ಗುರುಪೀಠ ರಾಘು ಸ್ಖಲನದಿಂದ ರಾಡಿಯ[...] ವುದನ್ನು ಖಾತ್ರಿಪಡಿಸಿದಂತೆಯೂ ಯಾವಾಗ ವಿಧಿವಿಜ್ಞಾನ ಪ್ರಯೋಗಾಲಯದ[...] 'ಪಾಸಿಟಿವ್' ಎಂದು ನ್ಯಾಯಾಲಯ[...] ಉಲ್ಲೇಖವಾಯ್ತೋ, ಆದುವರೆಗೆ ಸಿಐಡಿ [...] ನ್ಯಾಯ ಪಡೆಯುವ ಉಮೇದಿಯಲ್ಲಿದ್ದ[...] ಮತ್ತವನ ಹಿತೈಷಿ ಹಿಂಬಾಲಕರು ಲಬೋ[...] ಎಂದು ಒಂದೇ ಸಮನೆ ಹೊಯ್ಕೊಳ್ಳತೊಡಗಿ[...]

ಆರಂಭದಿಂದಲೂ ರಾಘವ ಮತ್ತವನ ಸುತ್ತ ನೆ[...] 'ಮೇಧಾವಿ' ಸಂಪಾದಕ, ಕಾನೂನು ತಜ್ಞರು ಧಾರ್ಮಿಕ ಢೋಂಗಿದಾರರಿಗೆಲ್ಲಿ ಮೆಡಿಕಲ್ ಒಂದು ಬೇಡವಾಗಿತ್ತು, ನ್ಯಾಯಾಲಯವನ್ನೇ[...] ತಪ್ಪಿಸಿ ಸದ್ರಿ ಪರೀಕ್ಷೆಯಿಂದ ತಪ್ಪಿಸಿಕೊಳ್ಳುತ್ತ[...] ರಾಘು ಶೋಳಿಗೆ ಪ್ರೇಮಲತಾ ಬಳಿ[...] 'ಪ್ರಸಾದ' ಇರುವ ಅನುಮಾನವಿತ್ತು, ವೈ[...] ಪರೀಕ್ಷೆಗಳಾದರೆ ತನ್ನ ಮನ್ಮಥ ಮಸ್ತಿ[...] ಉಪಕತೆ ಸಾಕ್ಷ್ಯಾಧಾರ ಸ[...] ಜಗಜ್ಜಾಹೀರಾಗುತ್ತದೆಂಬ ಸತ್ಯ ಸಾಕ್ಷಾತ್ಕಾರ[...] ರಾಘುನಿಗಿತ್ತು. ಹೀಗಾಗಿಯೇ ನ್ಯಾಯಾಲಯ ವೈ[...] ಪರೀಕ್ಷೆ ಕಡ್ಡಾಯ ಎಂದಾಗಲೂ ಒಂದಿಡೀ ದಿನ [...] ಕುಳಿತಿದ್ದ ರಾಘು ಮಾಣಿ. ಆದರೆ ವೈದ್ಯಕೀಯ [...] ಹಾಜರಾಗದಿದ್ದರೆ ಸಿಕ್ಕ ನಿರೀಕ್ಷಣಾ ಜಾಮೀನಿಗೂ [...] ಬಂದು ಜೈಲಲ್ಲಿ 'ಭಿಕ್ಷಾನ್ನ' ಸೇವಿಸುವ ಪರಿಸ್ಥಿತಿ ಬರ[...] ಆತಂಕದಿಂದ ಮಠದ ಚಿಂತಕರ ಚಾವಡಿ ಚಮತ[...] ರಾಘುನ ಮರುದಿನವೇ ನೇರ ವಿಕ್ಟೋರಿಯಾ [...] ಅಟ್ಟಿಬಿಟ್ಟರು!

ಆಸ್ಪತ್ರೆಯಲ್ಲಿ ರಾಘವ ಲೈಂಗಿಕ ಟೆಸ್ಟ್‌ಗಳನ್ನು[...] ಬೇರೆಲ್ಲವೂ ಮಾಡಿಯೆಂದು ಗೋಗರೆದ. ಈ [...] ಟೆಸ್ಟ್‌ಗಳಾದರೆ ಬ್ರಹ್ಮಚರ್ಯ ಭಂಗದ ಅವಹೇಳ[...] ಪೀಠ ತ್ಯಾಗದ ಸೊಲ್ಲೆದ್ದೀತೆಂಬ ಕಾರಣಕ್ಕೆ ರಾಘು[...] ಕೋ-ಹಿಂದೇಟು ಹಾಕಿತ್ತು. ಆದರೂ ಮಾ[...] ಪರೀಕ್ಷೆಗಳೆಲ್ಲವೂ ರಾಘು ಲೈಂಗಿಕವಾಗಿ ಯಾವ [...] ಕಾವಿ ಕಾಮಿ ಎಂತಲೂ, ಸಂತ್ರಸ್ತೆಯ ಬಟ್ಟೆಗೆ ಮೆತ್ತಿ[...] ವುದು ಸ್ವಾಮಿ ಪ್ರಸಾದ ಎಂತಲೂ ವೈದ್ಯರಿ[...] ಪೊಲೀಸರಿಗೆ ಮನದಟ್ಟು ಮಾಡಿಕೊಟ್ಟಿತು! ಲೈಂಗಿ[...] ಗಳಾದರೆ ಗುರುಗಳ ಬ್ರಹ್ಮಚರ್ಯ ನಾಶವಾಗು[...] ಕೂಗಾಡಿ ಮುಗ್ಧ ಮಠಾನುಯಾಯಿಗಳಲ್ಲಿ ಧಾರ್ಮಿಕ[...] ಹುಟ್ಟು ಹಾಕಲು ಹವಣಿಸಿದ್ದ ಮಠದ ತಾಲಿಬಾ[...] ಇಂಗು ತಿಂದ ಮಂಗನಂತಾಗಿದ್ದಾರೆ. ಸ್ವಾಮಿಯ[...] ತೆಗೆವ ಗೋಜಿಗೆ ಸಿಐಡಿ ಸದ್ಯಕ್ಕೆ ಹೋಗಿಲ್ಲ; ರಾ[...] ಪ್ರೇಮಲತಾರ ಬಟ್ಟೆ ಮೇಲೆಲ್ಲ ಪ್ರಸಾದ ಚೆಲ್ಲಿ ಬ್ರ[...] ಕಳೆದುಕೊಂಡಿದ್ದೇನೆಂದು ಸ್ವಯಂ ಸಾಬೀತುಪಡಿಸಿ[...] ಬಿಟ್ಟಿದ್ದಾನೆ!!

ರಾಘುನ ಲೈಂಗಿಕ ಹಗರಣ ಬಹಿರಂಗವಾ[...] ವೈಜ್ಞಾನಿಕ ಸಾಕ್ಷ್ಯಾಧಾರಗಳಿವೆ ಎಂಬ ಮಾತು ರಾಘು[...] ಮಾತು-ಕತೆಗೆ ಹೋಗಿದ್ದ ಹವ್ಯಕ ಸಮಾಜದ [...] ಘನ ಮುಖಂಡರು ಹೇಳಿದ್ದರು. ಈ ಅಂದಾಜು[...] ಕಳ್ಳ ಸನ್ಯಾಸಿ ರಾಘುಗೂ ಇತ್ತು. "ಇದು ಕ್ಲಿಯರ್[...] ಪ್ರಾಯಶ್ಚಿತ್ತ ಆಗಲೇಬೇಕು" ಎಂದು ಬ್ರಾಹ್ಮಣ [...] ಹೇಳಿದಾಗ ರಾಘು "..... ಪರಿಹಾರ ಕಂಡುಕೊ[...] ಈ ಸಂಗತಿ ನಿಮಗ್ಯೆವರಿಗೆ ಬಿಟ್ಟರೆ ಇನ್ನಾರದ[...]

ರಾಘು ರಕ್ಷಿಸುವವರ್‍ಯಾರು?


ಕಾವಿ ಗೆಟಪ್ಪಿನಲ್ಲಿ ಅಮಾಯಕ ಹೆಣ್ಮಕ್ಕಳ-ಮುತ್ತೈದೆಯರ ಸೆರಗಿಗೇ ಕೈ ಹಾಕುವ ಪಾಪಿ ರಾಘುನ ರಕ್ಷಿಸಲು ರಾಮಚಂದ್ರಾಪುರ ಮಠದ ಅಧಿದೇವತೆಗಳಾದ ಸೀತಾ ರಾಮಚಂದ್ರ, ಚಂದ್ರ ಮೌಳೀಶ್ವರ ಮತ್ತು ರಾಜರಾಜೇಶ್ವರಿಯಿಂದಲೂ ಸಾಧ್ಯವಾಗದಂತಾಗಿದೆ. ಹೀಗಾಗಿ ಆತ ಶಿಷ್ಯರನ್ನು-ಭಕ್ತರನ್ನೇ ಈಗ ತನ್ನ ರಕ್ಷಿಸುವಂತೆ ಜಪ-ತಪ-ಹೋಮ-ವಾಮಾಚಾರ ಮಾಡುವಂತೆ ಬೇಡುವ ದುಃಸ್ಥಿತಿ ಬಂದಿದೆ. ರಾಘುನ ಮೇಲೆ ಅಸಹ್ಯವಾದ ಲೈಂಗಿಕ ಆರೋಪ ಬಂದಾಗ ಆತ ಹೊನ್ನಾವರದ ಕೆಕ್ಕಾರ ಎಂಬ ದುರ್ಗಮ ಅರಣ್ಯದ ನಡುವಿರುವ ಶಾಖಾಮಠದಲ್ಲಿ ಚಾತುರ್ಮಾಸ್ಯ ವ್ರತದಲ್ಲಿದ್ದ. ಆಗಾತನ ಬಂಧಿಸಲು ಪೊಲೀಸರು ಬಂದಿದ್ದರು. ಆಗ ಯಾವ ಹವ್ಯಕ ಹಿರೇಮಣೆಯೂ ರಾಘುನ ರಕ್ಷಣೆಗೆ ಬರಲಿಲ್ಲ.


ರಾಘುನಿಂದ ಸ್ವಜಾತಿ ರಾಜಕಾರಣದ ಮಂತ್ರಾಕ್ಷತೆ ಕೊಡಿಸಿ ಎಮ್ಮೆಲ್ಲೆ-ಮಂತ್ರಿಯಾಗಿದ್ದ ಕಾಗೇರಿ, ಎಂಪಿಯಾಗಿರುವ ಅನಂತ್ಮಾಣಿಯಂಥ ಬ್ರಾಹ್ಮಣ ಭೂಪರು ಆತನ ಪರ ಒಂದೇ ಒಂದು ಸೊಲ್ಲು ಈವರೆಗೆ ಎತ್ತಿಲ್ಲ. ಅವರಿಗೆಲ್ಲ ಗೊತ್ತಿದೆ. ಈ ಕೊಳಕನ ಪರ ವಹಿಸಿ ಮಾತಾಡಿದರೆ ಆಗುವ ಲಾಭಕ್ಕಿಂತ ಹಾನಿಯೇ ಜಾಸ್ತಿಯೆಂದು ಈ ಬಿಜೆಪಿ ಜನಪ್ರತಿನಿಧಿಗಳಿಗೆ ಆರ್‌ಎಸ್‌ಎಸ್‌ನ ಭಯ ಕಾಡುತ್ತಿದೆ. ಆರೆಎಸ್‌ಎಸ್ ರಾಘುನ ಜೈಲಲ್ಲಿ ನೋಡುವ ದೃಢ ನಿರ್ಧಾರ ಅದ್ಯಾವಾಗಲೋ ಮಾಡಿದೆ. ಈ ಕಾಗೇರಿ, ಅನಂತ್ಮಾಣಿ ಆಪ್ತ ವಲಯದಲ್ಲಿ ರಾಘುನ ಲೀಲೆಗಳ ಬಗ್ಗೆ ಅಸಹ್ಯದಿಂದ ಮಾತಾಡುತ್ತಿದ್ದಾರೆ. "ನಂಗಳ ಹೈಗರು ಎನಗಲ್ದೆ ಶುದ್ರನ್ನೆ ಓಟು ಹಾಕ್ತ್ವಾ.... ಈ ರಾಘು ಸ್ವಾಮಿ ವಿರೋಧಿ ಮಾಡಿದ್ರೂ ಹೈಗ್ರ ಮತ ಏನ್ಗೇ ಒತ್ತು..." ಎಂದು ಕಾಗೇರಿ ಮಾಣಿ-ಅನಂತ್ಮಾಣಿ ಲೆಕ್ಕ ಹಾಕಿದ್ದಾರೆ.


ದುರಂತವೆಂದರೆ, ಶೂದ್ರ ಶಾಸಕರಾದ ಕುಮಟಾದ ಶಾರದಾ ಶೆಟ್ಟಿ, ಭಟ್ಕಳದ ಮಂಕಾಳ ವೈದ್ಯ ಈ ಕೊಳಕು ರಾಘು ಸ್ವಾಮಿಗೆ ಸಪೋರ್ಟ್ ಮಾಡಿ ಮಾನ ಕಳೆದುಕೊಂಡು ಹಾಸ್ಯಾಸ್ಪದರಾಗಿದ್ದಾರೆ. ಹಾಗೆಯೇ ಕೆಕ್ಕಾರ ಮಠದಲ್ಲಿ ರಾಘು ತಲೆಮರೆಸಿಕೊಂಡಾಗ ಮಠಕ್ಕೆ ಕಾವಲಾಗಿ ನಿಂತವರು ಬ್ರಾಹ್ಮಣರಲ್ಲ, ಶೂದ್ರರು ಮತ್ತು ದಲಿತರು. ಇವರ ಕೈಗೆ ಕತ್ತಿ-ಕುಠಾರಿ-ಕೊಡಲಿ ಕೊಟ್ಟು ಪೊಲೀಸರು ಬರದಂತೆ ಪುರೋಹಿತಶಾಹಿ ಟ್ರಿಕ್ಕು ಮಾಡಿತ್ತು. ಆದರೆ ರಾಘುನ ರಹಸ್ಯ ವಕ್ತಾರನಾಗಿರುವ ಪ್ರಳಯಾಂತಕ ಹವ್ಯಕ ಪತ್ರಕರ್ತನೊಬ್ಬ ಮಾತ್ರ ಕೇಂದ್ರ ಮಂತ್ರಿ ಅನಂತ ಶಾಸ್ತ್ರಿ ರಾಜ್ಯದ ಮಂತ್ರಿ ದೇಶಪಾಂಡೆಗಳ ಹಿಡಿದು ಆಟ ಆಡಿದ್ದ. ಆದರೆ ಅದು ಅಂಥ ಫಲವೇನೂ ಕೊಟ್ಟಿಲ್ಲ. ಕಾರಣ ಮತ್ತದೇ ಆರೆಸ್ಸೆಸ್ ದೊರೆಗಳು!


ಮೋದಿಗೆ ಹೋಲ್‌ಸೇಲಾಗಿ ಸಪೋರ್ಟ್ ಮಾಡಿದ್ದ ರಾಘುನ ಜಾತಿಯವರು, ಹಿಂಬಾಲಕರು, ಶಿಷ್ಯರೆಲ್ಲ ಆತನಾದರೂ ನೆರವಿಗೆ ಬರಬಹುದೆಂದು ಭಾವಿಸಿದ್ದರು. ದೇಶಪಾಂಡೆಯಂಥವರು ಹೇಳಿದರೂ ಹೇಗೆ ಸಿಎಂ ಸಿದ್ದು ಕೇಳಲಿಲ್ಲವೋ ಹಾಗೆಯೇ ಅನಂತ ಶಾಸ್ತ್ರಿ ವಶೀಲಿ ಮಾಡಿದರೂ ಪಿಎಂ ಮೋದಿ ಕೇರ್ ಮಾಡಿಲ್ಲ. ಮೋದಿಗೆ ಆರೆಸ್ಸೆಸ್ ಮುಲಾಜಾದರೆ, ಸಿದ್ದುಗೆ ಸಾಮಾಜಿಕ ನ್ಯಾಯದ ನೀತಿ.

ಈಗ ಅಂತಿಮವಾಗಿ ಮಠದ ಪಾರುಪತ್ಯಗಾರರು ತಮ್ಮ ಗುರು ರಕ್ಷಣೆಗೆ ಶಿಷ್ಯ ಕೋಟಿಗೆ ಮೊರೆ ಹೋಗಿದ್ದಾರೆ; ಮತ್ತೊಂದೆಡೆ ವಾಮಾಚಾರದಲ್ಲಿ ಅಪಾರ ನಂಬಿಕೆಯಿರುವ ರಾಘು ಮಧ್ಯರಾತ್ರಿಯಲ್ಲಿ "ಛೂ ಮಂತ್ರ ಕಾಳಿ" ಮಾಡಿಸುತ್ತಿದ್ದಾನೆ. ಸಾಮಾನ್ಯವಾಗಿ ಶಿಷ್ಯರ ಯೋಗಕ್ಷೇಮಕ್ಕಾಗಿ ಮಠಾಧೀಶರು ಜಪ-ತಪ-ಹೋಮ ಮಾಡುವುದು ಮಠ ಸಂಪ್ರದಾಯ. ರಾಘುಗೆ ಅದೆಂಥ ಕೇಡುಗಾಲ ಬಂದಿದೆಯೆಂದರೆ, ಶಿಷ್ಯರೇ "ನಮ್ಮ ಪೀಠಾಧಿಪತಿಯನ್ನು ರಕ್ಷಿಸು ದೇವರೇ...." ಎಂದು ವಿವಿಧ ಅನುಷ್ಠಾನ ಮಾಡುವಂತಾಗಿವೆ. ರೇಪ್ ಕೇಸ್ ಆರೋಪ ಬಂದಾಗ ಶಿಷ್ಯರಿಂದ ಜಪ-ತಪ ಮಾಡಿಸಿದ್ದ ಸ್ವಾಮಿ ಡಿಎನ್‌ಎ-ಪ್ರೇಮಲತಾ ಕೊಟ್ಟ ಬಟ್ಟೆ ಮೇಲಿನ ಡಿಎನ್‌ಎ ಮ್ಯಾಚ್ ಆಗುತ್ತದೆಂದು ಬಂದಾಗ ಮತ್ತೆ ಶಿಷ್ಯರಿಗೆ ಫರ್ಮಾನು ಹೊರಡಿಸಿ ಜಪ-ತಪ ಮಾಡಲು ಹೇಳಿದ್ದಾನೆ. ರಾಘು ರಕ್ಷಣಾ ಪಡೆಗೆ ಶಿಷ್ಯರಿಂದ ಅನುಷ್ಠಾನ ಮಾಡಿಸೋದು ಬಿಟ್ಟರೆ ಮತ್ತೇನೂ ಸಾಧ್ಯವಾಗುತ್ತಿಲ್ಲ!!


ಮಾಂಕಾಳ ವೈದ್ಯ


ಅನಂತಕುಮಾರ್ ಹೆಗ್ಡೆ


ವಿಶ್ವೇಶ್ವರ ಹೆಗ್ಗಡೆ ಕಾಗೇರಿ



ಶಾರದಾ ಶೆಟ್ಟಿ

ರುವಂತೆ ನೋಡಿಕೊಳ್ಳಿ..." ಎಂದ್ವೇಳಿ ಆಕ್ರಮಣ ಸಮಯಾ
ಶ ಪಡೆದು ಷಡ್ಯಂತ್ರ ಮಾಡಿದ್ದ ಪ್ರೇಮಲತಾ ಪೊಲೀಸ್
ಲಟು ಕೊಡುವ ಮೊದಲೇ ತನ್ನ ರೇಪ್‌ನ ಸಾಕ್ಷ್ಯಗಳ
ಮಾಡುವುದು ರಾಘುನ ಮುಖ್ಯ ಉದ್ದೇಶವಾಗಿತ್ತು!
ಮನಗೆ ಮೂರು ಕೋಟಿಗಾಗಿ ಪ್ರೇಮಲತಾ-ದಿವಾಕರ
ದಂಪತಿ ಬ್ಲ್ಯಾಕ್‌ಮೇಲ್ ಮಾಡಿದರೆಂದು ರಾಘು
ಗೋಲಿಪ್ಪ ಕತೆ ಹೆಣೆದಿದ್ದಾನೆ. ವಾಸ್ತವವಾಗಿ ರಾಘು
ವನ ಸಲಹೆಗಾರ ಪತ್ರಕರ್ತರು, ಧಾರ್ಮಿಕ-ವ್ಯವಹಾರಿಕ
ಮ ಸೇರಿ ಪ್ರೇಮಲತಾ-ದಿವಾಕರ್‌ರನ್ನೇ ಬ್ಲ್ಯಾಕ್‌ಮೇಲ್
ಿದ್ದಾರೆ. ಹೊನ್ನಾವರದಲ್ಲಿ ಸುಳ್ಳು ದೂರೊಂದನ್ನು
ಮಲತಾ ದಂಪತಿಗಳ ಮೇಲೆ ಹಾಕುವ ಮೂಲಕ
ಗೆ ಕಳಿಸಲಾಗಿತ್ತು. ಪ್ರೇಮಲತಾ ದಂಪತಿಗಳನ್ನು
ೀಸ್-ಕೋರ್ಟು ಕಚೇರಿಯೆಂದು ಹೈರಾಣಾಗಿಸಿ
ಚಾರ ಕೇಸ್ ಬೀಳದಂತೆ ತಡೆಯುವುದು ಮತ್ತು
ದರೂ ಸಾಕ್ಷ್ಯಾಧಾರ ಸಿಗದಂತೆ ಮಾಡುವುದು ಮಠ
ಾನಿಗಳ ಸ್ಕೆಚ್ ಆಗಿತ್ತು. ಆದರೆ ಅದಾಗಲಿಲ್ಲ. ಬದಲಿಗೆ
ತಾನೇ ಹವ್ಯಕ ಸಮುದಾಯದ ಎದುರು ಬೆತ್ತಲಾಗುತ್ತ
ದ; ಅಸಲೀ ಅವತಾರ ಅನಾವರಣ ಮಾಡಿಕೊಂಡ.
ರ್ಯಾದೆಯಾಗಿ ಮಠ ಬಿಟ್ಟು ಹೋಗಿ ತನ್ನ
ವುದಾದರೂ ಸಖಿಯೊಂದಿಗೆ ಸಂಸಾರ ಮಾಡೋದು
ಒಣ ಪ್ರತಿಷ್ಠೆಯ ಹಠಕ್ಕೆ-ಮಠದ ಸಂಪತ್ತಿನ-ಸುಖದ
ಹಕ್ಕೆ ಬಿದ್ದು ತಥಾಕಥಿತ ಬ್ಲ್ಯಾಕ್‌ಮೇಲ್ ಕತೆ ಹೆಣೆದು
ದ! ಈ ಸುಳ್ಳು ಪ್ರಕರಣವೇ ಈಗ ರಾಘು
ವನೆಂದು ತೋರಿಸತೊಡಗಿದೆ!

2014ರ ಜುಲೈ 7ರಿಂದ ಆಗಸ್ಟ್ 27ರ ವರೆಗೆ
ಮಲತಾ ದಂಪತಿ ಮತ್ತವರ ಬೆಳೆದು ನಿಂತ ಇಬ್ಬರು
ಮಕ್ಕಳು ಅನುಭವಿಸಿದ ನರಕಯಾತನೆ ಹೇಳತೀರದು.
ಕೆಕ್ಕಾರಲ್ಲಿ ರಾಘು ಚಾತುರ್ಮಾಸ್ಯ ವ್ರತವೆಂಬ ವಿವಿಧ
ೀದಾವಳಿ' ನಡೆದಿತ್ತು. ಈ ಅವಧಿಯಲ್ಲಿ ಹವ್ಯಕ
ದಾಯದ ಸೋಕಾಲ್ಡ್ ಹಿರಿಯರು, ಒಬ್ಬ ಪ್ರಚಂಡ
ರ್ತ ಮತ್ತು ಆರ್‌ಎಸ್‌ಎಸ್‌ನ ಮುಂಚೂಣಿ
ಾಳುಗಳು ಸೇರಿಕೊಂಡು ರಾಘುಗೆ ಬುದ್ಧಿ ಹೇಳುವ,
ಲತಾರಿಗಾದ ಅನ್ಯಾಯಕ್ಕೆ ಪರಿಹಾರ ಕಂಡುಕೊಳ್ಳುವ
ತ್ನಕ್ಕೆ ಇಳಿದಿದ್ದರು. ರಾಘು ಕೆಕ್ಕಾರು ಮಠದಿಂದಲೇ
ನ್ನು ಆಪರೇಟ್ ಮಾಡುತ್ತ ರಾಜಿ ನಾಟಕ ನಡೆಸಿದ್ದ;
ಸಮಾನಾಂತರವಾಗಿ ಪ್ರೇಮಲತಾ ದಿವಾಕರ್
ಂಬ ಹಣಿವ ಅಸ್ತ್ರಕ್ಕೆ ಸಾಣೆ ಹಾಕುತ್ತಿದ್ದ. ಬೋಗಸ್
ಮೇಲ್ ಕಂಪ್ಲೇಂಟು ಹೆಣೆಯಲಾಗಿತ್ತು.

ಇತ್ತ ಪ್ರೇಮಲತಾ ಕುಟುಂಬ ದೈಹಿಕ-ಮಾನಸಿಕ-
ವಲಕ್ಕೆ ಸಿಲುಕಿ ಒದ್ದಾಡುತ್ತಿತ್ತು. ಮಾನಸಿಕ ಒತ್ತಡ,
ಮತ್ತು ಮಾನ ಕಳೆದುಕೊಂಡ ನೋವು,
ಯದಿಂದಾದ ರೋಷ, ಗುರು ಪೀಠದ ಗೌರವಕ್ಕೆ
ಾಗಬಾರದು ಮತ್ತು ಸಮಾಜದಲ್ಲಿ ಕಾವಿ ಬಟ್ಟೆ
ನ ಶ್ರದ್ಧೆಗೆ ಭಂಗವಾಗಬಾರದೆಂಬ ಧಾರ್ಮಿಕ ಭಯ-
ಬೆಳೆದುನಿಂತ ಹೆಣ್ಣುಮಕ್ಕಳ ಭವಿಷ್ಯ ಒತ್ತೆಯಿಟ್ಟು,
-ಮರ್ಯಾದೆ ಬಿಟ್ಟು ಪೂಜ್ಯರೆನಿಸಿದ ಗುರುವಿನ
ಯೇ ಅತ್ಯಾಚಾರದ ಕೇಸು ಕೊಡಬೇಕಾಗಿ ಬಂದ
ಮಠದ ಪರಿವಾರದಲ್ಲಿರುವ ಹಿರಿಯ ಪೊಲೀಸ್
ರಿಗಳು, ಮಾಧ್ಯಮದ ರಾಕ್ಷಸರು ತನ್ನ ಕುಟುಂಬ
ತೇಗುವ ಭಯದಲ್ಲಿ ಪ್ರೇಮಲತಾ ಅಕ್ಷರಶಃ
ಣಾಗಿ ಹೋಗಿದ್ದರು. ಈ ಒಂದೂವರೆ ತಿಂಗಳ
ಪ್ರೇಮಲತಾ ತನ್ನ ಇ-ಪ್ಯಾಡಿನಲ್ಲಿ "ಗುರುಪೀಠದಿಂದ
ಅನ್ಯಾಯವಾಗಿದೆ.... ನನಗೆ ನ್ಯಾಯ ಬೇಕು" ಎಂಬ
ರಹದಡಿ ತನಗಾದ 'ಅತ್ಯಾಚಾರ, ಅನಾಹುತದ
ಭವ' ಬರೆದಿಡುತ್ತ ಹೋದರು.

ಪ್ರೇಮಲತಾ-ದಿವಾಕರ್ ಶಾಸ್ತ್ರಿ ದಂಪತಿಗಳು....



ರಂಗ್‌ರಂಗೀಲಾ ರಾಘುನ ಸ್ತ್ರೀ ವ್ಯಾಮೋಹಂ!!



ರಾಘು....ನಟಿ ಮಲ್ಲಿಕಾಳೊಂದಿಗೆ



ಲಲನೆಯರಿಂದ ಆರತಿ ಮಾಡಿಸಿಕೊಳ್ಳುತ್ತಿರುವ ರಾಘು....

ಸನ್ಯಾಸಿಯಾದವನು ಕಡ್ಡಾಯವಾಗಿ ಏನೇನು ಮಾಡಬಾರದೋ ಅದೆಲ್ಲ ಕಪಟ ಕಾವಿ ಜೀವಿ ರಾಘು ತ್ರಿಕರಣ ಶುದ್ಧಿಯಿಂದ ಪಾಲಿಸುತ್ತಿದ್ದಾನೆ! ಮಠ ಪರಂಪರೆಯಲ್ಲಿ ಸನ್ಯಾಸಿ ಮಹಿಳೆಯಿಂದ ಸಂಯೋಗ್ಯ ಅಂತರ ಕಾಪಾಡಿಕೊಳ್ಳಬೇಕಾದ್ದು ಅತೀ ಅನಿವಾರ್ಯ. ಆದರೆ ಪೀಠಕ್ಕೆ ಬಂದ ಕೆಲ ಸಮಯದಲ್ಲೇ ರಾಘುಗೆ ಪೂರ್ವಾಶ್ರಮದ ಚಪಲ ಬಾಧಿಸತೊಡಗಿತು.

ಹೊಸನಗರದ ಭಟ್ಟರ ಮಗಳೊಬ್ಬಳ ಜೊತೆ ರಾಘುನ ಸರಸ-ಸಲ್ಲಾಪದ ಗುಸು-ಗುಸು ಶುರುವಾಯ್ತು; ಚೆಂದದ ಹೆಂಗಸೊಬ್ಬಳ ಸಲುಗೆ ಎಲ್ಲಿಗೆ ಹೋಯ್ತೆಂದರೆ ಆಕೆಗೆ ಬರೋಬ್ಬರಿ ಒಂದು ಕೋಟಿಯ ಜೀವವಿಮಾ ಪಾಲಿಸಿ ಕೊಟ್ಟರು. ಆ ಎಲ್‌ಐಸಿ ಏಜೆಂಟಿಣಿ ರಾಘುನ ಸಾಮೀಪ್ಯದಲ್ಲಿದ್ದ ರೋಮ್ಯಾಂಟಿಕ್ ಫೋಟೋಗಳು ಕಂಗೊಳಿಸಿದವು. ಯಾವಾಗ ರಾಮಕಥಾ-ಗೋಸತ್ರ-ಪಾದಪೂಜೆಯ ಭರಾಟೆ ಜೋರಾಯ್ತೋ ಆಗ ರಾಘುನ ಪ್ಲೇಬಾಯ್ ಪರಾಕ್ರಮಕ್ಕೂ ಬಿರುಸು ಬಂತು. ಅಂದದ ಗೃಹಿಣಿಯರು-ಎಳೆ ಪ್ರಾಯದ ಹುಡುಗಿಯರಿರುವ ಮನೆಯಲ್ಲಿ ಮೂರ್ಮೂರು ದಿನದ ಪಾದಪೂಜೆ ಕ್ಯಾಂಪ್ ರಾಘು ಹಾಕತೊಡಗಿದ. ಕೆಲವೆಡೆ ಆಗಬಾರದ್ದೂ ಆಗಿರುವ ವದಂತಿಗಳು ಈಗ ಕೇಳಿಬರುತ್ತಿದೆ. ಸನ್ಯಾಸಿಯಾದವನಿಗೆ ಶಿಷ್ಯರ ಮನೆಯಲ್ಲಿ ರಾತ್ರಿ ವಾಸ್ತವ್ಯ ನಿಷಿದ್ಧ. ಆದರೆ ರಾಘುಗಿದು ಅನ್ವಯವಾಗಿಲ್ಲ!

ರಾಘು ತನ್ನ ಪರಿವಾರದ ಕೆಲವು ಗಿಂಡಿ ಮಾಣಿಗಳಿಗೆ ಮದುವೆ ಮಾಡಿಸಿದ್ದು ಅನೇಕ ಅನೈತಿಕ ಅನುಮಾನಕ್ಕೆಡೆ ಮಾಡಿದೆ. ಬಾಲಿವುಡ್ ಬಿಚ್ಚಮ್ಮನ ಬ್ರಹ್ಮಚಾರಿ ಹನುಮಂತ ದೇಗುಲದ ಶಂಕುಸ್ಥಾಪನೆಗೆ ಕರೆಸಿ ಅಲ್ಲೆಗರೆದ ರಾಘು ಗೋಕರ್ಣ ಬೀಚ್‌ನಲ್ಲಿ ಸುಂದರಿ ಜೊತೆ ಓಡಾಡುತ್ತಿದ್ದ ಚಿತ್ರ ಯೂ-ಟ್ಯೂಬಲ್ಲಿ ಕಂಡುಬಂದಿತ್ತು. "ಏಕಾಂತ ದರ್ಶನ" ಮತ್ತು "ಕನ್ಯಾ ಸಂಸ್ಕಾರ ಪದ್ಧತಿ" ಪರಿಚಯಿಸಿದ ಕೀರ್ತಿ ರಾಘು ಸ್ವಾಮಿಯದು. ಈಗ ಏಕಾಂತ ದರ್ಶನ ಇಲ್ಲವೆಂದು ರಾಘುನ ಶಿಖಂಡಿ ವಕ್ತಾರರು ಬೊಗಳುತ್ತಿದ್ದಾರೆ. ಆದರೆ ಅದೆಷ್ಟೋ ಮುತ್ತೈದೆಯರು ತಮ್ಮ ಗಂಡಂದಿರನ್ನು ಬಾಗಿಲಾಚೆ ನಿಲ್ಲಿಸಿ ರಾಘುನ ಖಾಸಗಿ ಕೋಣೆಯಲ್ಲಿ ಕದವಿಕ್ಕಿ ಒಪ್ಪತ್ತು ಗಟ್ಟಲೆ ಕಳೆದ ಅದೆಷ್ಟೋ ಉದಾಹರಣೆ ಇದೆ.

ಪ್ರೇಮಲತಾರೇ ಸ್ವಾಮಿ ಕೊಠಡಿಯಲ್ಲಿ ಗಂಟೆಗಟ್ಟಲೆ ಏಕಾಂತದಲ್ಲಿರುವುದು ನೋಡಿದ-ಕೇಳಿದ ಸಾವಿರಾರು ಜನರಿದ್ದಾರೆ. ಆಕೆ ಬಹು ಹೊತ್ತಿನ ನಂತರ ಸಪ್ಪೆ ಮುಖದಿಂದ ಹೊರಬಂದದ್ದು ಆಗಬಾರದ್ದು ಏನೋ ಆಗಿದೆ ಎಂಬುದು ಕಂಡವರಿಗೆ ಖಾತ್ರಿ ಮಾಡುತ್ತಿತ್ತು. ಮೊಬೈಲ್-ಇಂಟರ್‌ನೆಟ್‌ನಲ್ಲಿ ರಾಘು ನಡುರಾತ್ರಿವರೆಗೂ ಲಲನೆಯರೊಂದಿಗೆ ಚಾಟ್ ಮಾಡುವುದು ಕಂಡವರಿದ್ದಾರೆ. ಹೆಂಗಸರೊಂದಿಗೆ ಮಠದ ಏಕಾಂತದ ಕೊಠಡಿಯಲ್ಲಿ ರಾತ್ರಿ 1-2 ರ ತನಕ ರಮ್ಯಕಾಲ ಕಳೆದದ್ದು ಗಿಂಡಿ ಮಾಣಿಗಳಿಗೆಲ್ಲಾ ಗೊತ್ತಿರುವ ಸಂಗತಿಯೇ!

ಮಹಿಳೆಯರು-ತರುಣಿಯರು ಕಾಲಿಗೆರಗಿದಾಗ ಕಳ್ಳನೋಟ ಬೀರುವುದು ರಾಘುನ ಲಾಗಾಯ್ತಿನ ಕರ್ಮ. ನಮಸ್ಕರಿಸುವ ಸ್ತ್ರೀಯರ ತಲೆ, ಬೆನ್ನು-ಭುಜ ಸವರಿ "ಆಶೀರ್ವಾದ" ಮಾಡಿ ಪುನೀತನಾಗುವ ಚಟ ರಾಘು ದಶಕದಿಂದ ಪಾಲಿಸಿಕೊಂಡು ಬಂದಿದ್ದಾನೆ. ಇದನ್ನು ಕುಮಟಾದ ಹಿರಿಯ ಹವ್ಯಕ ಮುಂದಾಳು-ನಿಷ್ಠೂರವಾದಿ ಡಾ. ಟಿ.ಟಿ. ಹೆಗಡೆ ಬಲವಾಗಿ ವಿರೋಧಿಸಿದ್ದರು. ಮಠದೊಳಗಿನ ಅಧರ್ಮ-ಅನೈತಿಕತೆ-ಅವ್ಯವಹಾರ ಬಹಿರಂಗವಾಗೇ ಎತ್ತಿ ಆಡಿದ್ದರು. ಅದಕ್ಕೆ ರಾಘುನ ತಾಲಿಬಾನಿಗಳು ವಯೋವೃದ್ಧ ಡಾ. ಹೆಗಡೆಯನ್ನು ಹಿಗ್ಗಾಮುಗ್ಗಾ ಥಳಿಸಿದ್ದರು. ಇದಕ್ಕೆ ರಾಘುನ ಮೌನ ಸಮ್ಮತಿಯಿತ್ತು.

ಈ ರಾಘು ಸ್ವಾಮಿಗೆ ಹೆಂಗಸರನ್ನು ಮುಟ್ಟುವ ಕೆಟ್ಟ ಚಪಲ ಅದೆಷ್ಟೆಂದರೆ, ಅವರ ಹಣೆಗೆ ಈ ಗುರುವೇ ಕುಂಕುಮ ಇಡುವ ರಸಿಕ ಧರ್ಮ ರಾಮಚಂದ್ರಾಪುರ ಮಠದ ಶಿಷ್ಯರಲ್ಲಿ ಹುಟ್ಟುಹಾಕಿದ್ದಾನೆ. ಗಂಡಂದಿರು ತಮ್ಮ ಮುತ್ತೈದೆಯರಿಗೆ ಸ್ವಾಮಿ ಬರಸೆಳೆದು ಕುಂಕುಮ ಇಡುವುದು ಕಂಡೂ ಕಾಣದಂತಿರಬೇಕಾಗಿದೆ! ರಾಘುನ ಈ ತೆವಳಾಟ ನೋಡಿ ಹೇಸಿದ ನೂರಾರು ಸದ್ಗೃಹಿಣಿಯರು ಆತನ ಬಳಿ ಹೋಗುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಆತನ ಆಶೀರ್ವಾದವೂ ಬೇಡ; ಅಸತ್ಯ ಒಡನಾಟವೂ ಬೇಡ ಎಂಬಂತಾಗಿದೆ ಮರ್ಯಾದಸ್ಥ ಹೆಂಗಸರಿಗೆ.

ಇದೆಲ್ಲಕ್ಕಿಂತ ಅಪಾಯಕಾರಿಯೂ- ಅಸಹ್ಯವೂ-ಅನೈತಿಕವೂ ಆಗಿರುವಂಥ 'ಕನ್ಯಾ ಸಂಸ್ಕಾರ' ಎಂಬ (ಅ)ಧಾರ್ಮಿಕ ವಿಧಿ ರಾಘು ಶಿಷ್ಯ ಸಮೂಹದಲ್ಲಿ ಶುರು ಹಚ್ಚಿಕೊಂಡಿದ್ದಾರೆ. ಮುಚ್ಚಿದ ಬಾಗಿಲ ಕೊಠಡಿಯಲ್ಲಿ ವಯಸ್ಸಿಗೆ ಬಂದ ಹವ್ಯಕ ಹುಡುಗಿಯ ಕಿವಿಯಲ್ಲಿ ರಹಸ್ಯ 'ಉಪದೇಶ' ಮಾಡುವುದೇ ರಾಘುನ ಕನ್ಯಾ ಸಂಸ್ಕಾರ. ಇದಕ್ಕೆ ಆ ಹುಡುಗಿಯರ ಪಾಲಕರಿಂದ ಸಾವಿರಾರು ರೂ. ಶುಲ್ಕವೂ ರಾಘು ಪಡೆದಿದ್ದಾನೆ. ಆದರೆ ಅದೆಷ್ಟೋ ಸುಂದರ ಪ್ರಾಯದ ಹುಡುಗಿಯರನ್ನು ಈತ ತೊಡೆಯ ಮೇಲೆ ಕೂಡ್ರಿಸಿಕೊಂಡು 'ಪಳಗಿಸಲು' ಪ್ರಯತ್ನಿಸಿದ ಕತೆಗಳಿವೆ. ಗುರು ಎಂಬ ನಂಬಿಕೆಯಿಂದ ಬಂದ ಮುಗ್ಧ ಹುಡುಗಿಯರನ್ನು ಅನಾಮತ್ತು ಅಪ್ಪಿ ಅಶ್ಲೀಲವಾಗಿ ರಾಘು ವರ್ತಿಸಿದ ವದಂತಿಗಳೂ ಇವೆ. ಕನ್ಯಾ ಸಂಸ್ಕಾರಕ್ಕೆ ಹೋದವರಲ್ಲಿ ಮುಕ್ಕಾಲು ಹುಡುಗಿಯರಿಗೆ ಕೆಟ್ಟ ಅನುಭವ ಆಗಿದ್ದೇ ಹೆಚ್ಚೆಂದು ರಾಘುನ ರಹಸ್ಯ ಬಲ್ಲವರು ಹೇಳುತ್ತಾರೆ. ಹುಡುಗಿಯರ ದೈಹಿಕ-ಮಾನಸಿಕ-ಸಾಂಸಾರಿಕ-ರೊಮ್ಯಾಂಟಿಕ್ ಕಷ್ಟಗಳನ್ನು ರಾಘು ತನ್ನ ಸುಖಕ್ಕೆ ಬೇಕಂತೆ ಬಳಸಿಕೊಂಡು 'ಸಂಸ್ಕಾರ' ಮಾಡಿದ್ದೇ ಹೆಚ್ಚು!

ಇಂಥ ದೇಹ ಚಪಲದ ಪೋಲಿ ಗುಣ-ಧರ್ಮದ ಸ್ವಾಮಿ ರಾಘು ಭಕ್ತೆ ಮಠ ಮೇನಿಯಾದ ಮುಗ್ಧ ಪ್ರೇಮಲತಾರ ಅತ್ಯಾಚಾರ ಮಾಡಿಲ್ಲವೆಂದರೆ ನಂಬಲಾದೀತಾ? ಒಬ್ಬ ತಾಯಿ ಮದುವೆಗೆ ಬಂದ ತನ್ನೆರಡು ಹೆಣ್ಣು ಮಕ್ಕಳ ಭವಿಷ್ಯ ಹಾಗು ತನ್ನದೇ ಶೀಲ-ಚಾರಿತ್ರ್ಯ ಅಡವಿಟ್ಟು ಅತ್ಯಾಚಾರ ಆಗಿದೆಯೆಂದು ಹೇಳಿದರೆ ಅದಕ್ಕಿಂತ ದೊಡ್ಡ ಸಾಕ್ಷಿ-ಪುರಾವೆ ಮತ್ತೊಂದಿರಲು ಸಾಧ್ಯವಾ? ಅದೂ ಸ್ವ-ಜಾತಿಯ ಸರ್ವಶಕ್ತ ಪೀಠಾಧಿಪತಿ ಮೇಲೆ ಸುಳ್ಳು ರೇಪ್ ಕತೆ ಕಟ್ಟುವ ಧೈರ್ಯ ಆ ಹೆಂಗಸಿಗೆ ಬರಲು ಸಾಧ್ಯವಾ?

ಬ್ಲ್ಯಾಕ್‌ಮೇಲ್ ಮಾಡಿದ್ದು ಪ್ರೇಮಲತಾ ಅಲ್ಲ; ಸ್ತ್ರೀ ಚೋರ ರಾಘು ಸ್ವಾಮಿಯೇ ಬ್ಲ್ಯಾಕ್‌ಮೇಲ್‌ದಾರ!!

ರೇಪಿಸ್ಟ್ ರಾಘು ಮೊದಮೊದಲು ಪ್ರೇಮಲತಾರಿಗೆ ರಾಮನ ದೈವೀಕತೆ, ಶಂಕರಾಚಾರ್ಯನ ಸೌಂದರ್ಯ ಲಹರಿ, ತಂತ್ರಯೋನಿ ವಿದ್ಯೆ ಪ್ರಯೋಗದಿಂದ ಬಳಸಿಕೊಳ್ಳುತ್ತಿದ್ದ. ನಂತರ ಅಷ್ಟಾವಕ್ರನಂತೆ ಅಧಿಕಾರ ಚಲಾಯಿಸಿ ಹಕ್ಕಿನಿಂದ-ಹಠದಿಂದ ಅತ್ಯಾಚಾರ ಮಾಡತೊಡಗಿದ. ಯಾವಾಗ ರಾಘು ಕಾಮಪಿಪಾಸುನಂತೆ ದಾಳಿಯಿಡತೊಡಗಿದನೋ ಆಗ, ಪ್ರೇಮಲತಾಗೆ ಬಿಡುಗಡೆಯ ಹಂಬಲ ಶುರುವಾಯ್ತು. ರಾಘುನ ಕಾಮವ್ಯೂಹದಿಂದ ಬಿಡುಗಡೆಯಾಗಲು ಆಕೆ ಮನಸ್ಸು ಮಾಡಿದಂತೆಲ್ಲ ರಾಘು ರಕ್ಕಸನಂತಾಗಿ ಹಿಡಿದಿಟ್ಟುಕೊಳ್ಳಲು ನೋಡಿದ. ಆಗಾಕೆ ಅನಿವಾರ್ಯವಾಗಿ ರಾಘು ಸ್ವಾಮಿಯ ರೇಪ್ ಪುರಾಣ ತನ್ನವರೆದುರು ಬಿಚ್ಚಿಡಬೇಕಾಗಿ ಬಂತು. ಆ ಹಂತದಲ್ಲೇ ಆಕೆ ಸ್ವಾಮಿಯ ಕಾಮ ಕೋಟೆಯಿಂದ ಬಿಡುಗಡೆ ಹೊಂದಲು ಅನುಕೂಲವಾದೀತೆಂದು ಆತನ 'ಪ್ರಸಾದ'ವಿರುವ ಬಟ್ಟೆಗಳನ್ನು ಸಂರಕ್ಷಿಸಿಟ್ಟುಕೊಂಡಿದ್ದರು; ರಾಘನ ರಸಿಕ ಲಹರಿ ರೆಕಾರ್ಡ್ ಮಾಡಿಕೊಂಡಿದ್ದರು; ಮೊಬೈಲ್, ಮೆಸೇಜ್ ಕಾಪಾಡಿಟ್ಟಿದ್ದರು. ಇದೇ ಈಗ ರಾಘುನ ಕಾವಿಯಲ್ಲಡಗಿರುವ ದೇಹದ-ಮನಸ್ಸಿನ ಕೊಳಕುತನ ನಿಸ್ಸಂಶಯವಾಗಿ ನಿರೂಪಿಸುತ್ತಿದೆ!!

ಸಿಐಡಿ ಈಗ ರಾಘುನ ಮೇಲೆ ಅತ್ಯಾಚಾರ (ಐಪಿಸಿ 376) ಆರೋಪ ಪಟ್ಟಿ ಸಲ್ಲಿಸಲು ಸಿದ್ಧವಾಗಿದೆ. ಆದರೆ ರಾಘುನ ರಕ್ಷಿಸುವ ಶಿಖಂಡಿ ಪಡೆಯ ಕ್ಯಾಪ್ಟನ್‌ನ ಪತ್ರಿಕೆಯಲ್ಲಿ ಆತನ ಸರ್ವಸಂಗ ಪರಿತ್ಯಾಗ-ಪಾವಿತ್ರ್ಯತೆಯ ಧಾರಾವಾಹಿಗಳೇ ಬರುತ್ತಿರುವುದು ಮೋಜಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಸಿಕ್ಕದಂತೆ ಎಪಿಸೋಡುಗಳನ್ನು ಗೀಚಿದ ಈ ಪತ್ರಿಕೆಯ ಮುಖ್ಯ ಉದ್ದೇಶ ಪ್ರೇಮಲತಾರ ನೈತಿಕ ಸ್ಥೈರ್ಯ ಕೆಡಿಸಿ ರೇಪಿಸ್ಟ್ ರಾಘುನ ಬಚಾಯಿಸುವುದು. ಹವ್ಯಕ ಸಮುದಾಯದಲ್ಲಾಗಿರುವ ಡ್ಯಾಮೇಜ್ ಕಂಟ್ರೋಲ್‌ನ 'ವಸ್ತು' ಇಟ್ಟುಕೊಂಡೇ ಈ ಪತ್ರಿಕೆಯಲ್ಲಿ ವರದಿಗಳನ್ನು ಹೊಸೆಯಲಾಗುತ್ತಿದೆ. ಪ್ರೇಮಲತಾ ನಡತೆಗೆಟ್ಟವರೆಂದು ತೋರಿಸುವ ಭರದಲ್ಲಿ ಸ್ವಾಮಿ ಪೀಠದಲ್ಲೇ ಜಾರಿರುವುದನ್ನು ಈ ಪತ್ರಿಕೆ ಜಗಜ್ಜಾಹೀರುಮಾಡುತ್ತಿದೆ. ಪ್ರೇಮಲತಾ ಸಿಐಡಿಗೆ ಕೊಟ್ಟ ಬಟ್ಟೆಯಲ್ಲಿ ಇಬ್ಬರು ಪುರುಷರ 'ಅಂಶ'ಗಳಿವೆ ಎಂದು ರಾಘು ಮುಖವಾಣಿಯಂತಾಗಿರುವ ಸದ್ರಿ ಪತ್ರಿಕೆಯಲ್ಲಿ ಬರೆಯಲಾಗಿದೆ.

ಇದರಿಂದ ರಾಘುಗೇನು ಲಾಭ? ಆತನ ಇದರಿಂದ ಸಾಚಾ ಆಗ್ತಾನಾ? ಇಲ್ಲಿರುವ ಪ್ರಶ್ನೆ ಪ್ರೇಮಲತಾ ಎಂಥವರೆಂಬುದಲ್ಲ. ಕಾವಿ ಧರ್ಮ ಪಾಲಿಸುವೆನಾಗಿ ಮಠದ ಪೀಠವೇರಿದ ಸನ್ಯಾಸಿಯೊಬ್ಬ ಹೆಣ್ಣಿನ ಸಂಗಕ್ಕೆ ಬಿದ್ದು ಮೋಜು-ಮಸ್ತಿ ಮಾಡಬಹುದಾ ಎಂಬುದೇ ಅಸಲೀ ಜಿಜ್ಞಾಸೆ. ಒಂದಂತೂ ಖರೆ. ರಾಘು ದಾರಿ ತಪ್ಪಿದ ಖೋಟಾ ಕಾವಿ ಜೀವಿ. ಆತನ 'ಪ್ರಸಾದ' ಸಂತ್ರಸ್ತೆಯ ಬಟ್ಟೆಯ ಮೇಲಿರುವುದನ್ನು ವೈಜ್ಞಾನಿಕವಾಗಿ ಕಂಡುಹಿಡಿಯಲಾಗಿದೆ. ಪ್ರೇಮಲತಾ ಕೇಸ್ ಒತ್ತಟ್ಟಿಗಿಟ್ಟು ನೋಡಿದರೂ ರಾಘುನ ಸುತ್ತ ಇಂಥ ಹಲವು ಹಾದರದ ಕತೆಗಳು ಸುತ್ತಿಕೊಂಡಿರುವುದು ಕಾಣಿಸುತ್ತದೆ. ಆದರೆ ಮಠದ ತಾಲಿಬಾನಿಗಳ ಭಯದಿಂದ ಎಲ್ಲ ಬಾಯಿಮುಚ್ಚಿ ಕುಂತಿದ್ದಾರೆ.

ಈಗಿರುವ ನೈಸರ್ಗಿಕ ನ್ಯಾಯ ಧರ್ಮದ ದರ್ದು ಒಂದೇ. ಇಂಥ ನಡತೆಗೆಟ್ಟವ ಗುರುಪೀಠದಲ್ಲಿ ಇರಬೇಕಾ? ಇಂಥವನ ಪಾದಪೂಜೆ ಮಾಡಬೇಕಾ? ಸ್ತ್ರೀ ಮೋಹದಲ್ಲಿ ಟೊಳ್ಳಾಗಿರುವ ಸ್ವಾಮಿಯಿಂದ ಮಂತ್ರಾಕ್ಷತೆ ಪಡೆದರೇನು ಛಲ? ಮಠ-ಪೀಠ ಬಗೆಗಿನ ಶ್ರದ್ಧಾಭಕ್ತಿಯಿಂದ ತನ್ನ ಬಳಿ ಬಂದ ಎರಡು ಬೆಳೆದು ನಿಂತ ಹೆಣ್ಮಕ್ಕಳ ತಾಯಿಯನ್ನು ನಂಬಿಸಿ-ವಶೀಕರಿಸಿ ಲೈಂಗಿಕ ಅತ್ಯಾಚಾರ ನಡೆಸಿದ ಕಳ್ಳ ಸ್ವಾಮಿಯಿಂದ ಪೀಠ ಮಲೀನ ಆಗಿಲ್ಲವಾ? ಇದೆಲ್ಲಾ ಯೋಚಿಸಬೇಕಾಗಿರುವುದು ಬ್ರಾಹ್ಮಣ ಬುದ್ಧಿವಂತರು!

● ಶುದ್ಧೋಧನ

ಘರ್ ವಾಪಸಿ ಎಂಬ ಖೆಡ್ಡಾ...



ಇಡೀ ದೇಶದ ನೂರಾರು ಟಿವಿ ಚಾನೆಲ್‌ಗಳು ಮತ್ತು ಪತ್ರಿಕೆಗಳಲ್ಲಿ ಕಳೆದ ಒಂದು ವಾರದಿಂದ ಒಂದು ಸುದ್ದಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಕ್ರೈಸ್ತ ಮತ್ತು ಮುಸ್ಲಿಂ ಸಮುದಾಯಗಳಿಗೆ ಸೇರಿದ ಜನರನ್ನು "ಘರ್ ವಾಪಸಿ" ಎಂಬ ಹೆಸರಿನಲ್ಲಿ ಕೇಸರಿ ಪಡೆ ಹಿಂದೂ ಧರ್ಮಕ್ಕೆ ಮರು ಮತಾಂತರಗೊಳಿಸಲು ಆಯೋಜಿಸಿರುವ ಕಾರ್ಯಕ್ರಮದ ಸುದ್ದಿ ಅದು.

ಉತ್ತರ ಪ್ರದೇಶದ ಐತಿಹಾಸಿಕ ನಗರ ಆಗ್ರಾದ ಕೊಳಗೇರಿ ಪ್ರದೇಶವೊಂದರಲ್ಲಿ ಡಿಸೆಂಬರ್ 10ರಂದು ಈ ವಿಶಿಷ್ಟ ನಾಟಕ ನಡೆಯಿತು. ಮಾಧ್ಯಮಗಳಿಗೆ ಭರ್ಜರಿ ಸುದ್ದಿ. ಈ ಬಗ್ಗೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಕೋಲಾಹಲ ಎಬ್ಬಿಸಿದವು. ಆಡಳಿತಾರೂಢ ಬಿಜೆಪಿಯ ಪ್ರಭೃತಿಗಳು ಮುಸ್ಲಿಮರು 'ಸ್ವಯಂಪ್ರೇರಣೆ'ಯಿಂದ ಭಾಗವಹಿಸಿ ಹಿಂದೂ ಧರ್ಮಕ್ಕೆ ಬಂದಿದ್ದಾರೆ ಎಂದು ಸಮರ್ಥನೆ ಕೊಟ್ಟರು.

ಮೊದಲಿಗೆ ನಾವು 'ಸ್ವಯಂಪ್ರೇರಣೆ'ಯಿಂದ 'ಘರ್ ವಾಪಸಿ'ಗೆ ಒಳಗಾದ ಆಗ್ರಾದ ಆ 57 ಕುಟುಂಬಗಳ ಕತೆ ಕೇಳೋಣ. ಈ ಕುಟುಂಬಗಳು ಬಿಹಾರ ಮತ್ತು ಪಶ್ಚಿಮ ಬಂಗಾಳ ಪ್ರದೇಶದಿಂದ ಜೀವನೋಪಾಯ ಅರಸಿ ವಲಸೆ ಬಂದಂಥವು. ಸುಮಾರು 12 ವರ್ಷಗಳಿಂದ ಆಗ್ರಾದ ಹೊರವಲಯದಲ್ಲಿ ಜೋಪಡಿ ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಚಿಂದಿ ಆಯುವುದು ಇವರ ಪ್ರಮುಖ ಉದ್ಯೋಗ.

ಆ ದಿನ ಇಲ್ಲಿ ನಡೆದದ್ದೇನೆಂದು ಈ ಜನರ ಹಿರಿಯ ಇಸ್ಮೈಲ್ ಖಾನ್‌ನ ಮಾತುಗಳಲ್ಲೇ ಕೇಳಿ. "ಸುಮಾರು 15 ದಿನಗಳ ಹಿಂದೆ ಕಿಶನ್‌ಲಾಲ್ ಎಂಬ ವ್ಯಕ್ತಿ ನನ್ನಲ್ಲಿಗೆ ಬಂದರು. ನಿಮಗೆಲ್ಲಾ ರೇಷನ್ ಕಾರ್ಡ್ ಇದೆಯೆ ಎಂದು ಕೇಳಿದರು. ನಾನು ಹೌದು, ಇದೆ ಎಂದು ಹೇಳಿದೆ. ಎಲ್ಲರಿಗೂ ಬಿಪಿಎಲ್ ಕಾರ್ಡ್ ಇದೆಯೆ? ಎಂದು ಕೇಳಿದರು. ಇಲ್ಲ ಎಂದೆ. ನಂತರ ನಾವು ನಿಮಗೆ ಬಿಪಿಎಲ್ ಕಾರ್ಡ್ ಮಾಡಿಸಿಕೊಡುತ್ತೇವೆ, ಬಿಪಿಎಲ್ ಕಾರ್ಡ್ ಮಾಡಿಸಿಕೊಂಡರೆ ನಿಮಗೆ ಆಸ್ಪತ್ರೆ, ಶಾಲೆ ಎಲ್ಲಾ ಕಡೆ ಉಚಿತ ಸೌಲಭ್ಯ ಸಿಗುತ್ತದೆ ಎಂದು ಪುಸಲಾಯಿಸಿದರು.

ನಿಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸುವ ದಿನ ದೊಡ್ಡ ದೊಡ್ಡ ಲೀಡರ್‌ಗಳು ಬರುತ್ತಾರೆ, ಮೀಡಿಯಾದವರು ಬರುತ್ತಾರೆ ಎಂದರು. ಅದರಲ್ಲೇನು ಸಮಸ್ಯೆ ಅಂತಾ ನಾವು ಒಪ್ಪಿಕೊಂಡೆವು."

ನಂತರ ನಡೆದ ನಾಟಕವನ್ನು ಇದೇ ಸ್ಲಮ್ಮಿನ ನಿವಾಸಿ ಮುರ್ಷಿದಾ ಬೇಗಂ ಎಂಬ ಮಹಿಳೆಯ ಬಾಯಿಂದ ಕೇಳಿ. "ಅವತ್ತು ಮಧ್ಯಾಹ್ನ ಹಸಿಯ ಮೇಲೆ ನಾಮ ಬಳಿದುಕೊಂಡಿದ್ದ ಬಹಳ ಜನರು ಕಾರುಗಳಲ್ಲಿ ಬಂದಿಳಿದರು. ಅವರ ಜೊತೆ ಟಿವಿಯವರನ್ನೂ ಕರೆತಂದಿದ್ದರು. ತಾಡಪಾಲನ್ನು ನೆಲದ ಮೇಲೆ ಹಾಸಿ, ಒಂದು ಮೂಲೆಯಲ್ಲಿ ಒಂದು ವಿಗ್ರಹ ಇಟ್ಟರು. ಇದನ್ನೆಲ್ಲ ಕಂಡು ನಮಗೆ ಭಯವಾಯಿತು. ಅವರು ನಮ್ಮ ಗಂಡಸರಿಗೆ ತಲೆಯ ಮೇಲೆ ಟೋಪಿ ಇಟ್ಟುಕೊಳ್ಳುವಂತೆ ಹೇಳಿದರು. ನಮ್ಮವರ ಕೈಯಿಂದ ಬೆಂಕಿಗೆ ಏನನ್ನೋ ಹಾಕಿಸಿದರು. ಪೂಜಾರಿಗಳು ಮಂತ್ರ ಹೇಳಿಕೊಟ್ಟರು. ಅವರು ಹೇಳಿದಂತೆ ನಾವು ನಡೆಯದೆ ಹೋದರೆ ನಮಗೆ ಉಳಿಗಾಲವಿಲ್ಲ, ನಮಗೆ ಸ್ವಂತ ಜಾಗವೂ ಇಲ್ಲ, ಜಾಗ ಖಾಲಿ ಮಾಡಿ ಎಂದರೆ ನಾವು ಬಡವರು, ಎಲ್ಲಿಗೆ ಹೋಗೋದು ಹೇಳಿ? ಅವೆಲ್ಲಾ ತಾಪತ್ರಯ ಬೇಡ ಅಂತ ಅವರು ಹೇಳಿದಂತೆ ಕೇಳಿದ್ದೇವೆ ಅಷ್ಟೆ" ಎಂದು ನಡೆದ ದೃಷ್ಟಾಂತವನ್ನು ಬಿಚ್ಚಿಡುತ್ತಾಳೆ.

ಈ ಬಗ್ಗೆ ಸ್ಥಳೀಯ ಪೊಲೀಸ್ ಅಧಿಕಾರಿಯನ್ನು ವಿಚಾರಿಸಿದರೆ "ಬಲವಂತದ ಮತಾಂತರದ ನಡೆದ ಬಗ್ಗೆ ನಮಗೆ ಯಾವುದೇ ದೂರು ಬಂದಿಲ್ಲ; ದೂರು ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ" ಎನ್ನುತ್ತಾರೆ. ಪೊಲೀಸರಿಗೆ ಯಾಕೆ ದೂರು ಕೊಡಲಿಲ್ಲ ಎಂದು ಇಸ್ಮೈಲ್ ಖಾನ್‌ನನ್ನು ಕೇಳಿದರೆ "ದೊಡ್ಡವರನ್ನು ಎದುರು ಹಾಕಿಕೊಳ್ಳುವ ಕೆಲಸ ನಮಗ್ಯಾಕೆ ಬೇಕು ಸ್ವಾಮಿ? ಕೂಲಿನಾಲಿ ಮಾಡಿ ಬದುಕೋಕೆ ನಮ್ಮನ್ನು ನಮ್ಮ ಪಾಡಿಗೆ ಬಿಟ್ಟರೆ ನಮಗಷ್ಟೇ ಸಾಕು" ಎನ್ನುತ್ತಾನೆ.

ಈ ನಾಟಕ ಮಾಧ್ಯಮಗಳನ್ನು ಆವರಿಸುತ್ತಿದ್ದಂತೆ, ಮತ್ತಷ್ಟು ಉತ್ತೇಜಿತರಾದ ಕೇಸರಿ ಪಡೆಯ ಮಂದಿ ಡಿಸೆಂಬರ್ 25ರಂದು ಅಲಿಘರ್‌ನಲ್ಲಿ ಇಂಥದೇ ಬೃಹತ್ ಕಾರ್ಯಕ್ರಮ ನಡೆಸುವುದಾಗಿ ಘೋಷಿಸಿದರು. ಅಂದು 4000 ಮಂದಿ ಕ್ರಿಶ್ಚಿಯನ್ನರು ಮತ್ತು 1000 ಮಂದಿ ಮುಸ್ಲಿಮರು "ಘರ್ ವಾಪಸಿ"ಯಾಗುತ್ತಾರೆಂದು ಆರೆಸ್ಸೆಸ್‌ನ ಪ್ರಮುಖ ರಾಜೇಶ್ವರ್ ಸಿಂಗ್ ಸೋಲಂಕಿ ಘೋಷಿಸಿದ್ದಾನೆ.

ಈ ಹೊಸ ಬಗೆಯ ನಾಟಕಕ್ಕಾಗಿ ಆರೆಸ್ಸೆಸ್ 'ಹಿಂದೂ ಜಾಗರಣ್ ಸಮಿತಿ' ಎಂಬ ಮುಖವಾಣಿಯೊಂದನ್ನು ಹುಟ್ಟುಹಾಕಿದೆ. ಇದರ ಜೊತೆಗೆ ಉತ್ತರ ಪ್ರದೇಶದಲ್ಲಿ ಸಕ್ರಿಯವಾಗಿರುವ 'ಹಿಂದೂ ಯುವ ವಾಹಿನಿ-ಎಚ್‌ವೈವಿ'(ಇದನ್ನು ಎಚ್.ಐ.ವಿ ಎಂದು ಓದಿಕೊಳ್ಳಬಾರದೆಂದು ವಿನಂತಿ) ಕೂಡ ಸೇರಿಕೊಂಡಿದೆ. ಈ ಇಡೀ ಕರ್ಮಕಾಂಡದ ರೂವಾರಿ ಯೋಗಿ ಆದಿತ್ಯನಾಥ ಎಂಬ ಕಾವಿಧಾರಿ ಸನ್ಯಾಸಿ! ಈತನೇ ಗೋರಖ್‌ಪುರ ಕ್ಷೇತ್ರದ ಬಿಜೆಪಿಯ ಎಂಪಿ!

ಧರ್ಮ ಜಾಗರಣ್ ಸಮಿತಿಯ ವಕ್ತಾರ ರಾಜೇಶ್ವರ್ ಸಿಂಗ್‌ನ ಹೇಳಿಕೆ ಪ್ರಕಾರ ಈ ಡಿಸೆಂಬರ್ ಕೊನೆಯ ವೇಳೆಗೆ 20 ಸಾವಿರ ಕುಟುಂಬಗಳು, ಅಂದರೆ ಸುಮಾರು 1,25,000 ವ್ಯಕ್ತಿಗಳನ್ನು 'ಮರು ಮತಾಂತರ' ಮಾಡುವ ಯೋಜನೆ ಇದೆಯಂತೆ.

ಮೂಲ ಜಾತಿಯವರು ಅವರನ್ನು ಒಪ್ಪಿಕೊಳ್ಳುವಂತೆ ಮಾಡಲು ಆಯಾ ಸಮುದಾಯಗಳ ಮೇಳಗಳನ್ನು ಏರ್ಪಡಿಸಿ 'ಮರು ಮತಾಂತರ'ಗೊಂಡವರನ್ನು ಸ್ವಾಗತಿಸಲು ಕಾರ್ಯಕ್ರಮ ರೂಪಿಸುತ್ತಾರಂತೆ. ಇದರ ಎಲ್ಲ ಖರ್ಚುವೆಚ್ಚಗಳನ್ನು ಆರೆಸ್ಸೆಸ್ ನೋಡಿಕೊಳ್ಳುತ್ತದೆಯಂತೆ.

ಮುಸ್ಲಿಂ ಹಾಗೂ ಕ್ರೈಸ್ತರು ಹಿಂದೂಗಳಿಗೆ ಆಮಿಷ ಒಡ್ಡಿ ಮತಾಂತರ ಮಾಡಿದ್ದಾರೆ ಎಂದು ಸದಾ ಕೇಸರಿ ಪಡೆ ಪುಂಗಿ ಊದುತ್ತಿರುತ್ತದೆ ತಾನೆ? ಈ ಮರು ಮತಾಂತರದ ವಿದ್ಯಮಾನದಲ್ಲಿ ನಡೆದ ತಮಾಷೆ ನೋಡಿ. ಮಾಧ್ಯಮಗಳಲ್ಲಿ ವರದಿಯಾದಂತೆ ಕ್ರೈಸ್ತ ಧರ್ಮದಿಂದ ಹಿಂದೂ ಆಗಿ ಬರಲು ಒಪ್ಪಿದವರಿಗೆ 2 ಲಕ್ಷ ರೂ, ಮುಸ್ಲಿಂ ಧರ್ಮದಿಂದ ಹಿಂದೂ ಆಗಿ ಬಂದವರಿಗೆ 5 ಲಕ್ಷ ರೂ ಕೊಡುವ ಆಮಿಷ ಒಡ್ಡಲಾಗಿದೆ. ಈ ಬಗ್ಗೆ ಆಗ್ರಾ ನಗರದಲ್ಲಿ ಪೋಸ್ಟರ್ಸ್‌ಗಳನ್ನು ಹಾಕಲಾಗಿತ್ತೆಂದು ಟಿವಿ ವಾಹಿನಿಗಳು ಪ್ರಸಾರಪಡಿಸಿವೆ.

ಪ್ರಜಾತಂತ್ರದ ವೈಫಲ್ಯವೆ?

ಸಂಸತ್ತಿನಲ್ಲಿ ಈ ವಿಷಯ ಯಾವ ತಿರುವು ತೆಗೆದುಕೊಂಡಿದೆ ಎಂಬುದನ್ನು ನೋಡೋಣ. ಸಂಸತ್ತಿನಲ್ಲಿ ಬಿಜೆಪಿಯನ್ನು ಹೊರತುಪಡಿಸಿ ಬಹುತೇಕ ಎಲ್ಲ ಪಕ್ಷಗಳು ಈ ಮರು ಮತಾಂತರವನ್ನು ವಿರೋಧಿಸಿ ಗದ್ದಲಕ್ಕಿಳಿದಿವೆ. ಪ್ರಧಾನಿ ಈ ಬಗ್ಗೆ ಸಂಸತ್ತಿನಲ್ಲಿ ಹೇಳಿಕೆ ಕೊಡಬೇಕೆಂದು ಪಟ್ಟು ಹಿಡಿದಿವೆ. ಒಂದು ವಾರದಿಂದಲೂ ಈ ಒಂದು ವಿಷಯದ ಸುತ್ತ ಸಂಸತ್ತು ಗಿರಕಿ ಹೊಡೆಯುತ್ತಿದ್ದು ಕಲಾಪ ಸ್ಥಗಿತಗೊಂಡಿದೆ.

ಇಂಥಾ ಗೊಂದಲಮಯ ಸನ್ನಿವೇಶದಲ್ಲಿ ಬಿ... ಕೆಲವು ಮಂತ್ರಿಗಳು ಅಪಾಯಕಾರಿ ವಾದವೊ... ಮಂಡಿಸುತ್ತಿದ್ದಾರೆ. ಅವರ ಪ್ರಕಾರ ಮತಾಂತರ ... ಮರು ಮತಾಂತರ ಎಲ್ಲವೂ ಕೆಟ್ಟದ್ದೇ ಆಗಿರುವು... ಮತಾಂತರ ನಿಷೇಧ ಕಾಯಿದೆಯನ್ನು ಜಾರಿಗೆ ... ಇದೇ ಸಕಾಲ. ವಿರೋಧ ಪಕ್ಷಗಳು ಮರು ಮತಾ... ಘಟನೆಯ ಬಗ್ಗೆ ಹೆಚ್ಚೆಚ್ಚು ಮಾತಾಡಿದಷ್ಟೂ ... ಧುರೀಣರು ಮತಾಂತರ ನಿಷೇಧ ಕಾಯಿದೆ ... ಮಾಡೋಣ ಎಂಬ ವಾದವನ್ನು ಮುಂದೆ ತರು... ಹೀಗೆ 'ಘರ್ ವಾಪಸಿ'ಯನ್ನು ವಿರೋಧಿಸುವ ವಿ... ಪಕ್ಷಗಳು ಕೇಸರಿ ಕೂಟ ತೋಡಿದ್ದ ಖೆಡ್ಡಾದೊಳಕ್ಕೆ ಬ... ದುಸ್ಥಿತಿ ಎದುರಾಗಿದೆ.

ಪ್ರತಿನಿತ್ಯ ಒಂದಲ್ಲ ಒಂದು ನೆಪದಲ್ಲಿ ಟಿವಿ... ಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ ಪುಕ್ಕಟೆ ಭಾಷಣ ಬಿಗಿ... ಮೋದಿ ಈ ವಿಷಯದಲ್ಲಿ ಮಾತ್ರ ತುಟಿ ಬಿಚ್ಚು...

ಮೋದಿ ಬಾಯಿಗೆ ಕಡುಬು ತುರುಕಿಕೆ... ಕೂತಿದ್ದರೂ ಸರ್ಕಾರದ ಪರವಾಗಿ ಆತನ ... ಬ್ಯಾಟ್ಸ್‌ಮನ್ ಗಳು ಕಣಕ್ಕಿಳಿದಿದ್ದಾರೆ. "ಕಾನೂನು ಸ... ರಾಜ್ಯಕ್ಕೆ ಸಂಬಂಧಿಸಿದ ವಿಷಯ, ಹಾಗಾಗಿ ರಾಜ್ಯ ... ಈ ಬಗ್ಗೆ ಕ್ರಮ ಕೈಗೊಳ್ಳಬೇಕು; ಕೇಂದ್ರ ಸ... ಇದರಲ್ಲಿ ಯಾವುದೇ ಪಾತ್ರವಿಲ್ಲ" ಎಂದು ಮು... ಅಬ್ಬಾಸ್ ನಖ್ವಿ ಎಂಬ ಸಚಿವನ ಹೇಳಿಕೆ ಹೊರ...

ಇಲ್ಲಿ ಒಂದು ವಿಷಯ ಹಗಲಿನಷ್ಟು ಸ್ಪಷ್ಟ. ... ಪಡೆ ದೇಶಕ್ಕೆ ಬೆಂಕಿ ಹಚ್ಚಿ ಚಳಿ ಕಾಯಿಸಿಕೊಳ್ಳುವ... ಹಿಡನ್ ಅಜೆಂಡಾಗಳನ್ನು ಎಂದಿಗೂ ಕೈಬಿಡು... ಸಮಯ ಸಂದರ್ಭ ನೋಡಿ ಚಾಣಾಕ್ಷತನದ ಹೆಜ್ಜೆ ಇ... ತಮ್ಮನ್ನು ತಾವು ಉದಾರವಾದಿ ಬುದ್ಧಿಜೀ... ಎಂದುಕೊಳ್ಳುವ ಕೆಲವರು ಸಂಘ ಪರಿವಾರದ ಹ... ವಿಷಯಗಳನ್ನು ನಿರ್ಲಕ್ಷಿಸಿದರೆ ಸರಿಯಾಗುತ್ತದೆ ... ಉಪದೇಶ ಕೊಡುತ್ತಿರುತ್ತಾರೆ. ಮೋದಿ ಪ್ರಧಾನಿ... ಮೇಲೆ ಮುಗಿಯಿತಲ್ಲಾ. ಕೋಮುವಾದಿ ಅ... ಕಡಿಮೆಯಾಗುತ್ತದೆ ಎಂದು ತರ್ಕ ಮಂಡಿಸು... ಇದ್ದಾರೆ. ಈ ಸಂದರ್ಭದಲ್ಲಿ ನಾವೆಲ್ಲರೂ ... ಮಾಡಿಕೊಳ್ಳಬೇಕಿರುವ ಒಂದು ಸರಳ ಸತ್ಯವೇನೆಂದರೆ ... ಅಧಿಕಾರಕ್ಕೇರುವುದರೊಂದಿಗೆ ಎಲ್ಲವೂ ಮುಗಿದುಹೋ... ಮೋದಿ ಜೊತೆಗೆ ಹಿಂದೂ ಕೋಮುವಾದಿಗಳ ... ಪ್ರಾರಂಭವಾಗಿದೆ. ಇನ್ನು 'ಅಚ್ಛೆ ದಿನ್'ಗಳು ... ಸಾಧ್ಯತೆಗಳೇ ಇಲ್ಲ.

● ದೊಡ್ಡಿಪಾಳ್ಯ ನರಸಿಂಹಮೂ...

'ಮನೆಗೆ ಮರಳಿದವರ' ಜಾತಿ ಯಾವುದು?

"ಭಾರತದ ಕ್ರಿಶ್ಚಿಯನ್ ಹಾಗೂ ಮುಸ್ಲಿಮರ ಪೂರ್ವಜರು ಹಿಂದೂಗಳೇ ಆಗಿದ್ದರು. ಆದ್ದರಿಂದ ಅವರನ್ನು ಮರು ಮತಾಂತರ ಮಾಡಿ, ವಾಪಸ್ ನಮ್ಮ ಧರ್ಮಕ್ಕೆ ಕರೆತರುವುದರಲ್ಲಿ ಯಾವ ತಪ್ಪೂ ಇಲ್ಲ" ಎಂಬುದು ಕೇಸರಿ ಕೂಟದ ವಾದ. ಸದ್ಯಕ್ಕೆ ಈ ವಿತಂಡವಾದವೇ ಸರಿಯೆಂದು ಒಪ್ಪಿಕೊಂಡರೂ ಸಮಸ್ಯೆ ಬಗೆಹರಿಯುವುದಿಲ್ಲ.

ಹಿಂದೂ ಧರ್ಮಕ್ಕೆ 'ಬಂದವರನ್ನು' ಯಾವ ಜಾತಿಗೆ ಸೇರಿಸಿಕೊಳ್ಳುತ್ತಾರೆ? ಜಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು 'ಘರ್ ವಾಪಸಿ'ಗಳದ್ದೋ? ಆರೆಸ್ಸೆಸ್ ಕೂಟ ಅವರಿಗೆ ಇಂಥಾ ಜಾತಿ ಎಂದು ನಿಗದಿಪಡಿಸುತ್ತದೆಯೋ? ಹಾಗೆ ಜಾತಿ ನಿಗದಿಯಾದ ನಂತರ ಆ ನಿರ್ದಿಷ್ಟ ಜಾತಿಯವರು ಈ ಘರ್ ವಾಪಸಿಗಳನ್ನು ತಮ್ಮೊಳಗೆ ಬಿಟ್ಟುಕೊಳ್ಳುತ್ತಾರೋ? ಭಾರತದ ನೆಲದಲ್ಲಿ ಜೀವಿಸುತ್ತಿರುವ ಕಾಮನ್ ಸೆನ್ಸ್ ಇರುವ ಯಾರಿಗೇ ಆದರೂ ಈ ಪ್ರಶ್ನೆಗಳು ಎದುರಾಗುವುದು ಸಹಜ.

ಹೀಗೆ 'ಮನೆಗೆ ಮರಳಿದವರು' ಮನೆಯ ಹಜಾರದಲ್ಲೋ, ದನದ ಕೊಟ್ಟಿಗೆಯಲ್ಲೋ ನೆಲೆಯೂರಲು ಒಪ್ಪಿದರೆ ಆರೆಸ್ಸೆಸ್ ದುಷ್ಟಕೂಟಕ್ಕೆ ಎಲ್ಲಿಲ್ಲದ ಆನಂದವಾದೀತು. ಆದರೆ ಅವರು ಹಠ ಹಿಡಿದು ನಡುಮನೆಯಲ್ಲೇ ಬಿಡಾರ ಹೂಡುತ್ತೇವೆಂದರೆ ಏನು ಮಾಡುವುದು? ದೇವರ ಕೋಣೆಗೂ, ಅಡುಗೆ ಮನೆಗೂ ಪ್ರವೇಶ ಬೇಕೇ ಬೇಕು ಎಂದು ಹಕ್ಕು ಚಲಾಯಿಸಿದರೆ ಶತಶತಮಾನಗಳಿಂದ ತಮ್ಮ ಆಜನ್ಮಸಿದ್ಧ ಹಕ್ಕು ಸ್ಥಾಪಿಸಿರುವ ಜುಟ್ಟು ಜನಿವಾರಿಗಳ ಕತೆಯೇನು? ಹೀಗೆ ಕೆದಕಿದಷ್ಟೂ ಪ್ರಶ್ನೆಗಳ ರಾಶಿಯೇ ಹೊರತು ಅದಕ್ಕೆ ಉತ್ತರ ಸಿಗುವುದು ಕಷ್ಟ ಎನಿಸುತ್ತದೆ ತಾನೆ?

ಆದರೆ ಜಾತಿವಾದದ ಕೊಳಕಿನಲ್ಲಿ ಹೂತುಹೋಗಿರುವ ಸಂಘ ಪರಿವಾರಕ್ಕೆ ಸರಳ ಉತ್ತರವಿದೆ. ವಿಶ್ವಹಿಂದೂ ಪರಿಷತ್‌ನ ಮುಖಂಡನಾದ ವೆಂಕಟೇಶ ಅಬ್‌ದೇವ್ ಎಂಬ ಆಸಾಮಿ ಇದಕ್ಕೆ ವಿಚಿತ್ರ ಪರಿಹಾರವೊಂದನ್ನು ಒದಗಿಸಿದ್ದಾನೆ. ಆತನ ಪ್ರಕಾರ 'ಮರು' ಮತಾಂತರಿಗಳು ತಮಗೆ ಬೇಕಾದ ಜಾತಿಯನ್ನು ಆಯ್ಕೆ ಮಾಡಿಕೊಳ್ಳಬಹುದಂತೆ. ಆದರೆ ಈ ಮತಾಂತರಿಗಳ ಪೂರ್ವಜರ ಸಂಪ್ರದಾಯ, ಶ್ರದ್ಧೆ ಮತ್ತು ಸಂಸ್ಕೃತಿಗಳ ಬಗ್ಗೆ ವಿಎಚ್‌ಪಿ ತನಿಖೆ ನಡೆಸಿ ಅವರ ನಿಜವಾದ ಜಾತಿ ಪತ್ತೆ ಮಾಡಿ, ಅವರನ್ನು ಸೂಕ್ತ ಜಾತಿಗೆ ಸೇರ್ಪಡೆ ಮಾಡುತ್ತದಂತೆ!

ಹೇಗಿದೆ ಪುರೋಹಿತಶಾಹಿ ಮಸಲತ್ತು?

ಮತಾಂತರವೋ? ರಾಜಕೀಯಾಂತರವೊ...

ಮತಾಂತರದ ಬಗ್ಗೆ ವಿವಾದ ಸೃಷ್ಟಿಸಲು ಆರೆಸ್ಸೆಸ್ ಅನಾದಿಯಿಂದಲೂ ಪ್ರಯತ್ನಿಸುತ್ತಲೇ ಇದೆ. ಆದರೆ ಈಗ ತಮ್ಮದೇ ಕೈಗೊಂಬೆ ಸರ್ಕಾರ ಇರುವ ಸಂದರ್ಭದಲ್ಲಿ ಈ ವಿಷಯದ ವಿವಾದ ಸೃಷ್ಟಿಸಲು ಕಾರಣವೇನು? ಅದರಲ್ಲೂ ಸಂಸತ್ ಅಧಿವೇಶನ ಸೇರಿರುವ ಸಂದರ್ಭದಲ್ಲೇ ಘರ್ ವಾಪಸಿ ಆರಂಭಿಸಲು ಕಾರಣವೇನು?

ಈ ವಿದ್ಯಮಾನದ ಹಿಂದೆ ಬಲವಾದ ಕಾರಣಗಳಿವೆ. ಮೋದಿ ನಾಯಕತ್ವದಲ್ಲಿ ಗದ್ದುಗೆ ಹಿಡಿಯುವಾಗ ಈ ದೇಶದ ಜನರಿಗೆ ಕೊಟ್ಟ ಆಶ್ವಾಸನೆಗಳನ್ನು ಒಮ್ಮೆ ನೆನಪಿಸಿಕೊಳ್ಳಿ. ಕಪ್ಪುಹಣವನ್ನು ವಾಪಸ್ ತಂದು ಅದನ್ನು ದೇಶದ ಅಭಿವೃದ್ಧಿಗೆ ಬಳಸುವುದು, ಭ್ರಷ್ಟಾಚಾರವನ್ನು ಬುಡಸಮೇತ ಕಿತ್ತು ಹಾಕುವುದು, ಎಲ್ಲ ಹಗರಣಗಳ ತನಿಖೆ ನಡೆಸಿ ತಪ್ಪತಸ್ಥರಿಗೆ ಶಿಕ್ಷೆ ವಿಧಿಸುವುದು, ಬೆಲೆಯೇರಿಕೆ, ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವುದು.... ಒಂದೇ ಎರಡೇ?

ಆದರೆ ಈ ಆರು ತಿಂಗಳಲ್ಲಿ ನಾವು ಕಂಡಿರುವುದೇನು? ಮೋದಿ ತನ್ನ ಆಶ್ವಾಸನೆಗಳನ್ನು ಪೂರ್ಣ ಮಾಡುವುದಿರಲಿ, ಕನಿಷ್ಟ ಆ ದಿಕ್ಕಿನಲ್ಲಿ ನಿರ್ಣಾಯಕ ಹೆಜ್ಜೆಗಳನ್ನೂ ಇಟ್ಟಿಲ್ಲ. ತನ್ನ ಮೇಲೆ ನಿರೀಕ್ಷೆ ಇಟ್ಟುಕೊಂಡವರಿಗೆ ಬೇಸರವಾಗಬಹುದು ಎಂದು ಮೋದಿಯೇ ಒಮ್ಮೆ ಹೇಳಿದ್ದನ್ನು ನೆನಪಿಸಿಕೊಳ್ಳಿ. ಮೋದಿಯನ್ನು ನಂಬಿಕೊಂಡ ಮತದಾರರು ಪುಕ್ಕಟೆ ಭಾಷಣಗಳು, ಜಾಹಿರಾತುಗಳಲ್ಲೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ಮತ್ತೊಂದೆಡೆ ಮೋದಿ ತನ್ನ ಆಡಳಿತದಲ್ಲಿ ಸಾಧಿಸಿರುವ ಕೆಲವು ಪ್ರಮುಖ ಅಂಶಗಳಿವೆ. ಅದರಲ್ಲಿ ಕೆಲವನ್ನು ಪಟ್ಟಿ ಮಾಡೋಣ.

- ತನ್ನ ಪರಮ ಆಪ್ತ ಅದಾನಿ ಕಂಪನಿಗೆ 12,000 ಕೋಟಿಗಳಷ್ಟು ಸರ್ಕಾರಿ ಬ್ಯಾಂಕಿನ ಹಣವನ್ನು ಹರಿಸಲಾಗಿದೆ. ಅದಾನಿ ಸಮೂಹ ಪ್ರತಿ ತಿಂಗಳಿಗೆ ಒಂದರಂತೆ ಹೊಸ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ.
- ನೈಸರ್ಗಿಕ ಅನಿಲದ ದರವನ್ನು ಸದ್ದುಗದ್ದಲವಿಲ್ಲದೆ ಶೇಕಡ 25 ರಷ್ಟು ಏರಿಕೆ ಮಾಡಲಾಗಿದೆ. ಇದರಿಂದ ದೇಶದ ಬೊಕ್ಕಸಕ್ಕೆ ಪ್ರತಿ ವರ್ಷ ಸಾವಿರಾರು ಕೋಟಿಗಳ ನಷ್ಟವಾದರೆ ಮೋದಿಯ ಮಿತ್ರ ಮುಖೇಶ್ ಅಂಬಾನಿಯ ಆಸ್ತಿ ರಾಕೆಟ್ ವೇಗದಲ್ಲಿ ಹೆಚ್ಚಲಿದೆ.

ಈ ಬಗ್ಗೆ ಅರವಿಂದ್ ಕೇಜ್ರಿವಾಲ್ ಕೇಸು ... ಸಿಎಂ ಪದವಿ ತ್ಯಜಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬ...


- ಬಂಡವಾಳಿಗರ ಪರವಾದ ಹಾಗೂ ಕಾರ್ಮಿಕ... ಹಿಸುಕುವಂಥ ಕಾರ್ಮಿಕ ಕಾಯಿದೆಯನ್ನು ... ತರಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ.
- ರೈಲ್ವೆ ದರವನ್ನು ಶೇ.14ರಷ್ಟು ಏರಿಸಲಾಗಿದೆ. ... ಮತ್ತಿತರ ನಿರ್ಮಾಣ ಸಾಮಗ್ರಿಗಳ ಬೆಲೆ ಯ... ಏರುತ್ತಲೇ ಇದೆ.
- ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸ... ವಿಮಾ ಕ್ಷೇತ್ರವನ್ನು ವಿದೇಶಿ ಹಾಗೂ ... ಬಂಡವಾಳಿಗರ ಬಾಯಿಗೆ ಹಾಕಲು ನಿ... ಕೈಗೊಳ್ಳಲಾಗಿದೆ.
- ರಕ್ಷಣಾ ಕ್ಷೇತ್ರದಲ್ಲಿ ಶೇ.100ರಷ್ಟು ವಿದೇಶಿ ಹ... ಅನುಮತಿ ನೀಡಲಾಗಿದೆ.
- ಬಡಜನರಿಗೆ ನೀಡಲಾಗಿದ್ದ ಹಲವು ಸಬ್ಸಿ... ಕಡಿತ ಮಾಡಲಾಗಿದೆ. ಹೀಗೆ ಪಟ್ಟಿ ಮ... ಹೋದರೆ ಇದಕ್ಕೆ ಕೊನೆ ಮೊದಲೇ ಇಲ್ಲ...

ಹೀಗೆ ಮೋದಿಯ ದುರಾಡಳಿತ ಕೇವಲ 6 ... ತನ್ನ ರಾಕ್ಷಸ ರೂಪ ತೆರೆದಿಟ್ಟಿದೆ. ಇಂಥಾ ಜನ ವಿ... ಭ್ರಷ್ಟ ಕ್ರಮಗಳ ಬಗ್ಗೆ ಈ ಅಧಿವೇಶನದಲ್ಲಿ ... ಸರ್ಕಾರಕ್ಕೆ ನೀರು ಕುಡಿಸಲು ವಿರೋಧ ಪಕ್ಷಗಳು... ದ್ದವು. ಸಂಸತ್ತಿನಲ್ಲಿ ಈ ವಿಷಯಗಳು ಚರ್ಚೆಗೆ ಒಳ... ಮೋದಿಯ ನಿಜಬಣ್ಣ ಬಟಾಬಯಲಾಗುವ ಅಪಾ...

ತನ್ನ ದುರಾಡಳಿತ ಮತ್ತು ವೈಫಲ್ಯಗಳು ... ಬರದಂತೆ ಕಾಲ್ಪನಿಕ ಸಮಸ್ಯೆಗಳನ್ನು ಮುಂದು ... ರಾಜಕೀಯ ವಿಷಯಾಂತರ ಮಾಡಲು ಕೇಸರಿ ಪಡೆ... ಹೊಸಹೊಸ ತಂತ್ರ ಹೆಣೆಯುತ್ತಿದೆ. ಇಂಥಾ ತ... ಭಾಗವಾಗಿ ಈ ಕೂಟಕ್ಕೆ 'ಘರ್ ವಾಪಸಿ' ಕಾಂ... ಒದಗಿಬಂದಿದೆ.

ದೇಶವನ್ನು ಕಾಡುತ್ತಿರುವ ಮಹತ್ವದ ಸಮಸ್ಯೆಗ... ಚರ್ಚಿಸಬೇಕಿದ್ದ ಸಂಸತ್ತಿನ ಇಡೀ ಅಧಿವೇಶನವನ್ನು... ಕಾಲ್ಪನಿಕ ಸಮಸ್ಯೆಯ ಸುತ್ತ ಗಿರಕಿ ಹೊಡೆ... ಮಾಡುವಲ್ಲಿ ಮೋದಿ ಪಟಾಲಂ ಯಶಸ್ವಿಯಾಗಿದೆ... ಕೇಸರಿ ಕೂಟದ ಮತಾಂತರದ ಒಳಹೂರಣ ... ಯಾಂತರವೇ ಅಲ್ಲವೆ?

ನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಒಂದು ಬಹಿರಂಗ ಪತ್ರ



ನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಪ್ರೀತಿಯ
ಂಡಲೀಕ ಹಾಲಂಬಿಯವರಿಗೆ ವಂದನೆಗಳು,

ರತದ ಸಂವಿಧಾನವು ಅಂಗೀಕರಿಸಲ್ಪಟ್ಟ 22 ದೇಶೀ ಸು ಹಾಗೂ ದೇಶದಾದ್ಯಂತ ಇರುವ ಅನೇಕಾನೇಕ ್ಯಾತ ಭಾಷೆಗಳು ಇತ್ತೀಚಿನ ಸುಪ್ರೀಂಕೋರ್ಟ್ ಬದಾಗಿ ಕಾಲು ಕತ್ತರಿಸಿಕೊಂಡು ಚಲನೆ ಇಲ್ಲದ ುಪಿರುವ ಈ ಸಂದರ್ಭದಲ್ಲಿ ಏನು ಹೇಳುವುದು? ೇಳುವುದು? ಯಾಕೆಂದರೆ ಸುಪ್ರೀಂಕೋರ್ಟ್‌ನಲ್ಲಿ ಾಧ್ಯಮದ ವಾದ-ವಿವಾದ ನಡೆಯುತ್ತಿದ್ದಾಗ ೀಶರೊಬ್ಬರು "ಡೆಲ್ಲಿಗೆ ಬಂದಿದ್ದ ಜಪಾನ್ ದೇಶದ ಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ನಲ್ಲಿ ಮಾತಾಡಿದರು, ಅವರು ಇಂಗ್ಲಿಷ್‌ನಲ್ಲಿ ಡೇ ಹೋಗಿದ್ದರೆ ಯಾರಿಗೂ ತಿಳಿಯುತ್ತಿರಲಿಲ್ಲ, ಕುರಿತು ಮಡಿವಂತಿಕೆ ಹೊಂದಿದ್ದ ಚೈನಾ ದೇಶವೂ ಇಂಗ್ಲಿಷ್‌ನ ಸಾಧ್ಯತೆಗಳಿಗೆ ತೆರೆದುಕೊಳ್ಳುತ್ತಿದೆ" ಪತ್ರಿಕೆಗಳಲ್ಲಿ ವರದಿಯಾಗಿತ್ತು, ಬಹಳ ಹಿಂದೆ ೊಬ್ಬರು ಇಂಗ್ಲೆಂಡ್‌ಗೆ ಹೋಗಿ ಬಂದು 'ಅಬ್ಬಬ್ಬಾ ್‌ನಲ್ಲಿ ಚಿಕ್ಕಚಿಕ್ಕ ಮಕ್ಕಳೂ ಇಂಗ್ಲಿಷ್‌ನಲ್ಲಿ ಾರೆ' ಅಂದಿದ್ದ, ಆ ಮುಗ್ಧತೆಯಂತೆಯೇ ಇದೂ ುತ್ತದೆ. ಇದರ ಬದಲು ಆ ಸುಪ್ರೀಂಕೋರ್ಟ್‌ನ ೀಶರು 'ತಾನು ಭಾರತದ ಸರ್ವೋಚ್ಚ ನ್ಯಾಯಾಧೀಶ, ಜಪಾನ್‌ನ ಸರ್ವೋಚ್ಚ ನ್ಯಾಯಾಧೀಶರು, ಈಗ ುಂದೆ ಪ್ರಾಥಮಿಕ ಶಿಕ್ಷಣ ಮಾಧ್ಯಮ ವಿಚಾರ ಬಂದಿದೆ. ಜಪಾನ್‌ನಲ್ಲಿ ಹೇಗಿರಬಹುದು?' ಎಂಬ ಲ್ಕಾದರೂ ಚರ್ಚಿಸಿದ್ದರೆ ಆಗ ಜಪಾನ್‌ನಲ್ಲಿರುವುದು ಭಾಷಾ ಶಿಕ್ಷಣ ಮಾಧ್ಯಮ ಎಂಬುದಾದರೂ ರುತ್ತಿತ್ತು, ಜಗತ್ತಿನ ಯಾವುದೇ ಭಾಷೆಯ ಶ್ರೇಷ್ಠ ಪ್ರಕಟವಾದ ಒಂದು ವಾರದೊಳಗೆ ಅದು ಜಪಾನಿ ಅನುವಾದಗೊಂಡು ಪ್ರಕಟಗೊಳ್ಳುವ ವಿದ್ಯಮಾನವೂ ರುತ್ತಿತ್ತು, ಹಾಗೇ ಚೈನಾದಲ್ಲೂ ಶಿಕ್ಷಣ ಮಾಧ್ಯಮವು ಭಾಷೆಯಲ್ಲಿ ಇದ್ದು ಚೈನಾ ತನ್ನ ಸಾಮ್ರಾಜ್ಯವನ್ನು ು ಭಾಷೆಯಾಗಿ ಇಂಗ್ಲಿಷ್, ಸ್ಪಾನಿಷ್ ಹೀಗೆ ್ನ ಪ್ರಮುಖ ಭಾಷೆಗಳನ್ನೆಲ್ಲಾ ಕಲಿಸಲು ಸಿಕ್ಕಾಪಟ್ಟೆ ಮಾಡುತ್ತಿರುವುದು ಗೋಚರಿಸುತ್ತಿತ್ತು, ಹೀಗೇ ಕೊರಿಯಾ, ಥೈಲಾಂಡ್, ಸ್ಕಾಂಡಿನೇವಿಯನ್ ು, ಜಿ-8 ದೇಶಗಳು ಹೀಗೆ ಸ್ವತಂತ್ರವಾಗಿರುವ ್ಲಿ ಅವರವರ ಮಾತೃಭಾಷೆಯ ಶಿಕ್ಷಣ ಮಾಧ್ಯಮ ಆಯ್ಕೆಯಾಗಿದೆ. ಇಸ್ರೇಲ್‌ನಲ್ಲೂ ಯೆಹೂದಿಗಳು ಮಾತೃಭಾಷೆಯೇ ಶಿಕ್ಷಣ ಮಾಧ್ಯಮ. ಉನ್ನತ ಲ್ಲಿ ಕೆಲವು ಕಡೆ ಅಲ್ಪಸ್ವಲ್ಪ ಬದಲಾವಣೆ ದಷ್ಟೇ. ಅಷ್ಟೇಕೆ, ಮಲೇಷಿಯಾದ ರಾಷ್ಟ್ರೀಯ ಲ್ಲಿ 'ಬಹಾಸ ಮಲೇಷಿಯಾ' ಮತ್ತು ಸ್ಥಳೀಯ ್ಲಿ ಚೈನೀಸ್ ಮತ್ತು ತಮಿಳು ಭಾಷಾ ಮಾಧ್ಯಮ ಿತ ಮತ್ತು ವಿಜ್ಞಾನಗಳನ್ನು ಬೋಧಿಸಲಾಗುತ್ತಿದೆ. ರತದಲ್ಲಿ ತಮಿಳರು 'ತಮಿಳ್ ತಮಿಳ್' ಎಂದು ್ಚಿಕೊಂಡು ತಮಿಳು ಪದ ಉಚ್ಚಾರಣೆ ುದರಲ್ಲೇ ಸಂತೋಷಪಡುತ್ತಿದ್ದಾರೆ. ತಮಿಳು ಶಿಕ್ಷಣ ಮವಾಗಿ ಬೆಳೆದಿದ್ದರೆ ಆ ನೆರಳಲ್ಲಿ ನಾವೂ ಬಹುದಿತ್ತು.

್ಚಿನಲ್ಲಿ ಯಾವ ಸ್ವತಂತ್ರ ದೇಶವೂ ತನ್ನ ಾಷೆಗಳನ್ನು ಕೊಂದು ಪರಭಾಷೆಯನ್ನು ಸ್ವೀಕರಿಸಿಲ್ಲ, ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮ ಕೇಂದ್ರ ೊಂದು ಪರಭಾಷೆಯನ್ನು ಒಂದು ಭಾಷೆಯಾಗಿ ಜತೆ ಒಟ್ಟಾಗಿ ಜೊತೆಗೂಡಿ ಬೆಳೆಯುವ ಪ್ರಕ್ರಿಯೆ ್ಯಂತ ಜರುಗುತ್ತಿದೆ. ಹಾಗಾದರೆ ಭಾರತಕ್ಕೇನಾಗಿದೆ? ಗುಲಾಮಗಿರಿಯಿಂದ ಭೌತಿಕವಾಗಿ ಬಿಡುಗಡೆ ್ದರೂ ಮಾನಸಿಕ ಗುಲಾಮಗಿರಿ ಸೋಂಕು ಇನ್ನೂ ಿಲ್ಲವೇನೋ. ಇಂದು ಈ ಜಗತ್ತಿನ ಓಟ ಅಂದರೆ ್ಧಿ ಮತ್ತು ಸ್ಪರ್ಧೆ - ಈ ದೃಷ್ಟಿಯಲ್ಲಿ ನೋಡಿದರೂ ದಲ್ಲಿ ದಾಪುಗಾಲು ಹಾಕುತ್ತಿರುವ ಚೈನಾ, ಜಪಾನ್, ಾ, ಥಾಯ್‌ಲೆಂಡ್ ದೇಶಗಳಲ್ಲಿ ಸಮಾನ ಮತ್ತು ಮಾತೃಭಾಷಾ ಶಿಕ್ಷಣ ಮಾಧ್ಯಮ ಇರುವುದಕ್ಕೂ ಅವುಗಳ ಅಭಿವೃದ್ಧಿ ಮತ್ತು ಸ್ಪರ್ಧೆ ಓಟಕ್ಕೂ ಸಂಬಂಧವಿರಬೇಕೇನೋ ಅನ್ನಿಸುತ್ತದೆ. ಯಾಕೆಂದರೆ ಮಾತೃಭಾಷಾ ಸಮಾನ ಶಿಕ್ಷಣದಲ್ಲಿ ಇಡೀ ಸಮುದಾಯದೊಳಗಿಂದ ಎಲ್ಲೆಲ್ಲಿಂದಲೋ ಯಾರ್ಯಾರೋ ಪ್ರತಿಭಾವಂತರು ಕುಶಲಿಗಳು ಹುಟ್ಟಿಕೊಂಡು ದೇಶದ ಸಂಪತ್ತಾಗುತ್ತಾರೆ. ಮನೆಮನೆಯಲ್ಲೂ ಜ್ಞಾನಾಧಾರಿತ ಕೌಶಲ್ಯ ಉಳ್ಳವರ ಆರ್ಥಿಕ ಚಟುವಟಿಕೆ ಹೆಚ್ಚುತ್ತದೆ. ಇಂಥವು ಯಾಕೆ ನಮ್ಮ ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗಗಳಿಗೆ ಕಾಣುತ್ತಿಲ್ಲ? ಇದು ದೇಶಕೋಶ ತಿರುಗುವ ಐಟಿಬಿಟಿ ಮಂದಿಗಾದರೂ ಅವರ ಲಾಭದ ದೃಷ್ಟಿಯಿಂದಲಾದರೂ ಯಾಕೆ ಕಾಣಲಿಲ್ಲ? ಇದು ಚಿದಂಬರ ರಹಸ್ಯವೇನೂ ಅಲ್ಲ, ಭಾರತವು ಹಿಂದೆ ಶೂದ್ರ ಸಮುದಾಯಕ್ಕೆ ಶಿಕ್ಷಣವನ್ನೇ ಕೊಡಬಾರದು ಎಂಬ ನಿರಾಕರಣೆಯನ್ನು ಮೀರಿ ಈಗ ಎಲ್ಲರಿಗೂ ಶಿಕ್ಷಣ ಎಂಬ ಮಾತನ್ನೇನೋ ಹೇಳುತ್ತಿದೆ. ಆದರೆ ಶಿಕ್ಷಣದೊಳಗೇ ತಾರತಮ್ಯದ ಜಾತಿ-ವರ್ಗ ರೋಗದ ಪಂಚವರ್ಣ ಪದ್ಧತಿ ಅಳವಡಿಸಿಕೊಂಡಿದೆ, ಚಾತುರ್ವರ್ಣದ ಸ್ವಭಾವವಾದ ಪ್ರತ್ಯೇಕತೆ, ತಾರತಮ್ಯ ಉಳಿಸಿಕೊಂಡಿದೆ. 1963-64ರ ಕೊಠಾರಿ ಶಿಕ್ಷಣ ಆಯೋಗವು ಹೇಳಿದ್ದ "ಸಮಾನ ಶಿಕ್ಷಣ ಅನುಷ್ಠಾನ ಮಾಡದಿದ್ದರೆ ಶಿಕ್ಷಣವೇ ಸಾಮಾಜಿಕ ಪ್ರತ್ಯೇಕತೆ ಮತ್ತು ವರ್ಗಗಳನ್ನು ಹೆಚ್ಚಿಸಿ ಮತ್ತಷ್ಟು ಕಂದರ ಉಂಟುಮಾಡುತ್ತದೆ" ಎಂಬ ಮಾತು ನಮ್ಮೆದುರು ಇದ್ದೂ ಕೂಡಾ ಭಾರತ ಪಂಚವರ್ಣ ಶಿಕ್ಷಣವನ್ನು ನೀಡುತ್ತಿರುವುದು ಏನನ್ನು ಹೇಳುತ್ತದೆ? ಬಹುಶಃ ಭಾರತಕ್ಕೆ ತಾರತಮ್ಯ ಪ್ರತ್ಯೇಕತೆ ಮೇಲುಕೀಳು ಇಲ್ಲದಿದ್ದರೆ ನಿದ್ದೆ ಬರುವುದಿಲ್ಲವೇನೋ. ಒಂದು ಕಡೆ ಗುಲಾಮಗಿರಿಯ ಸೋಂಕು, ಇನ್ನೊಂದು ಕಡೆ ವರ್ಗ-ಜಾತಿಯ ಸೋಂಕು, ಇದು- ಕಾರ್ಯಾಂಗ, ರಾಜ್ಯಾಂಗ, ನ್ಯಾಯಾಂಗ ಅಂತ ಏನೇನು ಇದೆಯೋ ಅಲ್ಲೆಲ್ಲಾ ಈ ಅಂಟುರೋಗ ಅಂಟಿರಬೇಕು.



ಹಾಗಾಗೇ ಭಾರತದಲ್ಲಿ ಇಂದು 'ಪಂಕ್ತಿಭೇದ ಶಿಕ್ಷಣಪದ್ಧತಿ' ನಮ್ಮ ಮುಂದಿದೆ. ಜಾತಿ ತಾರತಮ್ಯದ ಭಾರತದಲ್ಲಿ ಎಳೆಯ ಮಕ್ಕಳ ಮನಸ್ಸು ಆಕಾರ ಪಡೆಯುವಾಗಲಿನ ಪ್ರಾಥಮಿಕ ಶಿಕ್ಷಣದಲ್ಲಿ ನಮ್ಮ ಎಲ್ಲಾ ಜಾತಿ ಜನಾಂಗ ಧರ್ಮ ವರ್ಗಗಳ ಎಳೆಯರು ಜೊತೆಗೂಡಿ ಒಡನಾಡುವುದೇ ಭಾರತಕ್ಕೆ ಬಲುದೊಡ್ಡ ಶಿಕ್ಷಣ ಎಂಬುದನ್ನು ಮನಗಾಣದೆ ಸೋಲುತ್ತಿದ್ದೇವೆ.

ನೆರೆಹೊರೆ ಸಮಾನ ಮಾತೃಭಾಷಾ ಮಾಧ್ಯಮ ಶಿಕ್ಷಣ ಪದ್ಧತಿ ಪ್ರಾಥಮಿಕದಲ್ಲಿಲ್ಲದ ಕಾರಣವಾಗಿ - ಸರ್ಕಾರಿ ಶಾಲೆಗಳ ಗುಣಮಟ್ಟ ದಿನದಿನೇ ಕುಸಿಯುತ್ತಿದೆ. ಕಾರಣವನ್ನು ಬೇರೆಲ್ಲೋ ಹುಡುಕುತ್ತಿದ್ದೇವೆ. ನೆರೆಹೊರೆಯ ಸಮಾನ ಶಿಕ್ಷಣ ಪದ್ಧತಿ ಅನುಷ್ಠಾನಗೊಂಡರೆ ಆ ಶಾಲೆಗೆ ಹೇಳುವವರು ಕೇಳುವವರು ಸುತ್ತಲೂ ಹುಟ್ಟಿಕೊಂಡು ಆ ಕಳಪೆ ಶಾಲೆಯೂ ತಂತಾನೆ ಉನ್ನತೀಕರಣಗೊಳ್ಳುತ್ತದೆ. ಕಳಪೆ ಶಾಲಾ ಉನ್ನತೀಕರಣಕ್ಕೆ ಯಾವ ತರಬೇತಿ ಅನುಕೂಲಗಳೂ ಬೇಕಾಗಿಲ್ಲ, ಇಂಥ ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆಯನ್ನು ಅಳವಡಿಸಿಕೊಂಡರೆ ಅದಷ್ಟೇ ಸಾಕು. ಯಾಕೆಂದರೆ ಈ ಅರೆಮನಸ್ಸಿನ ಅಸಮಾನ ಶಿಕ್ಷಣ ದಿಂದಾಗಿ ಹಳ್ಳಿ ಮಕ್ಕಳು, ಗಲ್ಲಿ ಮಕ್ಕಳು, ತಳಸಮುದಾಯಗಳ ಮಕ್ಕಳು ಶಿಕ್ಷಣದಿಂದಲೇ ಉದುರಿ ಬೀಳುತ್ತಿದ್ದಾರೆ. ಹಾಗಾಗಿ ಈ ಶಿಕ್ಷಣ ಪದ್ಧತಿಯು 'ಒಳಗೊಂಡು ಹೊರಹಾಕುವಿಕೆ'ಯ **(Inclusive Exclusion)** ಜಾತಿ-ವರ್ಗ ಸೋಂಕಿನ ಶಿಕ್ಷಣ ಪದ್ಧತಿಯಾಗಿಬಿಟ್ಟಿದೆ. ಇದು ಸೌಲಭ್ಯವಂಚಿತ ಮಕ್ಕಳು ಶಿಕ್ಷಣದಲ್ಲಿ ಮುಂದೆ ದಾಟದಂತೆ ಉದುರಿಸುತ್ತಿದೆ. ಈ ಫಿಲ್ಟರ್ ಕೆಲಸದಲ್ಲಿ ಇಂಗ್ಲಿಷ್ ಒಂದು ದೊಡ್ಡ ಫಿಲ್ಟರ್ ಆಗಿ ಭಾಗಿಯಾಗಿದೆ.

ಈಗ ನ್ಯಾಯದ ಕಡೆ ನೋಡಿದರೂ ಆಸೆ ಭರವಸೆಗಳು ಕ್ಷೀಣವಾಗಿದೆ. ಪ್ರಾಥಮಿಕ ಶಿಕ್ಷಣ ಮಾಧ್ಯಮದ ತೀರ್ಪು ನೀಡುತ್ತ ನಮ್ಮ ಸರ್ವೋಚ್ಚ ನ್ಯಾಯಾಲಯವು 'ಅಭಿವ್ಯಕ್ತಿ ಸ್ವಾತಂತ್ರ್ಯವು ಮಾತಿನ ಮಾಧ್ಯಮದ ಆಯ್ಕೆಯನ್ನು ಒಳಗೊಂಡಿರುತ್ತದೆ ಹಾಗೂ ತರಗತಿಗಳು ಅಭಿವ್ಯಕ್ತಿಯ ಜಾಗಗಳಾಗಿರುತ್ತವೆ' ಎಂದಿದೆ. ಮೂಲಭೂತ ಹಕ್ಕನ್ನು ಕಿತ್ತು ಹೋಗುವಷ್ಟು ಹಿಗ್ಗಾಮುಗ್ಗಾ ಎಳೆದುಬಿಟ್ಟಿದೆ ಹಾಗೂ ಸ್ವಾತಂತ್ರ್ಯ ಮತ್ತು ಸ್ವೇಚ್ಛೆಯ ನಡುವಿನ ಗೆರೆಯನ್ನು ಮಸುಕಾಗಿಸಿದೆ. ತಮಾಷೆ ನೋಡಿ-ಶಿಷ್ಟವಾಗಿ ಕಲಿಯುವ ಮುನ್ನ, ಮಗು ತಾನು ಹುಟ್ಟಿದ ಪರಿಸರದೊಳಗಿಂದ ಒಡಮೂಡಿಸಿಕೊಂಡ ಭಾಷೆಯೇ ಮಾತೃಭಾಷೆ- ಎಂಬ ಪ್ರಾಥಮಿಕ ಭಾಷಾ ಜ್ಞಾನಕ್ಕೆ ನಮ್ಮ ನ್ಯಾಯಾಲಯ ಕತ್ತು ಹಿಸುಕಿದಂತಿದೆ. ಶಿಕ್ಷಣ ಮಾಧ್ಯಮದ ಆಯ್ಕೆ? ಮಗುವಿಗೆ ಆ ಮಗುವಿನ ಪರವಾಗಿ ಪೋಷಕರಿಗೆ ಸೇರಿದೆ ಅನ್ನುತ್ತದೆ. ಆಯ್ಕೆ ಪ್ರಶ್ನೆ ಬರುವುದು ಯಾವಾಗ? ಎರಡು ಮೂರು ಇದ್ದಾಗ ಮಾತ್ರ. ಒಂದೇ ಇದ್ದಾಗ ಆಯ್ಕೆ ಎಲ್ಲಿ ಬರುತ್ತದೆ? ಅಭಿವ್ಯಕ್ತಿ ಸ್ವಾತಂತ್ರ್ಯ ಅಂದರೂ ಇರುವುದನ್ನು ಅಭಿವ್ಯಕ್ತಿಗೊಳಿಸುವುದು ತಾನೇ? ಇದೂ ಇರಲಿ - ಗೊತ್ತಿಲ್ಲದಿರುವುದರಿಂದ ಗೊತ್ತಿಲ್ಲದ ಕಡೆಗೆ ಕ್ರಮಿಸುವುದು- ಇದು ಶಿಕ್ಷಣದ ಪ್ರಾಥಮಿಕ ತಿಳಿವಳಿಕೆ. ಇದನ್ನಾದರೂ ನಮ್ಮ ನ್ಯಾಯಾಲಯ ಲಕ್ಷಿಸಬೇಕಾಗಿತ್ತು.


ಹಾಗೆಯೇ ಭಾಷಾವಾರು ಪ್ರಾಂತ್ಯ ರಚನೆ ಸಂದರ್ಭದಲ್ಲಿ ಮುಂಬರುವ ಅಪಾಯವನ್ನೂ ಮನಗಂಡು ಅಂದರೆ ರಾಜ್ಯಭಾಷೆಗಳು ಪಾಳೆಗಾರರಂತೆ ವರ್ತಿಸುತ್ತಾ ಆಯಾ ರಾಜ್ಯದೊಳಗೆ ಬರುವ ಹತ್ತಾರು ಮಾತೃಭಾಷೆ (ಉದಾ: ಕರ್ನಾಟಕದಲ್ಲಿ ತುಳು, ಉರ್ದು, ಕೊಂಕಣಿ, ಮರಾಠಿ, ತಮಿಳು, ತೆಲುಗು, ಕೊಡವ ಇತ್ಯಾದಿ)ಗಳನ್ನು ಕತ್ತು ಹಿಸುಕಿ ಬಿಡುತ್ತವೆ ಎಂಬ ಆತಂಕದಿಂದ ಅಲ್ಪಸಂಖ್ಯಾತ ಭಾಷೆಗಳ ರಕ್ಷಣೆಗೆ ಕತ್ತಿಯಂತೆ ಕೊಟ್ಟ ವಿಧಿಗಳನ್ನು ಬಳಸಿಯೇ ಆ ಅಲ್ಪಸಂಖ್ಯಾತ ಭಾಷೆಗಳನ್ನೂ ಜೊತೆಗೇ ಎಲ್ಲಾ ದೇಶಿ ಭಾಷೆಗಳನ್ನು ಕೊಲ್ಲಲು ಬಳಸಿದಂತಾಗಿಬಿಟ್ಟದೆ! ಉಳಿಗಾಲವಿಲ್ಲ.

ಹೀಗಿರುವಾಗ ನಾವು ಯಾವ ಕಡೆ ನೋಡಬೇಕು? ಈಗ ಪಾರ್ಲಿಮೆಂಟ್‌ಗೇ ಚಾಟಿ ಬೀಸಬೇಕಾಗಿದೆ. ಜನಾಂದೋಲನ, ರಾಜಕೀಯದ ಮೇಲೆ ಒತ್ತಡ ವ್ಯಾಪಕವಾಗಬೇಕಾಗಿದೆ. ಸಾಹಿತ್ಯ ಪರಿಷತ್‌ನಿಂದಲೂ ಈ ನಡೆಯನ್ನೇ ನಿರೀಕ್ಷಿಸುತ್ತೇನೆ.

ಪರಿಷತ್ತಿಗೆ ನೂರು ವರ್ಷಗಳ ಹಿರಿಮೆ ಜತೆ ನೂರು ವರ್ಷದ ಜಡ್ಡೂ ಇರಬಹುದು. ಆದರೆ ಜೀವವಿದೆ. ಪೊರೆ ಕಳಚಬೇಕಾಗಿದೆ ಅಷ್ಟೇ. ಆಗ ಮಾತ್ರ ಗುಣಮುಖವಾಗಿಸಲು ಕರೆಂಟ್ ಷಾಕ್ ಕೊಡುವಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲು ಶಕ್ಯವಾಗಬಹುದು.

ಸಾಹಿತ್ಯ ಪರಿಷತ್ ಹೊಸ ಹುಟ್ಟು ಪಡೆದರೆ ಅದಕ್ಕೆ ಪೂರಕ ವಾತಾವರಣ ಈಗ ಕರ್ನಾಟಕ ರಾಜ್ಯದಲ್ಲಿ ಇದೆ. ಯಾಕೆಂದರೆ ನನ್ನಷ್ಟೇ ಅಥವಾ ನಿಮ್ಮಷ್ಟೇ, ಮಾತೃಭಾಷೆ ಪ್ರಾಥಮಿಕ ನೆರೆಹೊರೆ ಸಮಾನ ಶಿಕ್ಷಣದ ಕಳಕಳಿ ಇರುವ ಮುಖ್ಯಮಂತ್ರಿಗಳನ್ನು ಈ ರಾಜ್ಯ ಈಗ ಪಡೆದಿದೆ. ಬಹುಶಃ ಹಿಂದೆ ಇಂಥ ಸಂದರ್ಭ ಇರಲಿಲ್ಲ ಎನ್ನಬಹುದು. ಹಾಗೇ ಮುಂದೆ ಗೊತ್ತಿಲ್ಲ. ಶ್ರೀ ಸಿದ್ದರಾಮಯ್ಯ, ಶ್ರೀ ನಿತೀಶ್‌ಕುಮಾರ್‌ರಂಥ ಮುಖ್ಯಮಂತ್ರಿಗಳು ಮುಖವಾಡ ಇಲ್ಲದವರು, ಹೃತ್ಪೂರ್ವಕತೆ ಇರುವವರು ಜೊತೆಗೆ ಧೈರ್ಯವಂತರೂ ಕೂಡ. ಹಾಗಾಗಿ ಈ ರಾಜಕಾರಣ ದೊಳಗೂ ಇಂಥವರಿಂದ ಒಂದಿಷ್ಟು ನಿರೀಕ್ಷಿಸಬಹುದು. ಇಂಥವರಿಗೆ ಪಂಕ್ತಿಭೇದವೂ ಗೊತ್ತು. ನೆರೆಹೊರೆ ಸಮಾನ ಮಾತೃಭಾಷಾ ಪ್ರಾಥಮಿಕ ಶಿಕ್ಷಣವಿಲ್ಲದ ಕಾರಣವಾಗಿ ಹಳ್ಳಿಮಕ್ಕಳು, ಗಲ್ಲಿಮಕ್ಕಳು, ತಳಸಮುದಾಯದ ಮಕ್ಕಳು ಶಿಕ್ಷಣದಿಂದಲೇ ಉದುರಿಹೋಗುತ್ತಿರುವುದೂ ಗೊತ್ತು. ಈ ಸಂದರ್ಭದಲ್ಲಿ ಈಗ ಸಾಹಿತ್ಯ ಪರಿಷತ್ ಧೈರ್ಯ ಮಾಡಿ ಹೊಸ ಹುಟ್ಟು ಪಡೆದು ಸರ್ಕಾರಕ್ಕೆ ಸವಾಲೆಸೆದರೆ ಒಂದಿಷ್ಟು ಬದಲಾವಣೆ ಆಗಲೂಬಹುದು. ಹೊಸ ಸಾಧ್ಯತೆಗಳು ಗೋಚರಿಸಲೂಬಹುದು. ಅದಕ್ಕಾಗಿ, ಸಂವಿಧಾನ ತಿದ್ದುಪಡಿಗೆ ರಾಜಕೀಯ ಒತ್ತಡವನ್ನು ನಿರಂತರವಾಗಿ ಉಂಟು ಮಾಡುತ್ತಾ, ಜೊತೆಗೆ ಇಂಗ್ಲಿಷ್ ಅನ್ನು ಒಂದನೇ ತರಗತಿ ಯಿಂದಲೇ ಒಂದು ಕಲಿಕೆಯ ಭಾಷೆಯಾಗಿ ಒಪ್ಪಿಕೊಂಡು ಚರ್ಚಿಸಬಹುದಾದ ಒಂದಿಷ್ಟು ವಿಚಾರಗಳನ್ನು ತಮ್ಮ ಮುಂದಿಡುವೆ:

1. ಭಾರತವನ್ನು ಐಕ್ಯಗೊಳಿಸಲು ಹಾಗೂ ಶಿಕ್ಷಣಗುಣಮಟ್ಟವನ್ನು ಉನ್ನತಗೊಳಿಸಲು ಪೂರಕವಾದ ನೆರೆಹೊರೆ ಶಿಕ್ಷಣವನ್ನು ಕಟ್ಟುನಿಟ್ಟಾಗಿ ಪಾಲಿಸುವಂತಾಗಬೇಕು. ಇದಕ್ಕಾಗಿ ಮಕ್ಕಳ ಪ್ರವೇಶಾತಿಯನ್ನು ಆಯಾ ಶಿಕ್ಷಣ



ಸಂಸ್ಥೆಗಳಿಗೆ ವಹಿಸಿಕೊಟ್ಟು ದಂಧೆಗೆ ಅವಕಾಶ ನೀಡಬಾರದು. ಬದಲಿಗೆ ಆ ಪ್ರದೇಶದ ಶಿಕ್ಷಣ ಅಧಿಕಾರಿ, ಚುನಾಯಿತ ಪ್ರತಿನಿಧಿ ಹಾಗೂ ಪೋಷಕರ ಸಮಿತಿ ಸಮ್ಮುಖದಲ್ಲಿ - ಲಾಟರಿ ವ್ಯವಸ್ಥೆ ಮೂಲಕ ನಿರ್ಧರಿಸಬೇಕು.

2. ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 51ರಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳೇ ಇರುವಂತೆ ತಿದ್ದುಪಡಿಯಾಗಬೇಕು.

3. ಖಾಸಗಿ (ಅನುದಾನ ಸಹಿತ-ರಹಿತ) ಶಿಕ್ಷಣ ಸಂಸ್ಥೆಗಳು ಸರ್ಕಾರದ ಏಜೆನ್ಸಿಯಂತೆ ಕಾರ್ಯನಿರ್ವಹಿಸುವಂತಹ ಕಾನೂನು ರೂಪಿಸಲು ಒತ್ತಾಯಿಸಬೇಕು.

4. ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ -ಕಲಂ 29 (ಎಫ್)ನಲ್ಲಿ **medium of instructions shall, as for as practicable, be in child`s mother tongue; - as for as practicable** ಎಂದು ಇರುವುದು ಮಾತೃಭಾಷಾ ಶಿಕ್ಷಣ ಮಾಧ್ಯಮಕ್ಕೆ ತೊಡರುಗಾಲಾಗಿದೆ. ಆದ್ದರಿಂದ **as for as practicable** ಅನ್ನುವುದನ್ನು ಕಿತ್ತು ಹಾಕಿ 'ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ಸಂವಿಧಾನದಿಂದ ಅಂಗೀಕರಿಸಲ್ಪಟ್ಟ ಇಪ್ಪತ್ತೆರಡು ಭಾಷೆಗಳಲ್ಲಿ ಯಾವುದಾದರೂ' ಎಂದು ಆಯ್ಕೆ ನೀಡುವ ಕಾನೂನು ರೂಪಿಸುವಂತಾಗಲು ನಮ್ಮ ಶಾಸಕಾಂಗವನ್ನು ಒತ್ತಾಯಿಸಬೇಕಾಗಿದೆ.

5. ಮಕ್ಕಳ ಮನಸ್ಸು ಆಕಾರ ಪಡೆಯುವ ಅಂಗನವಾಡಿ ಯಿಂದ ಮೂರನೇ ತರಗತಿಯವರೆಗೆ ಆಯಾ ರಾಜ್ಯದ ಮಾತೃಭಾಷೆಗಳಲ್ಲಿ ಅಂದರೆ ಮಗುವಿನೊಳಗೆ ಪರಿಸರದಿಂದ ಒಡಮೂಡಿ ಉಂಟಾದ ಭಾಷೆಗಳಲ್ಲಿ (ಉದಾ: ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಭಾಷೆಗಳಾದ ತುಳು, ಕೊಂಕಣಿ, ಮರಾಠಿ, ಉರ್ದು, ತಮಿಳು, ಇತ್ಯಾದಿಗಳೊಡನೆ ಸಂವಿಧಾನ ಅಂಗೀಕರಿಸಲ್ಪಟ್ಟ ಭಾಷೆ ಕನ್ನಡವೂ ಸೇರಿದಂತೆ) ಶಿಕ್ಷಣ ಮಾಧ್ಯಮ; ಮುಂದಿನ ಪ್ರಾಥಮಿಕ ಶಿಕ್ಷಣದಲ್ಲಿ ಅಪೇಕ್ಷೆ ಪಟ್ಟವರಿಗೆ ಸಂವಿಧಾನ ಅಂಗೀಕರಿಸಲ್ಪಟ್ಟ ಭಾಷೆಗಳಲ್ಲಿ ಶಿಕ್ಷಣ ಮಾಧ್ಯಮವನ್ನು -ಮೊದಲ ಹೆಜ್ಜೆಯಾಗಿ ಜಾರಿಯಾಗಿಸಲು ಒತ್ತಾಯಿಸಬೇಕು.

6. ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು. ಮುಚ್ಚಿರುವ ಶಾಲೆಗಳನ್ನು ಬೇರೆ ಉದ್ದೇಶಕ್ಕೆ ವಹಿಸಿಕೊಡುವುದು ಅಥವಾ ಪರಭಾರೆ ಮಾಡಬಾರದು. ಇನ್ನು ಮುಂದೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರಾಥಮಿಕ ಶಿಕ್ಷಣಕ್ಕೆ ಅನುಮತಿ ನೀಡದೇ ಸಾರ್ವಜನಿಕ ಶಾಲೆಗಳನ್ನೇ ಹೆಚ್ಚು ಮಾಡಬೇಕು. ಭಾರತದ ಐಕ್ಯತೆಯ ದೃಷ್ಟಿಯಿಂದ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿದ್ದುಪಡಿ ತಂದು ಪ್ರಾಥಮಿಕ ಶಿಕ್ಷಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸರ್ಕಾರಿ ಕೋಟಾವನ್ನು ಶೇಕಡಾ 50ಕ್ಕೆ ಏರಿಸಿ ಎಲ್ಲಾ ಜಾತಿ, ವರ್ಗ, ಧರ್ಮಗಳ ಮಕ್ಕಳು ಒಡನಾಡು ವಂತಾಗಲು ಕಾನೂನು ರೂಪಿಸಲು ಒತ್ತಾಯಿಸಬೇಕು.


ಇಂಥವು. ಇವುಗಳೇ ಅಂಥೇನಲ್ಲ. ಆದರೆ ಮನವಿ ಮಾಡಿದರೆ ತಂತಾನೇ ಯಾವುದೂ ಈಡೇರುವುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ ಪೊರೆ ಕಳಚಿಕೊಂಡು ಎಲ್ಲರನ್ನು ಒಡಗೂಡಿ ಹೋರಾಡಿದರೆ ಒಂದಿಷ್ಟು ಈಡೇರಬಹುದು. ಹೀಗಿರುವಾಗ ಯಥಾಸ್ಥಿತಿಯಲ್ಲಿ ಯಾಂತ್ರಿಕವಾಗಿ ಜರುಗುತ್ತಿರುವ ಸಮ್ಮೇಳನಗಳಲ್ಲಿ ಭಾಗವಹಿಸುವುದಕ್ಕೆ ನನ್ನ ಮನಸ್ಸು ಹಿಂದೆಗೆಯುತ್ತದೆ.

ಪರಿಷತ್ ಪೊರೆ ಕಳಚಿ ನಿಂತರೆ ನಾನೂ ಜೊತೆಗೂಡುತ್ತೇನೆ. ಅಷ್ಟೇ ಅಲ್ಲ, ಭಾರತದ ಅನಾಥ ಅಬ್ಬೇಪಾರಿ ದೇಶೀ ಭಾಷೆಗಳ ಪ್ರಜ್ಞಾವಂತರೂ ತಮ್ಮೊಡನೆ ಜೊತೆಗೂಡುತ್ತಾರೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಲು ನಾನು ಸಮ್ಮತಿಸುತ್ತಿಲ್ಲ. ಇದರಿಂದ ಸಾಹಿತ್ಯ ಪರಿಷತ್‌ನ ಒಂದು ಹಲ್ಲಿಗೆ ನೋವು ಮಾಡಿಬಿಟ್ಟಿರುವೆ! ಈ ನೋವಿನ ಕಡೆಗೆ ಪರಿಷತ್‌ನ ಹಾಗೂ ದೇಶಿ ಭಾಷಿಗರ ನಾಲಿಗೆಯು ಆಗಾಗಲಾದರೂ ಹೊರಳುತ್ತಿರಲಿ ಎಂಬ ಆಸೆಯಿಂದ. ಇದರಿಂದಲೂ ಒಂದಿಷ್ಟು ಸಾಧ್ಯತೆಗಳು ಹುಟ್ಟಬಹುದೇನೋ ಎಂಬ ಆಸೆಯಿಂದ.

● ದೇವನೂರ ಮಹಾದೇವ

‘ನಾನು ಪೇಶಾವರ ಹತ್ಯಾಕಾಂಡ ನೋಡಿದೆ’



12 ವರ್ಷದ ಅಲಿ, ಪೇಶಾವರ ಶಾಲಾ ಮಕ್ಕಳ ಹತ್ಯಾಕಾಂಡದಲ್ಲಿ ಬದುಕುಳಿದವ, ಪತ್ರಕರ್ತ ಕಿರಣ್ ನಾಜಿಶ್‌ಗೆ ಹೇಳಿದ ಮಾತುಗಳು ಇವು:

ಪರಮ ದಯಾಳುವೂ, ಕರುಣಾಳುವೂ ಆದ ದೇವರ ಹೆಸರಿನಲ್ಲಿ,

ನಮಸ್ತೆ. ನನ್ನ ಹೆಸರು 'ಅಲಿ. 12 ವರ್ಷ.

ನಮ್ಮ ಮೊದಲ ಪೀರಿಯಡ್. ಪಾಠ ಕೇಳ್ತಾ ಕೂತಿದ್ವಿ. ಇದ್ದಕ್ಕಿದ್ದಂತೆ ಗುಂಡು ಸಿಡಿದ ಶಬ್ದ ಆಯ್ತು. ಅದು ಭಯಾನಕ ಶಬ್ದ. ಅದೇನಿರಬೋದು ಅಂತ ಊಹೆ ಮಾಡಕ್ಕೂ ಟೈಮಿರ್ಲಿಲ್ಲ.

ಆ ಶಬ್ದ ನಮ್ಮ ಕ್ಲಾಸ್ ಹತ್ರತ್ರನೇ ಬಂದಂಗೆ ನಮ್ಮ ಟೀಚರ್ ಬೆಂಚಿನ ಅಡಿ ಅಡಕ್ಕಳಿ ಅಂದ್ರು.

'ಬೇಗ, ಬೇಗ, ನಿಮ್ಮ ಡೆಸ್ಕಿನಡಿ ತೂರಿಕೊಳ್ಳಿ.' ಅವರು ಹೇಳಿದ್ರು. ಕೆಲವರು ಅಡಗಿದ್ವಿ. ಕೆಲವರು ಹೆದ್ರಿಕೆ, ಗೊಂದಲ ಆಗಿ ಏನು ಮಾಡದಂತ ತಿಳಿದೇ ಕಂಗಾಲಾಗಿ ನಿಂತ್ರು. ಇಡೀ ಕ್ಲಾಸು ಟೀಚರನ್ನು 'ಏನಾಯ್ತು ಟೀಚರ್' ಅಂತ ಕೇಳ್ತನೇ ಇತ್ತು.

ಪಕ್ಕದ ಕ್ಲಾಸಿನಿಂದ ಮಕ್ಕಳು ಕೂಗುವುದು, ಕಿರುಚುವುದು ಕೇಳ್ಸಕ್ ಶುರು ಆಯ್ತು. ನಂಗಂತೂ ಎಷ್ಟು ಹೆದರಿಕೆ ಆಯ್ತು ಅಂದ್ರೆ ಕಿರುಚಕ್ಕೆ ಹೋದ್ರೆ ಧ್ವನೀನೇ ಬರ್ಲಿಲ್ಲ.

ನಂ ಟೀಚರು ಇನ್ನೇನು ಬಾಗ್ಲು ಹಾಕ್ಬೇಕು ಅಂತಿದ್ರು, ಅಷ್ಟೊತ್ತಿಗೆ ಮೂರ್ನನ ದಢಾರ್ ಅಂತ ಬಾಗ್ಲು ದಬ್ಬಿ ಬಂದೇ ಬಿಟ್ರು.

ಅವ್ರು ಗುಂಡು ಹಾರಿಸ್ತನೇ ಬಂದ್ರು. ನಂ ಟೀಚರ್ ಮತ್ತೆ ಫ್ರೆಂಡ್ಸ್‌ಗೆ ಪೆಟ್ಟಾಗಿದ್ದನ್ನ ನೋಡ್ದೆ. ಹೊಡೆತ ತಿಂದು ನನ್ ಕೆಲ ಫ್ರೆಂಡ್ಸ್ ಕೆಳಗ್ ಬಿದ್ರು. ತುಂಬ ಜನ ಟೇಬಲ್ ಕೆಳಗೆ ಅಡಕ್ಕಂಡಿದ್ವಿ.

ನಾನ್ ಸತ್ತೋಗ್ತೀನಿ ಅಂತ ಗೊತ್ತಾಯ್ತು. ಅಳಕ್ಕೆ ಶುರುಮಾಡ್ದೆ, ಎಲ್ಲರೂ ಅಳ್ತಿದ್ರು. ಆದ್ರೆ ಯಾರೂ ಓಡಿ ಹೊರಗೋಗೋ ಧೈರ್ಯ ಮಾಡ್ಲಿಲ್ಲ.

ನಂ ಫ್ರೆಂಡ್ಸ್‌ನ ತಲೆ, ಎದೆ, ಹೊಟ್ಟೆ, ಕೈ, ಕಾಲು ಹಿಂಗೆ ಎಲ್ಲೆಲ್ಲೋ ಹೊಡದ್ರು. ಎಲ್ರು ನೆಲದ ಮೇಲೆ ಬಿದ್ರು. ಅವ್ರಿಗೆ ಗೊತ್ತಾಯ್ತು, ಇವ್ರಲ್ಲಿ ಒಂದಷ್ಟು ಜನ ಬದುಕಿದಾರೆ ಅಂತ, ನೇರ ತಲೆಗೇ ಗುರಿಯಿಟ್ಟು ಗುಂಡು ಹಾರ್ಸಕ್ ಶುರುಮಾಡಿದ್ರು.

ನಂ ತಲೆಮೇಲೇ ಗುಂಡು ಹಾರೋದ್ವು. ನನ್ ಬೆಸ್ಟ್ ಫ್ರೆಂಡು ಮತ್ತೆ ಬೆಂಚ್ ಮೇಟ್ ಇರ್ಫಾನುಲ್ಲಾ ಹೇಳ್ದ

'ಸತ್ತೋರಂಗೆ ನಾಟ್ಕ ಮಾಡೋಲೋ'. ನಾನು ಹೆದ್ರಿ ಥರಥರ ಅಂತಿದ್ದೆ. ನಂ ಕ್ಲಾಸಲ್ಲಿ ನಮ್ದೆ ಕೊನೇ ಬೆಂಚು.

'ಅಲ್ಲಾಡ್ದೆ ಮಲ್ಕ ಅಲಿ, ಅಲ್ಲಾಡ್ದೆ ಮಲಗು' ಅವ್ನ ಪಿಸುಗುಟ್ಟಿದ. ನಾನು ಮಕಾಡೆ ಮಲಕ್ಕಂಡೆ. ಎಲ್ಲ ಸರಸರ ನಡದೋಯ್ತು, ನಂಗೊತ್ತಿತ್ತು ಅವ್ರು ಟೆರರಿಸ್ಟ್ ಅಂತ. ನಂಗೊತ್ತಿತ್ತು ಅವ್ರು ತಾಲಿಬಾನಿನೋರು ಅಂತ.

ನನ್ ಫ್ರೆಂಡಿಗೂ ಗುಂಡು ತಾಕಿ ಗಾಯ ಆಯ್ತು. ಅವ್ನಿಗೆ ಎಲ್ಲಿ ತಾಗ್ತು ಅಂತ ಗೊತ್ತಾಗ್ಲಿಲ್ಲ. ಆದ್ರೆ ಅವ್ನ ಉಸಿರಾಡಿದ್ದು ನಂಗೆ ಕೇಳಿಸ್ತಿತ್ತು.

ಒಬ್ಬ ಟೆರರಿಸ್ಟ್ ಮತ್ತೊಬ್ಬನಿಗೆ ಕೂಗ್ದ: 'ಅವ್ನ ಸತ್ತಾ ನೋಡು?' ನಂತ್ರ ಗುಂಡಿನ ಶಬ್ದ ಮತ್ತಷ್ಟು ಕೇಳಿಸ್ತು. ನಂಗಂತೂ ನಾನು ಸತ್ತೋಗಿದೀನಿ ಅಂತ್ಲೇ ಅನಿಸ್ತು.

ಅವ್ರು ಪಾಶ್ತೋ ಮಾತಾಡ್ತಿದ್ರು. ಸಲ್ವಾರ್ ಕಮೀಜ್ ಹಾಕಿದ್ರು. ಎಲ್ರಿಗೂ ಉದ್ದ ಗಡ್ಡ ಇತ್ತು.

ಅವ್ರು ರೂಮಿಂದ ಹೊರಗೋದಾಗ ಇರ್ಫಾನನ್ನ ಕರದೆ. ಅವ್ನ ಉತ್ತರ ಕೊಡ್ಲಿಲ್ಲ. ಅವ್ನ ಇನ್ನೂ ಸತ್ತೋರಂಗೆ ನಾಟ್ಕ ಮಾಡ್ತಿದಾನೆ ಅನಿಸ್ತು, ನಾನು ಸತ್ತೋನಂಗೇ ಮಲ್ಕಂಡೆ.

ಅವ್ರು ಬಂದ್ಬಿಡ್ತಾರೆ ಅಂತ ನಂಗೆ ತುಂಬ ಭಯ ಆಗ್ತಿತ್ತು, ನನ್ ಫ್ರೆಂಡ್ ಯಾವಾಗ ಸತ್ನೋ ನಂಗೆ ಗೊತ್ತೇ ಆಗ್ಲಿಲ್ಲ. ಅವ್ನೇ ನನ್ ಜೀವ ಉಳ್ಸಿದ್ದು.

ನಾನೂ ಸತ್ತೋಗಿದೀನಿ ಅಂತನೇ ತಿಳ್ಕಂಡಿದ್ದೆ. ಎದೆ ಡಬಡಬ ಹೊಡ್ಕತಾ ಇತ್ತು, ನಂಗೆ ಅಲ್ಲಾಡಕ್ಕೂ ಆಗ್ತಿರಲಿಲ್ಲ.

ಎಷ್ಟೋ ತಾಸು ಹಿಂಗೇ ಸತ್ತೋರಂಗೇ ಇದ್ದೆ. ಆಮೇಲೆ ಯಾವಾಗ್ಲೋ ಮಿಲಿಟ್ರಿಯೋರು ಬಂದ್ರು. ಅವ್ರು ಬಂದ್ರೂ ನಾನು ಅಲ್ಲಾಡ್ದೆ ಸುಮ್ನೆ ಮಲಗೇ ಇದ್ದೆ. ಅವ್ರು ನಿಜವಾದ ಸೈನಿಕ್ರು ಹೌದೋ ಅಲ್ವೋ ನಂಗೆ ಗೊತ್ತಿರ್ಲಿಲ್ಲ. ನಂಗೆ ಮಾತಾಡಕ್ಕೂ ಆಗ್ಲಿಲ್ಲ. ತುಂಬ ಭಯ ಆಯ್ತು.

ನಂ ಕ್ಲಾಸ್ ಹೊರ್ಗೆ ಗುಂಡಿನ ಶಬ್ದ ಕೇಳ್ತನೇ ಇತ್ತು. ಆದ್ರೆ ನಂಗೆ ಕಣ್ ಬಿಡಕ್ಕೂ ಶಕ್ತಿ ಇರ್ಲಿಲ್ಲ. ತುಂಬ ದೊಡ್ಡಾಗಿ ಢಮಾರ್ ಅಂತ ಎಂಥದೋ ಸಿಡೀತು. ಜೋರು ಅಂದ್ರೆ ಜೋರಾಗಿ. ನಾನು ಇಡೀ ಪ್ರಪಂಚನೇ ಇವತ್ತು ಸಿಡಿದು ಹೋಗುತ್ತೆ ಅಂದ್ಕಂಡೆ.

ಯಾರೋ ಬಂದು ನನ್ನ ಎತ್ತಿದ್ರು. ಆಗ಼್ೂ ನಾನು ಕಣ್ಣು ಮುಚ್ಕಂಡೇ ಇದ್ದೆ. ಅವ್ರು ಸೈನಿಕರು.

ನಾನು ಅಳಕ್ ಶುರು ಮಾಡ್ದೆ, ನನ್ನ ಅಮ್ಮ, ಅಪ್ಪನತ್ರ ಕರ್ಕಂಡೋಗಿ ಬಿಟ್ರು.

ನಾನೀಗ ಆಸ್ಪತ್ರೇಲಿದೀನಿ. ನನ್ನ ಎಷ್ಟೊಂದು ಫ್ರೆಂಡ್ಸ್ ಇಲ್ಲಿದಾರೆ ಗೊತ್ತ? ಅವ್ರಿಗೆ ರಕ್ತ ಕಮ್ಮಿಯಾಗಿದೆಯಂತೆ. ನಾನು ನನ್ನ ರಕ್ತ ಕೊಡ್ತಾ ಇದೀನಿ.

ನಮ್ಮಪ್ಪ ಅಮ್ಮ ಮನೆಗೋಗಣ ಅಂದ್ರು. ಅವ್ರಿಗೆ ನನ್ ಬಗ್ಗೆ ಚಿಂತೆ ಆಗ್ಬಿಟ್ಟಿದೆ. ಅವ್ರಿಗೆ ದುಃಖ... ಅವ್ರಿಗೆ ಭಯ ಆಗಿದೆ. ನಂಗೂ ಭಯ ಆಗಿ... ಆಸ್ಪತ್ರೇಲಿದಾರಲ್ಲ, ನಮ್ಮ ಅಣ್ಣತಮ್ಮಂದ್ರು, ಅಕ್ಕ... ಅವ್ರ ಬಗ್ಗೆನೂ ನಂಗೆ ಚಿಂತೆ ಆಗ್ತಿದೆ.

ಈ ತಾಲಿಬಾನ್ ದುಷ್ಟ.

ನಾ ಬದುಕಿದಿನಿ ಅಂತ ನಂಬಕ್ಕೇ ಆಗ್ತಿಲ್ಲ.

ನಂ ದೇಶ ಬೇಕು ಅಂತಂದ್ರೆ ನಾನು ಪ್ರಾಣ ಬ... ಕೊಟ್ಬಿಡ್ತೀನಿ.

ನನ್ ಫ್ರೆಂಡ್ಸ್‌ನ ಕೊಂದ ಈ ಟೆರರಿಸ್ಟ್... ನಾನು ಹೋರಾಡೇ ಹೋರಾಡ್ತಿನಿ. ಅವ್ರನ್ನ ನಾನು ... ಕ್ಷಮಿಸಲ್ಲ, ಯಾವತ್ತೂ ಕ್ಷಮಿಸಲ್ಲ.

ದೇವ್ರು ನೋಡ್ತಾ ಇದಾನೆ.

■ ಕನ್ನಡಕ್ಕೆ: ಡಾ. ಎಚ್.ಎಸ್. ಅನ...

ಗೀತೆ ರಾಷ್ಟ್ರೀಯ ಗ್ರಂಥ ಆಗದು ಕುರಿ ರಾಷ್ಟ್ರೀಯ ಪ್ರಾಣಿ ಆದ...

ಥೂತ್ತೇರಿ

ಬಿಜೆಪಿಯ ಭಂಗಿರಂಗರು ಭಗವದ್ಗೀತೆ ಎಂಬ ಗ್ರಂಥಕ್ಕೆ ಗಂಟು ಬಿದ್ದು ಅದನ್ನು ರಾಷ್ಟ್ರೀಯ ಗ್ರಂಥ ಮಾಡಿ ಕೈ ತೊಳೆದುಕೊಳ್ಳಬೇಕೆಂದು ಕೂಗತೊಡಗಿದ್ದಾರಲ್ಲಾ, ಇದಂತೂ ಅವರ ಹಳೆಯ ಕಾಲದ ಅಜೆಂಡ. ಮನುಧರ್ಮ ಗ್ರಂಥವನ್ನು ಸಂವಿಧಾನ ಮಾಡಿಕೊಂಡು ಸಾವಿರಾರು ವರ್ಷ ಭಾರತದ ಮೆದುಳನ್ನೇ ನಿಷ್ಕ್ರಿಯೆಗೊಳಿಸಿದ್ದರು. ಪರಿಣಾಮವಾಗಿ ಪರಕೀಯರೆಲ್ಲಾ ಭಾರತದ ಮೇಲೆ ದಾಳಿ ಮಾಡಿ ಕೇರಿಗಳಲ್ಲಿ ಕಾಮಕೇಳಿಯಲ್ಲಿ ತೊಡಗುವಂತಾಗಿತ್ತು. ಆಗ ಅಗ್ರಹಾರದ ಮಂದಿರಗಳಲ್ಲಿ ಭಜನೆ ಮಾಡುತ್ತ ಅಲ್ಲೇ ಇದ್ದ ಪಾಕಶಾಲೆಯಲ್ಲಿ ತಯಾರಾದ ಭೋಜನವನ್ನು ಭಾರಿಸ್ತಿಕೊಂಡು, ವಿಶ್ರಾಂತಿ, ನಿದ್ದೆ, ವಾಯುವಿಹಾರದಲ್ಲೇ ನಿಶ್ಚಿಂತೆಯಿಂದ ಕಾಲ ಕಳೆದ ಸಂತತಿಗೆ ಈಗ ಭಗವದ್ಗೀತೆ ತಮ್ಮ ಬದುಕಿನ ಸಂಜೀವಿನಿಯಾಗಿ ಕಂಡಿದೆಯಲ್ಲಾ, ಕಾಣಬೇಡವೆ? ಸದರಿ ಗ್ರಂಥ ರಾಷ್ಟ್ರೀಯ ಗ್ರಂಥವೆಂದು ಘೋಷಣೆಯಾಗುತ್ತಿದ್ದಂತೆ ತಿಂಗಳುಗಳ ಕಾಲ ಭಗವದ್ಗೀತಾ ಜಯಂತಿಯನ್ನು ಆಚರಿಸಲು ಸಿದ್ಧರಾಗುತ್ತಿದ್ದಾರೆ. ಕಂಠಪಾಠ ಸ್ಪರ್ಧೆ, ಕೃಷ್ಣಾರ್ಜುನ ಸಂವಾದ, ನಿರಂತರ ಒಂದು ಗಂಟೆ ಶ್ಲೋಕ ಉಚ್ಚಾರಣೆ ಸ್ಪರ್ಧೆ, ಇತ್ಯಾದಿ ಹೊಟ್ಟೆಪಾಡಿನ ಕಾರ್ಯಕ್ರಮದ ಪಟ್ಟಿಯನ್ನು ಮೋದಿ ಸರಕಾರಕ್ಕೆ ಒಪ್ಪಿಸಿ ನೂರಾರು ಕೋಟಿ ರೂಪಾಯಿಗಳನ್ನ ಮಂಜೂರು ಮಾಡಿಸಿಕೊಳ್ಳುತ್ತಾರೆ. ಆ ಮೂಲಕ ಕಳೆದುಹೋದ ಮನುಧರ್ಮ ಯುಗವನ್ನು ಪುನರುತ್ಥಾನಗೊಳಿಸಿಕೊಂಡು, ಅತ್ತ ಮೋದಿಯಂತವನು ದೇಶವಾಳುತ್ತಿದ್ದರೆ ಇತ್ತ ಪುರೋಹಿತರ ಪಿಂಡಗಳೆಲ್ಲಾ ಗೀತಾಪಾರಾಯಣದಲ್ಲಿ ಸುಖಶಾಂತಿ ನೆಮ್ಮದಿಯಿಂದ ಕಾಲ ಹಾಕುತ್ತಾರೆ. ಅದಕ್ಕಾಗಿಯೇ ಭಗವದ್ಗೀತೆ ರಾಷ್ಟ್ರೀಯ ಗ್ರಂಥವಾಗಲೇಬೇಕಂತಲ್ಲಾ, ಥೂತ್ತೇರಿ!

* * *

ಖುರಾನನ್ನು ಹೇಗೆ ದೇವರ ವಾಣಿಯಿಂದಲೇ ಪೈಗಂಬರರು ದಾಖಲಿಸಿಕೊಂಡರೋ, ಹಾಗೆಯೇ ಗೀತೆಯೂ ಶ್ರೀಕೃಷ್ಣನ ವಾಣಿಯಿಂದಲೇ ಹೊರಹೊಮ್ಮಿತಂತೆ. ಆದರೇನು ಖುರಾನು ಮುಸ್ಲಿಮರನ್ನು ಶಾಂತಿಪ್ರಿಯರನ್ನಾಗಿ ಮಾಡಲಾಗಲಿಲ್ಲ, ಭಗವದ್ಗೀತೆ ಚಾತುರ್ವರ್ಣವನ್ನು ಅಳಿಸಿ ಸಮಾನತೆ ಸಾರಲಾಗಲಿಲ್ಲ, ಹಾಗೆಯೇ ಬೈಬಲ್ ಕೂಡ ಬಸವಳಿದುಹೋಗಿದೆ. ಹೀಗೆ ಮಾನವ ನಿರ್ಮಿತ ಗ್ರಂಥಗಳನ್ನು ದೈವವಾಣಿ ಎಂದು ಬಿಂಬಿಸಿ, ನಂಬಿಸಲು ಹೋರಾಡುತ್ತಿರುವ ಮೂರ್ಖರಿಗೆ ಭಾರತದ ಕೋಟ್ಯಂತರ ಜನರ ಬದುಕಿಗೂ ಸದರೀ ಗ್ರಂಥಕ್ಕೂ ಸಂಬಂಧವೇ ಇರಲಿಲ್ಲವೆಂಬುದು ತಿಳಿದೇ ಇಲ್ಲವಲ್ಲ, ಇದೆಲ್ಲಕ್ಕಿಂತ ಮುಖ್ಯವಾಗಿ ಮಹಾಭಾರತದೊಳಕ್ಕೆ ಗೀತೆ ತುರುಕಿದವರಾರು ಎಂಬುದು ಪತ್ತೆಯಾಗಬೇಕಿದೆ. ಏಕೆಂದರೆ ಎರಡೂ ಬದಿ ನಿಂತ ಅಕ್ಷೋಹಿಣಿ ಸೈನಿಕರ ಅರ್ಭಟ, ಕುದುರೆಗಳ ಕೆನೆತ, ಆನೆಗಳ ಘೀಳಿಡುವಿಕೆ ಮತ್ತು ಭಾಷಣ ಜಯಘೋಷದ ನಡುವೆ ಕೃಷ್ಣ ಹದಿನೆಂಟು ಅಧ್ಯಾಯದ ಗೀತೆ



ಬೋಧಿಸಬೇಕಾದರೆ ಸದರಿ ಪ್ರಸಂಗವೇ ತುರುಕಲ್ಪಟ್ಟಿದೆ ಎಂಬುದು ಸಾಬೀತಾಗುತ್ತದೆ.

ಗೀತೆ ರಾಷ್ಟ್ರೀಯ ಗ್ರಂಥವಾಗಬೇಕೆಂಬ ವಾದ ಯಾಕೋ ಕಾಗಿನೆಲೆ ಸ್ವಾಮಿಗಳು, ಕುರಿ ರಾಷ್ಟ್ರೀಯ ಪ್ರಾಣಿಯಾಗಬೇಕೆಂದು ಕೇಳಿಕೊಂಡಷ್ಟೇ ಹಾಸ್ಯಾಸ್ಪದವಾಗಿ ಕಾಣುತ್ತಿದೆ. ಈ ದೇಶದಲ್ಲಿ ಜಾತೀಯತೆ ನಾಶವಾಗಿ, ಅಸ್ಪೃಶ್ಯತೆ ಕಣ್ಮರೆಯಾಗಿ, ಎಲ್ಲೆಲ್ಲೂ ಸಮಾನತೆ ನೆಲೆಸಿ, ನಿರ್ಗತಿಕರಿಗೆ ಸೂರು, ಹಸಿದವರಿಗೆ ಅನ್ನ, ಮಾಡಲೊಂದು ಕೆಲಸ ಬೇಕಿದೆ. ಇದೆಲ್ಲವೂ ಭಗವದ್ಗೀತೆ ರಾಷ್ಟ್ರೀಯ ಗ್ರಂಥವಾದ ಕೂಡಲೇ ನೆರವೇರುವುದಾದರೆ ನಡೆದುಹೋಗಲಿ. ಈ ಸವಲತ್ತು ಮುಸ್ಲಿಂ ಕ್ರಿಶ್ಚಿಯನ್ನರಿಗೆ ಸಿಗದೇ ಹೋದರೆ ಅವರ ಧರ್ಮಗ್ರಂಥಗಳೂ ರಾಷ್ಟ್ರೀಕರಣಗೊಳ್ಳುವುದು ಧರ್ಮಮಾರ್ಗವಲ್ಲವೆ, ಥೂತ್ತೇರಿ!!

* * *

ಕರ್ನಾಟಕದಲ್ಲಿ ಚಿಡ್ಡಿಗಳು ಚಿಗುತುಕೊಂಡು, ಪ್ರತಿಯೊಬ್ಬ ಶಾಸಕನೂ ಕೋಟ್ಯಾಧಿಪತಿಯಾಗಿ, ತಮ್ಮ ಈ ಸ್ಥಿತಿಗೆ ಕಾರಣವಾದ ಜೆಡಿಎಸ್ ಪಾರ್ಟಿ ಅನ್ನೇ ಹಿಂದಿಕ್ಕಿ ಮೆರೆಯುತ್ತಿರುವ ಈ ಸಮಯದಲ್ಲಿ ಇದಕ್ಕೆ ಕಾರಣ ಪುರುಷರಾದ ಹೆಚ್.ಡಿ. ಕುಮಾರಸ್ವಾಮಿಯವರು ಪಂಚೆ ಉಟ್ಟುಕೊಂಡು ಹುಟ್ಟುಹಬ್ಬ ಆಚರಿಸಿಕೊಂಡರಂತಲ್ಲಾ, ಕುಮಾರಣ್ಣನಿಗೆ ಅಭಿನಂದಿಸಬೇಕಿರುವುದು ನಮ್ಮ ಕರ್ತವ್ಯ ಎಂದುಕೊಂಡು ಫೋನ್ ಮಾಡಿದಾಗ ರಿಂಗಾಯ್ತು.

ರಿಂಗ್‌ಟೋನ್: "ನಗುನಗುತಾ ನಲೀ ನಲಿ ಏನೇ ಆಗಲಿ..."

"ಹಲೋ ಯಾರು?"

"ನಾನು ಸಾರ್ ಯಾಹು. ಹುಟ್ಟಿದ ಹಬ್ಬದ ಶುಭಾಷಯಗಳು ಸಾರ್."

"ಥ್ಯಾಂಕ್ಸು!"

"ಐವತ್ತಾರೂರ್ಸ ಆಗೇ ಹೋಯ್ತಲ್ಲ ಸಾರ್."

"ಮನುಷ್ಯ ಅಂತ ಹುಟ್ಟಿದ ಮ್ಯಾಲೆ ವಯಸ್ಸಾಗಲೆ ಬೇಕಲ್ರೀ. ಕಳೆದ ವರ್ಷ ನನಗೆ ಐವತ್ತೈದು ಅಂದ್ರೆ ಈ ವರ್ಷ ಐವತ್ತಾರು ಆಗ್ಲೇಬೇಕಲ್ಲ."

"ಹೌದಲ್ಲ ಸಾರ್. ಅಂತೂ ನೀವೇ ಪಾರ್ಟಿ ಅಧ್ಯಕ್ಷರಾದರಲ್ಲ ಅದ್ಕೂ ಅಭಿನಂದನೆಗಳು."

"ಥ್ಯಾಂಕ್ಯೂ ಯಾಹು. ಬನ್ನಿ ಮಾತಾಡಣ."

"ಬೆಳಗಾಂವರಿಗೂ ಬರಕ್ಕೆ ಬಸ್‌ಚಾರ್ಜು ಮಸಿ ಆಯ್ತದ ಸಾರ್. ನೀವು ಬೇರೆ ಮದ್ದಿನಂಗೆ ದುಡ್ಡು ಕೊಡಲ್ಲ."

"ಎಲ್ಲಿಂದ ಕೊಡ್ಲಿ ಯಾಹು? ನಾವೇನು ಅಧಿಕಾರದಲ್ಲಿದ್ದಿವಾ?"

"ತಿರಗ ನೀವೇ ಪಾರ್ಟಿ ಅಧ್ಯಕ್ಷರಾಗ್ತಿದ್ದಿರಲ್ಲ? ದುಡ್ಡು ಸಿಗಲ್ವ ಸಾರ್?"

"ಎಲ್ಲಿ ಸಿಗುತ್ತೇರಿ?"

"ಮತ್ತೆ ಅಧಿಕಾರಕ್ಕೆ ಬರ್ತಿನಿ ಅಂತ ಹೆದ್ರಿಸಿ ಈಸಗಳಕ್ಕಾಗಲ್ವಾ?"

"ಈಸಗಬಹುದು, ಆದ್ರೆ ಮರ್ಯಾದೆ ಪ್ರಶ್ನೆ. ಯಂಗೆ ಕೇಳದು?"

"ಅದು ನಿಜ ಸಾರ್. ಯಾರನ್ನಾದ್ರು ಕಳಸಕ್ಕೆ ಜಮೀರ್, ಬಾಲಕೃಷ್ಣ ಚೆಲುವಣ್ಣ ಬೇರೆ ಹತ್ರ ಇಲ್ಲ."

"ಅವುರಿಲ್ದೆಯಿದ್ರು ಪಾರ್ಟಿ ಕಟ್ತಿನಿ ಕಂಡ್ರಿ."

"ಏನೇ ಆಗ್ಲಿ ತಿರಗ ನೀವೆ ಅಧ್ಯಕ್ಷರಾಗಬಾರದಿತ್ತು ಸಾರ್."

"ಆಗಬಾರದಿತ್ತು, ಆದ್ರೆ ಇನ್ಯಾರಿದ್ದಾರೆ ಹೇಳಿ."

"ಹೊರಟ್ಟಿ ಮಾಡಬಹುದಿತ್ತು, ದತ್ತನ್ನ ಮಾಡಬಹುದಿತ್ತು."

"ನಮ್ಮ ತಂದೆ ಒಪ್ಪಬೇಕಲ್ಲ, ಹೊರಟ್ಟಿ ಲಿಂಗಾಯತ್ರ ಪೈಕಿ. ಮುಂದೆ ಏನಾದ್ರು ಹೆಚ್ಚು ಕಮ್ಮಿಯಾದ್ರೆ ತೊಂದ್ರೆ ಅನುಭವಿಸುವವರು ನಾವೇಯ ಅಂತ ಮಾಡಲಿಲ್ಲ, ಇನ್ನ ದತ್ತ ಒಳ್ಳೆ ಮಾತುಗಾರ. ಆದ್ರೆ ಆತನಕ ಸಮುದಾಯ ಇಲ್ಲ, ದುಡ್ಡು ಖರ್ಚು ಮಾಡಿ ಪಾರ್ಟಿ ಕಟ್ಟತಕ್ಕಂತ ಆಸಾಮಿ ಅಲ್ಲ, ಹಿಂದಿನ ಚುನಾವಣೆಲಿ ಖರ್ಚು ಮಾಡಿರತಕ್ಕಂತ ಸಾಲವನ್ನೇ ವಾಪಸು ಕೊಟ್ಟಿಲ್ಲ ಎಂಬತಕ್ಕಂತ ಮಾತು ಕೇಳಿಬಂದವೆ."

"ಅದ್ರು ಜೆಡಿಎಸ್ ಪಾರ್ಟಿಗೆ ಒಂದು ಘನತೆ ತಂದುಕೊಡತಿದ್ದ."

"ದುಡ್ಡಿದ್ರೆ ಆಲವೇನ್ರಿ ಘನತೆ ಬರದು?"

"ಅದು ನಿಜ. ಆ ಚೆಲುವರಾಯಸ್ವಾಮಿ ಮಾಡಬಹುದಿತ್ತಲ್ಲ ಸಾರ್. ಬೇಕಾದಂಗೆ ಆಸ್ತಿ ಮಾಡಿಕೊಂಡು ಬಂಗ್ಲೆ ಕಟ್ಟಿಕೊಂಡು ಜೋರಾಗಿದಾನೆ."

"ಅವನು ಇವತ್ತು ಜೋರಾಗಿದಾನೆ. ಯಾರಿ... ಎಂಬತಕ್ಕಂತ ವಿಷಯನೆ ಮುಚ್ಚಿಟ್ಟುಕೊಂಡು ನನ್ನ... ತಿರುಗ್ತಾ ಇದಾನೆ."

"ಕರದು ಮಾತಾಡಿಸಿ ಸಾರ್."

"ಅಂತ ತಪ್ಪ ನಾನೇನು ಮಾಡಿದ್ದಿನ್ರಿ. ಒಂದ... ಚನ್ನರಾಯಪಟ್ಟಣದಲ್ಲಿ ಪೀಸ್‌ವರ್ಕ್ ಕಂಟ್ರಾಕ್... ಅವರ ಮನೆ ಬಡತನ ನೋಡಕ್ಕಾಗದೆ ನಮ... ಎಮ್ಮೆಲ್ಲೆಗಳಿಗೆ ಹೇಳಿ, ರಸ್ತೆ ಚರಂಡಿ ಕಂಟ್ರಾಕ್ಟ್ ಕೆ... ಎಮ್ಮೆಲ್ಲೆ ಮಾಡಿದ್ರು, ಎಂಪಿ ಮಾಡಿದ್ರು, ಮಂತ್ರಿ ... ಆದ್ರಿವತ್ತು ನಮಗೇ ತಿರುಗಿ ಮಾತನಾಡತಕ್ಕಂತ... ಮಾಡ್ತಾನೆ. ನಮಗಿನ್ನ ಪಿತ್ತ ಕೆರಳಿಲ್ಲ."

"ರೇವಣ್ಣನಿಗೇಳಿ ಸಾರ್. ಈ ಹಿಂದಿನ ಚುನ... ಸೋಲಿಸಿದ್ದೋರು ರೇವಣ್ಣನೆ ಅಲ್ಲವೆ."

"ಸೋಲಿದು ಬೇಡ ಗೆದ್ದು ಬರ್ಲಿ. ಆದ್ರೆ... ಬಾಲ ಅಲ್ಲಾಡುಸ್ತ ಅಂತ ನಮ್ಮನ್ನೆ ಅಲ್ಲಾಡ್ಸ... ಅದರ ಪರಿಣಾಮನ ಅನುಭವಿಸ್ತರೆ."

"ಜೆಡಿಎಸ್‌ನ ಒಂದು ಟೀಂವರ್ಕ್ ತರ ಮಾ... ಸಾರ್. ಈಗೊಂತರ ಅಪ್ಪ ಮಕ್ಕಳು, ಮೊಮ್ಮಕ್ಕ... ತರ ಆಗಬಾರದಿತ್ತು."

"ಈಗ್ಲು ಟೀಂವರ್ಕಲ್ಲೆ ಕಂಡ್ರಿ ಪಾರ್ಟಿ ಕಟ್ಟತಾ..."

"ಫ್ಯಾಮಿಲಿ ಟೀಂ ವರ್ಕಲ್ವಾ?"

"ಅಲ್ಲ ಕಂಡ್ರಿ, ಪಾರ್ಟಿಲಿರೊ ಲೀಡರ್‌ಗಳ ..."

"ನಮಿಗೇನೂ ಅಂಗೆ ಕಾಣ್ತಾಯಿಲ್ಲ ಸಾರ್. ... ಫ್ಯಾಮಿಲಿ, ನಿಮ್ಮ ಫ್ಯಾಮಿಲಿ, ಮತ್ತೆ ದೇವೇಗೌಡ್ರ... ಕೈಲಿ ಪಾರ್ಟಿ ನರಳ್ತಾಯಿದೆ."

"ನರಳತಾಯಿರಕ್ಕೆ ಯಾವ ಕಾಯಿಲೆನೂ ... ನಿಜವಾಗ್ಲೂ ಡೆವಲಪ್ಪಾಗ್ತ ಇದೆ."

"ದೇವರಾಣೆ ನರಳತಾಯಿದೆ ಸಾರ್. ದೇ... ಹ್ಯಂಗೆ ಎದ್ದು ನಿಂತಗಳಕ್ಕೆ ಆಸರೆನ ಆಶ್ರಯಿಸ್ತರೊ, ... ಅವುರಿವರ ಭುಜದ ಮೇಲೆ ಕೈಹಾಕ್ತರೋ, ಹಾ... ಪಾರ್ಟಿ ಸ್ಥಿತಿ ಇದೆ. ನೀವು ಪ್ರಬಲವಾಗಿ... ಕಟ್ಟದೆಯಿದ್ರೆ, ಮುಂದೆ ಬಿಜೆಪಿಗಳು ಬಂದು ಕ... ಹಾಳು ಮಾಡ್ತಾರೆ."

"ಅದಕ್ಕಲ್ಲ ಅವಕಾಶ ಕೊಡಲ್ಲ ಕಂಡ್ರಿ... ಸಂಖ್ಯೆಲಿದ್ರೂ ಮುಖ್ಯಮಂತ್ರಿ ಪದವಿಯನ್ನು ಪ... ಪ್ರಬಲ ಖಾತೆಗಳನ್ನ ಕಿತ್ತಕೊಂಡಿದ್ದೊ. ಮುಂದ... ಮಾಡ್ತಿವಿ."

"ಥೂತ್ತೇರಿ!!!"



ಈ ದೇಶ ನನ್ನ ತಾಯಿ

ಪಾಕಿಸ್ತಾನದಲ್ಲಿ ಉಗ್ರರು ಅಮಾಯಕ ಕಂದಮ್ಮಗಳನ್ನು ಕೊಂದಿದ್ದರ ವಿರುದ್ಧ ಎಲ್ಲರಲ್ಲೂ ದುಃಖ, ಕೋಪ, ಅಸಹಾಯಕತೆ ಮುಡುಗಟ್ಟಿದೆ. ಫೇಸ್‌ಬುಕ್‌ನಲ್ಲಿ ಹಲವರು ತಮ್ಮ ದುಃಖವನ್ನು ತೋಡಿಕೊಂಡಿದ್ದಾರೆ. ಅವುಗಳಲ್ಲಿ ಮೂರನ್ನು ಇಲ್ಲಿ ಪ್ರಕಟಿಸಲಾಗಿದೆ.

ಆಫೀಸಿನಿಂದ ಮನೆಗೆ ಹೋದವನೇ ಟೀವಿ ಹಚ್ಚಿ ...ಯ ಮೂಲೆಯಲ್ಲಿ ಕುಳಿತುಬಿಟ್ಟೆ.. ನಾನು ಹಚ್ಚಿದ ...ಲ್‌ನ ನಿರೂಪಕಿ ನ್ಯೂಸ್ ಓದುವಾಗ ನನ್ನ ಜೀವನದಲ್ಲೇ ಕಾಣದ ಒಂದು ದೃಶ್ಯವನ್ನು ಕಂಡೆ.. ವಾರ್ತೆ ಓದುತ್ತಿದ್ದ ...ಯ ಧ್ವನಿ ನಡುಗುತ್ತಿತ್ತು, ಬಂದ ಕಣ್ಣೀರನ್ನು ತನ್ನ ...ಪಿನಲ್ಲೇ ತಡೆ ಹಿಡಿದು ವಾರ್ತೆ ಓದುತ್ತಿದ್ದಳು. ಅವಳಿಗೆ ... ಪಾಕಿಸ್ತಾನದ ಮಕ್ಕಳೋ ಭಾರತದ ಮಕ್ಕಳೋ ಯಾವ ...ಮ ಮಕ್ಕಳೋ ಅನ್ನೋದು ಬೇಡವಾಗಿ ಅವಳ



...ತ್ತೆ, ಅವಳ ತಾಯ್ತನ ಅವಳನ್ನು ಮತ್ತು ಅವಳ ...ಯನ್ನು ನಡುಗುವಂತೆ ಮಾಡಿಬಿಟ್ಟಿತ್ತು... ಇಲ್ಲಿ ಗೆದ್ದಿದ್ದು ...ವಲ್ಲ ಮಾನವೀಯತೆ.

...ಗೆ ಟೀವಿಯನ್ನು ನೋಡುವಾಗ ಕಂಡ ಪಾಕಿಸ್ತಾನದ ... ಮಕ್ಕಳ ಕೆಲ ಅನಿಸಿಕೆಗಳು ಈ ಕೆಳಗೆ ಬರೆದಿದ್ದೇನೆ.

ದೃಶ್ಯ 1: "ಮದುವೆಯಾಗಿ ಹನ್ನೆರಡು ವರ್ಷವಾದರೂ ... ನಮಗೆ ಮಕ್ಕಳನ್ನು ಕರುಣಿಸಿರಲಿಲ್ಲ, ಸಿಕ್ಕಸಿಕ್ಕ ...ಗಳಲ್ಲಿ ಸಿಕ್ಕ ಸಿಕ್ಕ ಬಾಬಾಗಳ ಮುಂದೆ ಹರಕೆಯನ್ನ ... ನಂತರ ಹುಟ್ಟಿದ ಮಗು ಇವತ್ತು ನನ್ನ ಬಿಟ್ಟು ...ಗಿದೆ. ನನ್ನ ಮಗನಿಗೆ ಜ್ವರ ಬಂದಾಗ ಅವನ ನೋವನ್ನು ...ಡಲಾಗದೆ 'ಅಯೆ ಅಲ್ಲಾ!!!! ನನ್ನ ಮಗುವಿನ ...ವನ್ನೆಲ್ಲ ನನಗೆ ಕೊಟ್ಟು ಬಿಡು. ಆದರೆ ನನ್ನ ಕಂದ ಪಡುವ ನೋವು, ಸಂಕಟವನ್ನ ನನ್ನಿಂದ ನೋಡಲು ಸಾಧ್ಯವಿಲ್ಲ' ಎಂದು ಪರಿಪರಿಯಾಗಿ ಬೇಡಿಕೊಂಡಿದ್ದೇನೆ.. ಆದರೆ ಇವತ್ತು ನನ್ನ ಅಲ್ಲಾ ಕೂಡ ನನ್ನ ಕೂಗು ಕೇಳಲಿಲ್ಲ...

ದೃಶ್ಯ 2: ಐದು ಹೊತ್ತು ನಮಾಜ್ ಮಾಡುವ ಅಲ್ಲಾಹನೇ ಎಲ್ಲಾ ಎಂದು ನಂಬಿರುವ ಮನುಷ್ಯನೊಬ್ಬ ತನ್ನ ಮಗು ಶಾಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದು ತಿಳಿದು ಎದೆ ತಟ್ಟಿ ತಟ್ಟಿ ಜೋರಾಗಿ ಬಾಯಿ ಬಡಿದುಕೊಳ್ಳುತ್ತ "ನಾನು ನಂಬಿದ ಅಲ್ಲಾಹನೇ ನಿನ್ನ ಮೇಲಾಣೆ ಇದು ಯಾರ ಕಣ್ಣಿಗೂ ಕಾಣುತ್ತಿಲ್ಲವೇ? ನನ್ನ ನೋವು ಇಲ್ಲಿ ನಮ್ಮನ್ನಾಳುವವರಿಗೆ ತಲುಪುತ್ತಿಲ್ಲವೆ? ಅಯ್ಯೋ ನನ್ನ ಮಗು ನನ್ನ ಕಂದಮ್ಮ ಸಂಜೆ ಬಂದ ಮೇಲೆ ಚಾಕ್ಲೆಟ್ ಕೊಡಿಸಬೇಕು ಅಂತ ಹೇಳಿಹೋಗಿತ್ತು, ಇನ್ನೂ ಹೊರಬಂದಿಲ್ಲ, ಅಯೇ ಅಲ್ಲಾ ಚಾಹೆ ಮೇರಿ ಜಾನ್ ಲೆಲೆ ಮೇರ ಬೇಟಾ ಮುಝೆ ದೇದೇ" ಎಂದು ಕೂಗಿಕೊಳ್ಳುವಾಗ ಒಬ್ಬ ತಂದೆಯಾದ ನಾನು ಸೋತು ಹೋಗಿದ್ದೆ.. ಗೊತ್ತಿಲ್ಲದೇ ಕಣ್ಣೀರು ಹರಿಯಿತು.

ದೃಶ್ಯ 3: ಇಷ್ಟೆಲ್ಲಾ ನಡೆಯುತ್ತಿದ್ದರೂ ಪಾಕ್ ಎಂಬ ದರಿದ್ರ ದೇಶದ ದರಿದ್ರ ಪ್ರಧಾನಿ "ಸತ್ತ ಮಕ್ಕಳೆಲ್ಲರಿಗೂ ಸ್ವರ್ಗ ಸಿಗಲಿ. ಅವರು ಶಹೀದ್ ಆಗಿದ್ದಾರೆ. ಅಲ್ಲಾ ಆ ಮಕ್ಕಳ ಹೆತ್ತವರಿಗೆ ಧೈರ್ಯ ಕೊಡಲಿ. ನಾವೆಲ್ಲಾ ಸೇರಿ ದುವಾ ಮಾಡೋಣ" ಎಂದಿನಂತೆ ತನ್ನ ತುಕ್ಕು ಹಿಡಿದಿರುವ ಹೃದಯದಿಂದ ಹೃದಯವಂತಿಕೆ ಇಲ್ಲದ ಭಾಷಣ ಮಾಡುತ್ತಿದ್ದದ್ದು ನೋಡಿ ನಗಬೇಕೋ ಅಳಬೇಕೋ ತಿಳಿಯದಾಗಿ ಮೂಕನಾದೆ.

ಅಲ್ಲಿ ಚಿಕ್ಕ ಚಿಕ್ಕ ಕಂದಮ್ಮಗಳು ಹೆಣವಾಗಿ ಮಲಗಿದ್ದರೆ ಅತ್ತ ಆ ಕಂದಮ್ಮಗಳ ಹೆತ್ತವರು ಬದುಕಿಯೂ ಸತ್ತುಹೋಗಿದ್ದರು. ಅಲ್ಲಿ ಸತ್ತು ಬಿದ್ದದ್ದು ನವಾಜ್ ಶರೀಫ್‌ನ ಮಗನಲ್ಲ, ಹಫೀಜ್ ಸಯೀದ್‌ನ ಮಗನಲ್ಲ, ಜರ್ದಾರಿಯ ಮಗನಲ್ಲ, ಇಮ್ರಾನ್ ಖಾನ್‌ನ ಮಗನಲ್ಲ, ಅಲ್ಲಿ ಸತ್ತು ಬಿದ್ದದ್ದು ಅಮಾಯಕ ಮತ್ತು ತನ್ನ ಮಕ್ಕಳಿಗಾಗಿಯೇ ಬದುಕುತ್ತಿದ್ದವರ ಹೆಣಗಳು.

ಆಸ್ಪತ್ರೆಯ ಸುತ್ತಮುತ್ತ ನಿಂತಿದ್ದವರ ಮುಖಗಳನ್ನ ಸೂಕ್ಷ್ಮವಾಗಿ ಗಮನಿಸಿದೆ. ಈ ಧರ್ಮ, ಜಾತಿ, ದೇಶ ಯಾವುದರ ಗೊಡವೆಯೇ ಬೇಡ. ಆ ಶಾಲೆಯಿಂದ ತನ್ನ ಮುದ್ದು ಕಂದಮ್ಮ ಶಾಲೆಗೆ ಹೋಗುವಾಗ ಟಾಟಾ ಮಾಡಿದಂತೆ ಅಬ್ಬು ಅಮ್ಮಿ ಎಂದು ಕೂಗಿಕೊಂಡು ಹೊರಬಂದರೆ ಸಾಕು ಎಂಬುದು ಸ್ಪಷ್ಟವಾಗಿ ಅವರ ಮುಖಗಳಲ್ಲಿ ಎದ್ದು ಕಾಣುತ್ತಿತ್ತು.

ಬುನಾದಿಯೇ ಗಟ್ಟಿ ಇಲ್ಲದ ಯಾವ ದೇಶವೂ ಹೆಚ್ಚು ದಿನ ಆದರ್ಶಗಳ ಮೇಲೆ ನಿಲ್ಲಲು ಸಾಧ್ಯವಿಲ್ಲ, ಅವರು ಮಾಡಿದ್ದನ್ನು ಅವರೇ ಅನುಭವಿಸಬೇಕು.

ಧರ್ಮ ಇಂದು ನಾನು ನೀವು ಯೋಚಿಸುವುದಕ್ಕಿಂತ ಹೆಚ್ಚು ಜನರ ದೇಹದಲ್ಲಿ ಚಟದಂತೆ ಹರಡಿಬಿಟ್ಟಿದೆ.. ಎಲ್ಲಾ ರೋಗಗಳಿಗೆ ಮದ್ದಿದೆ ಆದರೆ ಈ ಧರ್ಮ ಎಂಬ ರೋಗಕ್ಕೆ ಮದ್ದಿಲ್ಲ.

ಅಲ್ಲಿಯ ಮಕ್ಕಳಲ್ಲಿ ನನ್ನ ಮಗಳಿಲ್ಲ ಎಂಬ ಒಂದೇ ಒಂದು ನಿರಾಳತೆ ನನ್ನನ್ನು ಈ ದೇಶವನ್ನು, ಈ ನೆಲವನ್ನು ಮೊದಲಿಗಿಂತ ಹೆಚ್ಚು ಹುಚ್ಚನಂತೆ ಪ್ರೀತಿಸುವಂತೆ ಮಾಡಿಬಿಟ್ಟಿದೆ. ಈ ದೇಶದಲ್ಲಿ ಗಾಳಿ ಇರಲಿ ಬಿಡಲಿ, ನೀರು ಸಿಗಲಿ ಬಿಡಲಿ, ಅನ್ನ ಸಿಗಲಿ ಬಿಡಲಿ, ಹಣ ಇರಲಿ ಬಿಡಲಿ. ಬದುಕಿರುವವರೆಗೆ ಈ ದೇಶದ ಮಣ್ಣನ್ನು ತಿಂದು ನಿಶ್ಚಿಂತೆಯಾಗಿ ಸಾಯಬೇಕೆನಿಸಿದೆ.

ನಾನೆಂದೂ ನಾನು ಮುಸಲ್ಮಾನ ಎಂದು ಎದೆ ತಟ್ಟಿ ಹೇಳಿಲ್ಲ, ಈಗಲೂ ಹೇಳುವುದಿಲ್ಲ, ಮುಂದೆಯೂ ಹೇಳಲಾರೆ. ಆದರೆ ನನ್ನ ಕೊನೆಯ ಉಸಿರು ನಿಲ್ಲುವಾಗ ಎದೆ ತಟ್ಟಿ ಬೋಲೋ ಭಾರತ ಮಾತಾ ಕಿ ಜೈ ಎಂದು ಹೇಳಿ ಸಾಯುವ ಆಸೆಯಂತೂ ಇದೆ..

ಒಂದು ಹನಿ ರಕ್ತವನ್ನೂ ಸುರಿಸದೆ ಈ ಭೂಮಿಯಲ್ಲಿ ಸ್ವತಂತ್ರವಾಗಿ ಬದುಕುತ್ತಿರುವ ನಾವು, ಇಲ್ಲಿ ಬೆಳೆದ ಧಾನ್ಯದಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ನಾವು ಈ ದೇಶವನ್ನು ಈ ಮಣ್ಣನ್ನು ಹೆತ್ತ ತಾಯಿಯಂತೆ ನಿಷ್ಠೆಯಿಂದ ಪ್ರೀತಿಸೋಣ.. ಧರ್ಮ ಜಾತಿಗಾಗಿ ಜಗಳವಾಡದೆ ಮಾನವರಾಗಿ ಮಾನವೀಯತೆಗಾಗಿ ಸೋದರರಂತೆ ಬದುಕೋಣ...

ಪಾಕಿಸ್ತಾನದಲ್ಲಿ ಇಂದು ನಡೆದ ಘಟನೆಯನ್ನು ನೋಡಿ ನಿಮ್ಮ ಮನಗಳು ಕುಗ್ಗಿ ಹೋಗಿರಬಹುದು. ಈ ದೇಶದ ಪ್ರಜೆಗಳಾಗಿ ನಾವು ನೀವೆಲ್ಲ ಒಂದೇ ಒಂದು ಕೆಲಸವನ್ನು ಮಾಡೋಣ.. ನಿಮ್ಮ ನಿಮ್ಮ ಮನೆಗಳಿಂದ ಹೊರಹೋಗಿ ಚಪ್ಪಲಿ ಹಾಕಿಕೊಂಡು ಓಡಾಡುವ ಈ ದೇಶದ ಮಣ್ಣಿಗೆ ಒಂದೇ ಒಂದು ಬಾರಿ ಮುತ್ತಿಕ್ಕಿ, ಕಾರಣ ದೇಶದ ಮಣ್ಣಿಗೆ ಮುತ್ತಿಕ್ಕುವ ಭಾಗ್ಯ ಎಲ್ಲರಿಗೂ ಸಿಗುವುದಿಲ್ಲ..

ದಯವಿಟ್ಟು ಈ ಪೋಸ್ಟ್‌ಗೆ ಲೈಕ್ ಒತ್ತಬೇಡಿ ಇದು ಖಂಡಿತ ಲೈಕಿಗಾಗಿ ಬರೆದಿಲ್ಲ, ಇದನ್ನು ಆತ್ಮ ಸಾಕ್ಷಿಯಾಗಿ ದೇಶವನ್ನು ಪ್ರೀತಿಸಿ ಬರೆದಿದ್ದೇನೆ.

ಜೈ ಹಿಂದ್.

■ **ಮುಜೀಬ್ ಮಾನ್ವಿ**



...ಪ್ಪಗಳಿಲ್ಲದ ಸ್ವರ್ಗ ನಿನಗೆ ಭೂಷಣವೇ, ಅಲ್ಲಾ?

...ಕ್ಕಳು ಸ್ವರ್ಗದ ಪುಷ್ಪಗಳು
...ದ್ದು ನೀನೆ, ಅಲ್ಲಾ...
... ನೋಡು ಪುಷ್ಪಗಳನ್ನು
...ಟಿ ಹೊಸಕಿಹಾಕಿದ್ದಾರೆ
... ಸಮಾ ಬಿರಿದಿರಲಿಲ್ಲ

...ನದಲ್ಲೇ ಉಸಿರು ನಿಲ್ಲಿಸಿದ ಮಕ್ಕಳು
... ಸ್ವರ್ಗ ಸೇರುತ್ತಾರಂತೆ
...ದ್ದು ನೀನೇ, ಅಲ್ಲಾ...
...ದ್ದು ಮಾತ್ರ
...ನಾಮ ಸ್ಮರಿಸುವವರು




ಸ್ವರ್ಗ ಸೇರುವ ಉತ್ಕಟ ಬಯಕೆಯವರು
ಸತ್ತಮಕ್ಕಳ ಹೆಣ ಪ್ರಶ್ನೆ ಕೇಳುತ್ತಿದೆ
ಉತ್ತರಿಸಬೇಕಾದದ್ದು ನೀನೆ, ಅಲ್ಲಾ...
ನಿನ್ನ ಧರ್ಮ ರಕ್ಷಿಸಬೇಕಾದರೆ...
ನಿನ್ನ ಧರ್ಮದ ಶತ್ರುಗಳ ಸೋಲಿಸಬೇಕಾದರೆ
ನಮ್ಮ ಅಮ್ಮಂದಿರ ಮಡಿಲು
ಬರಿದಾಗಬೇಕೆ
ನೀನು ಉತ್ತರಿಸದೇ...ಸ್ವರ್ಗ
ಪ್ರವೇಶಿಸುವುದಿಲ್ಲವಂತೆ, ಮಕ್ಕಳು
ಪುಷ್ಪಗಳಿಲ್ಲದ ಸ್ವರ್ಗ ನಿನಗೆ
ಭೂಷಣವೇ, ಅಲ್ಲಾ...

■ **ಮುನೀರ್ ಕಟಿಪಲ್ಲ**



ದೇವರನ್ನು ಕೊಲ್ಲೋಣ



ಯಾರು ಹೇಳಿದ್ದು ದೇವರು ಬದುಕಿಲ್ಲವೆಂದು..
ದೇವರು ಇನ್ನೂ ಸತ್ತಿಲ್ಲ..
ಅವನು ಎಸಗಬೇಕಿರುವ ಕೊಲೆಗಳು
ಇನ್ನೂ ಮುಗಿದಿಲ್ಲ..

ಕ್ರಿಸ್ತ ಹುಟ್ಟುವ ಮುನ್ನ ಅವನದ್ದೇ ನೆಲದೊಳಗೆ
ಪ್ಯೂನಿಕ್ ಹತ್ಯಾಕಾಂಡ ನಡೆಯಿತಲ್ಲ..
ಅದು ಜಗತ್ತು ಕಂಡ ಮೊದಲ ನರಮೇಧ.
ಮಯನ್ ಬುಡಕಟ್ಟು ಕಡಿದು ಬೆಟ್ಟ ಒಟ್ಟಿದ್ದು
ಹೆಸರಿಲ್ಲದ ಕಾಡುಜನರ ಸಾವಿರ ತಲೆಗಳು..
ದೇವರು ಆಗಲೂ ಸತ್ತಿರಲಿಲ್ಲ..

ಬುಖಾರಾದ ಕಂಕಳೀಯರ ತಲೆಗಳನ್ನು
ಲಕ್ಷದ ಲೆಕ್ಕದಲ್ಲಿ ಚೆಂಡಾಡುತ್ತಿದ್ದ
ಚೆಂಗೀಸಖಾನ್‌ಗೆ ಬುದ್ಧಿ ಹೇಳಲು ಆಗದ ದೇವರು..
ಕಾಂಗೋ ಫ್ರೀ ಸ್ಟೇಟಿನ ಲಿಯೋಪೋಲ್ಡನು
ರಬ್ಬರ್ ತೋಟದ ಕೂಲಿಗಳನ್ನು ಕೊಲ್ಲುವಾಗಲೂ..
ಇನ್ನೂ ಸತ್ತೇ ಇರಲಿಲ್ಲ..

ನಮೀಬಿಯದೊಳಗೆ ಹೆರೆರೋಗಳನ್ನು
ಅವರೇ ತೋಡಿದ ಗುಂಡಿಗಳೊಳಗೆ ಇಳಿಸಿ
ಜೀವಂತ ಹೂತರಲ್ಲ..
ದೇವರು ಆಗಲೂ ಸತ್ತಿರಲಿಲ್ಲ..
ಕಾಲಿಟ್ಟ ಖಂಡಗಳ ಮೂಲನಿವಾಸಿಗಳನ್ನು
ತರಿತರಿದು ಕೊಲಂಬಸನು ಕೊಲ್ಲುತ್ತಿರುವಾಗಲೂ..
ದೇವರು ಸತ್ತಿರಲಿಲ್ಲ..

ಮೆಕ್ಸಿಕೊದ ಯುಕ್ಯಾಟನ್, ಪೆರುವಿನ
ಟುಪಾಕ್ ಅಮಾರು ಜನರು
ಹುಳುಗಳಂತೆ ಸೀಳಿ ಕೊಲ್ಲಲ್ಪಡುವಾಗ,
ಕುರ್ದಿಸ್ತಾನಿನ ದೆರ್ಸಿಂ ಹತ್ಯಾಕಾಂಡ ನಡೆಯುವಾಗಲೂ
ದೇವರು ಸತ್ತಿರಲಿಲ್ಲ..

ರುವಾಂಡದ ಶವಾಗಾರದೊಳಗೆ ಧೂಳು
ನುಗ್ಗಲೂ ಜಾಗವಿಲ್ಲದಂತೆ,
ಹೆಣಗಳ ರಾಶಿರಾಶಿಯೇ ಕೆಡವಿದ್ದರಲ್ಲ..
ಗ್ವಾಟೆಮಾಲಾದ ಬಡವರ ರಕ್ತ ಚರಂಡಿ
ತುಂಬಿ ಹರಿಯಿತಲ್ಲ,
ದೇವರು ಆಗಲೂ ಸತ್ತೇ ಇರಲಿಲ್ಲ..

ರಷ್ಯಾದ ಟೆಂಟಿಲ್ ನರಮೇಧ,
ಜಪಾನಿನ ನಾನ್ಕಿನ್ ಹತ್ಯೆಗಳು,
ಮಹಾಯುದ್ಧಗಳ ಲಕ್ಷಗಟ್ಟಲೆ ಕೊಲೆಗಳು..
ನಡೆಯುತ್ತಲೇ ಇದ್ದವಲ್ಲ..
ದೇವರು ಸತ್ತಿರಲಿಲ್ಲ..

ತೀರ ನೆನ್ನೆಮೊನ್ನೆ, ಸಿಖ್ಖರ, ದಲಿತರ,
ಮುಸ್ಲಿಮರ ಸಾಕು ಸಾಲು ನರಹತ್ಯೆಗಳಾದವಲ್ಲ,
ದನದ ಚರ್ಮ ಸುಲಿದಿದ್ದಕ್ಕೆ ಬಡವರಿಗೇ
ಬೆಂಕಿಯಿಟ್ಟು ಕೊಂದರಲ್ಲ..
ದೇವರು ಇಲ್ಲೂ ಸತ್ತಿರಲಿಲ್ಲ..

ಈ ದೇವರೆನ್ನುವನು ನೆಗೆದುಬೀಳಲು
ಇನ್ನೆಷ್ಟು ಕೋಟಿ ಜೀವಗಳು ಸಾಯಬೇಕು,
ಇನ್ನೆಷ್ಟು ಕೊಲೆ ನಡೆದು, ಇನ್ನೆಷ್ಟು
ರಕ್ತ ಹರಿಯಬೇಕು..
ಕುದುಗಾಡು ದೇವರುಗಳು ಸಾಯುತ್ತಿಲ್ಲ..
ಬಡಪಾಯಿ ಮನುಷ್ಯರು ಬದುಕುತ್ತಿಲ್ಲ..

ತನ್ನ ಕಾರಣಕ್ಕೆ ಜೀವಹತ್ಯೆ ನಡೆಸುವ
ದೇವರನ್ನು ಕೊಂದಾದರೂ ಸರಿ,
ಮನುಷ್ಯತ್ವ ಎಂಬುದು ಬದುಕಿಬಿಡಲಿ..
ಬನ್ನಿ ನರಹಂತಕ ದೇವರುಗಳನ್ನು
ಕೊಲ್ಲೋಣ..



■ **ದಯಾನಂದ ಟಿ.ಕೆ**



ತಲೆಕೆಟ್ಟ ಸಾಬರ ಮತಿಗೆಟ್ಟ ಹುಚ್ಚಾಟಗಳು

ಅಲ್ಲಾಹು ಪರಮ ದಯಾಮಯಿ, ಕರುಣಾ ಸಾಗರ, ಅವನೇ ಭೂಮಿ ಆಕಾಶಗಳ ಒಡೆಯನು ಮತ್ತು ಸ್ತುತಿ ಸ್ತೋತ್ರಗಳೇನಿದ್ದರೂ ಅವನಿಗೆ ಮೀಸಲು!

ಪೇಶಾವರದ ಸೈನಿಕ ಶಾಲೆಗೆ ನುಗ್ಗಿ ನೂರಾ ನಲವತ್ತು ಮಂದಿ ಮಕ್ಕಳನ್ನು ಪೈಶಾಚಿಕವಾಗಿ ಕೊಂದು ಆ ಶಾಲೆಯ ಶಿಕ್ಷಕಿಯನ್ನು ಮಕ್ಕಳೆದುರೇ ಬೆಂಕಿಯಿಟ್ಟು ಸುಟ್ಟು ಹಾಕಿದ ತಾಲಿಬಾನ್ ಉಗ್ರರಿಗೂ ಕುರಾನಿನ ಮೇಲ್ಕಂಡ ಧ್ಯೇಯ ವಾಕ್ಯಕ್ಕೂ ಯಾವ ಸಂಬಂಧ ತಾನೇ ಸಾಧ್ಯ? ಪ್ರಪಂಚದ ಕಣ್ಣಿಗೆ ಅವರು ಮುಸ್ಲಿಂ ಭಯೋತ್ಪಾದಕರು. ಇಸ್ಲಾಮಿಕ್ ಟೆರರಿಸಂ, ಮುಸ್ಲಿಂ ಉಗರು, ಇಸ್ಲಾಮಿಸ್ಟ್‌ಗಳು, ಜಿಹಾದಿಗಳು, ಫಿದಾಯಿನ್, ಮುಜಾಹಿದ್ದೀನ್, ಐಎಎಸ್, ಐಸಿಎಸ್, ಅಲ್‌ಕೈದಾ, ತಾಲಿಬಾನ್, ಬೋಕೋ ಹರಾಮ್, ಅಲ್ ಶಬಾಬ್, ಲಷ್ಕರ್ ಎ ತೋಯ್ಬಾ ಅಲ್‌ಅನ್ಸರ್, ಹರ್ಕತ್ ಉಲ್ ಅನ್ಸರ್, ಹುಜಿ ಹಮಾಸ್- ಹೀಗೆ ವಿಶ್ವದ ಬೇರೆ ಬೇರೆ ದೇಶ, ಕಾಲ, ಭಾಷೆಗಳಿಗೆ ತಕ್ಕಂತೆ ಹುಟ್ಟಿಕೊಂಡ ಇಂಥ ಹಿಂಸಾನುಯಾಯಿಗಳನ್ನು ಪ್ರಪಂಚ ಇಸ್ಲಾಮಿಕ್ ಉಗ್ರರೆಂದೇ ತಾನೇ ಕರೆಯುವುದು?

ಮುಸ್ಲಿಮರ ಪಾಲಿಗೆ ಜಿಹಾದಿಗಳೆಂದೋ, ದೈವ ಸೈನಿಕರೆಂದೋ ಅಥವಾ ಪ್ರವಾದಿಯ ಕಟ್ಟಾಳುಗಳೆಂದೋ, ಧರ್ಮದ ರಕ್ಷಕರೆಂದೋ ಪರಿಭಾವಿಸಲ್ಪಟ್ಟ ಇವರಿಗೂ ಪರಮದಯಾಳು ಅಲ್ಲಾಹು ಅಂದರೆ ದೇವರಿಗೂ ಏನು ಸಂಬಂಧ?


ಕುರಾನನ್ನು ಓದಿಕೊಂಡೇ ಪ್ರವಾದಿ ಮಹಮ್ಮದ್ ಪೈಗಂಬರ್ (ಸ)ರನ್ನು ನೆಚ್ಚಿಕೊಂಡೇ ಆಯುಧ ಕೈಗೆತ್ತಿಕೊಂಡು ಹೋರಾಟಕ್ಕಿಳಿದ ಇವರಿಗೆ ಶಾಲೆಯೊಂದಕ್ಕೆ ನುಗ್ಗಿ ನೂರಾರು ಹಾಲುಗಲ್ಲದ ಹಸುಳೆಗಳನ್ನು ಕೊಲ್ಲುವಂಥ ಪೈಶಾಚಿಕತೆ ರಕ್ತಗತವಾಗಿದೆಯೆಂದರೆ ಇವರಿಗೂ ಧರ್ಮಕ್ಕೂ ಏನು ನಂಟು? ಒಂದು ಧರ್ಮವಾಗಿ ಇಸ್ಲಾಂ ಈ ಮಟ್ಟದ ಕ್ರೌರ್ಯವೊಂದಕ್ಕೆ ಹೇಗೆ ತಾನೇ ಕಾರಣವಾಗಲು ಸಾಧ್ಯ? ಇತ್ತೀಚೆಗೆ ಆಫ್ರಿಕಾದ ನೈಜೀರಿಯಾದಲ್ಲಾದ ಅನಾಚಾರವನ್ನೇ ಗಮನಿಸುವುದಾದರೆ ಆ ದೇಶಕ್ಕೊಂದು ಶಾಪವೆಂಬಂತೆ ಹುಟ್ಟಿಕೊಂಡವನು ಬೋಕೋ ಹರಾಮ್ ಸಂಘಟನೆಯ ಅಧಿಪತಿ ಅಬೂಬಕರ್. ಸಿಕ್ಕಸಿಕ್ಕ ಹೈಸ್ಕೂಲುಗಳ ಮೇಲೆ ದಾಳಿ ನಡೆಸಿದ್ದ ಬೋಕೋ ಹರಾಮ್ ಉಗ್ರರು ಬರೋಬ್ಬರಿ ಮುನ್ನೂರು ಮಂದಿ ಹೆಣ್ಣುಮಕ್ಕಳನ್ನು ಹೊತ್ತೊಯ್ದರು.

ಬೋಕೋ ಹರಾಮ್!

ಹಾಗೆ ಹೊತ್ತೊಯ್ದ ಅಷ್ಟು ಹೆಣ್ಣು ಮಕ್ಕಳನ್ನು ತಾನು ಮುಸ್ಲಿಮರನ್ನಾಗಿ ಮತಾಂತರಿಸಿದ್ದೇನೆಂದೂ, ಅವರೆಲ್ಲರನ್ನೂ ಸಾರಾಸಗಟಾಗಿ ತನ್ನ ಸೈನಿಕರು ಮದುವೆಯಾಗಲಿದ್ದಾರೆಂದೂ, ಮಿಕ್ಕವರನ್ನು sex slaves ಅಂದರೆ ಕಾಮತೃಷೆಯ ಸರಕುಗಳನ್ನಾಗಿ ಮಾರುವುದಾಗಿಯೂ ಹೇಳಿಕೆ ಕೊಟ್ಟ. ತನ್ನ ಈ ದುಷ್ಟತನಕ್ಕೆ ಆತ ಸಮರ್ಥನೆಯಾಗಿ ಬಳಸಿದ್ದು ಇಸ್ಲಾಂ ಮತ್ತು ಕುರಾನ್ ಅನ್ನು!

ತೀರ ಇತ್ತೀಚೆಗೆ ಕೀನ್ಯಾದ ಅಲ್‌ಶಬಾಬ್ ಎಂಬ ಮತ್ತೊಂದು ಇಸ್ಲಾಮಿಕ್ ಉಗ್ರ ಗುಂಪು ಹೆದ್ದಾರಿಯಲ್ಲಿ ಸಾಗುತ್ತಿದ್ದ ಬಸ್ಸೊಂದನ್ನು ತಡೆದು ಅದರಲ್ಲಿ ಪಯಣಿಸುತ್ತಿದ್ದ ಮುಸ್ಲಿಮೇತರ ಅಂದರೆ ಕ್ರಿಶ್ಚಿಯನ್ನರೇ ಅಧಿಕವಾಗಿದ್ದ ಪ್ರಯಾಣಿಕರನ್ನೆಲ್ಲ ಬಸ್ಸಿನಲ್ಲೇ ಕೂಡಿಟ್ಟು ಬೆಂಕಿ ಹಚ್ಚಿತು. ಮೂವತ್ತಕ್ಕೂ ಅಧಿಕ ಮಂದಿ ಬಸ್ಸಿನ ಸಮೇತ ಸುಟ್ಟು ಕರಕಲಾದರು. ಅಲ್ ಶಬಾಬ್ ಹೇಳಿಕೇಳಿ ಮುಸ್ಲಿಂ ಉಗ್ರ ಸಂಘಟನೆ ಮತ್ತು ಅದರ ಉದ್ದೇಶ ಇಸ್ಲಾಮಿಕ್ ರಾಜ್ಯ ಸ್ಥಾಪನೆ!

ಕೀನ್ಯಾದ ಸರ್ಕಾರದ ವಿರುದ್ಧವೋ ಸೈನ್ಯದ ವಿರುದ್ಧವೋ ಅಲ್‌ಶಬಾಬ್ ಸಂಘಟನೆಗೆ ಹಗೆಯಿದ್ದರೆ ಅದಕ್ಕೆ ನಿಷ್ಪಾಪಿ ಬಸ್ ಪ್ರಯಾಣಿಕರು ತಾನೇ ಹೇಗೆ ಹೊಣೆಗಾರರು? ಸರ್ಕಾರದ ಮೇಲಿನ ಸಿಟ್ಟಿಗೆ ಅದಕ್ಕೆ ಯಾವ ರೀತಿಯಲ್ಲೂ ಕಾರಣರಲ್ಲದ ಮುಗ್ಧ ಪ್ರಯಾಣಿಕರನ್ನು ಕೊಲ್ಲುವುದು ಯಾವ ನ್ಯಾಯ? ಮುಸ್ಲಿಮರಲ್ಲ ಎಂಬ ಒಂದೇ ಕಾರಣಕ್ಕೆ ಅವರನ್ನು ಕೊಲ್ಲುವುದು ಇಸ್ಲಾಮಿನ ಯಾವ ನಿಯಮ ಯಾವ ಸಿದ್ಧಾಂತ?



ಪೇಶಾವರ್ ಶಾಲೆಯ ರಕ್ತದೋಕುಳಿ

ಮೊನ್ನೆಯಷ್ಟೇ ಆಸ್ಟ್ರೇಲಿಯದ ಸಿಡ್ನಿಯಲ್ಲಿ ಲಿಂಡ್ ಚಾಕಲೇಟ್ ಕೆಫೆಯ ಒತ್ತೆಯಾಳು ದುರಂತಕ್ಕೂ ಬಳಕೆಯಾಗಿದ್ದು ಕುರಾನ್ ಮತ್ತು ಇಸ್ಲಾಂ. ಮ್ಯಾನ್ ಹರೂನ್ ಮೋನಿಸ್ ಎಂಬ ಇರಾನಿಯೋರ್ವ ತಾನು ಐಸಿಸ್ ಬೆಂಬಲಿಗನೆಂದೂ ತನಗೆ ಐಸಿಸ್‌ನ ಧ್ವಜವನ್ನು ಕೊಡಬೇಕು ಮತ್ತು ಆಸ್ಟ್ರೇಲಿಯಾದ ಪ್ರಧಾನಿ ಟೋನಿ ಅಬಾಟ್ ಜೊತೆ ತನಗೆ ಮಾತುಕತೆಗೆ ಅವಕಾಶ ಕಲ್ಪಿಸಬೇಕು ... ಬೇಡಿಕೆಯಿಟ್ಟು ಮೂವತ್ತಕ್ಕೂ ಅಧಿಕ ಮಂದಿಯ... ಒತ್ತೆಯಾಗಿಸಿಕೊಂಡ. ಸ್ಟೆನ್‌ಗನ್ ಇಟ್ಟುಕೊಂಡೇ ಕೆ... ನುಗ್ಗಿದ ಹರೋನ್ ಮೋನಿಸ್‌ನ ಹುಚ್ಚಾಟಕ್ಕೆ ಕೆಫೆಗೆ ಬಂ... ಇಬ್ಬರು ಅಮಾಯಕರು ಹೆಣವಾದರು. ಕೊನೆಗೆ ಹರೋ... ಕೂಡ ಕಮಾಂಡೋಗಳ ಗುಂಡಿಗೆ ಬಲಿಯಾದ.

ಲಿಂಡ್ ಕೆಫೆಯಲ್ಲಿ ರಕ್ತ

ಆದರೆ ಹರೋನ್ ಮೋನಿಸ್‌ನ ಹುಚ್ಚಾಟವಿ... ಸಿರಿಯಾ ಮತ್ತು ಇರಾಕ್‌ನಲ್ಲಿ ರಕ್ತದೋಕುಳಿಗೆ ಕಾರಣ... ಐಸಿಸ್ ಉಗ್ರರು ಯಾವ ಕಪ್ಪು ಬಟ್ಟೆಯ ಮೇಲೆ ಕುರಾ... ಶ್ಲೋಕವಾದ 'ಲಾ ಇಲಾಹಾ ಇಲ್ಲಲ್ಲಾ ಮಹಮ್ಮದ್ ಉ... ರಸೂಲಲ್ಲಾ' ಅಂದರೆ ಅಲ್ಲಾಹನ ಹೊರತಾಗಿ ಬ... ದೇವರಿಲ್ಲ ಮಹಮ್ಮದರನ್ನು ಬಿಟ್ಟರೆ ಬೇರೆ ಪ್ರವಾದಿಗ... ಎಂಬ ಘೋಷವಾಕ್ಯವನ್ನು ಕಪ್ಪು ಬಟ್ಟೆಯಲ್ಲಿ ಬ... ಪ್ರದರ್ಶಿಸುವುದೊಂದೇ ಆತನ ಗುರಿಯಾಗಿತ್ತು.

ಅಷ್ಟಕ್ಕೂ ಈ ಹರೋನ್ ಮೋನಿಸ್ ಯಾರೆ... ಕೆದಕ ಹೊರಟ ಆಸ್ಟ್ರೇಲಿಯಾ ಪೊಲೀಸರಿಗೆ ... ಮಾಹಿತಿಗಳೇ ವಿಚಿತ್ರವಾಗಿತ್ತು, ಹರೋನ್ ಇರಾನಿನಿ... ಪರಾರಿಯಾಗಿದ್ದೇ ರೇಪ್‌ಕೇಸಿನ ಮೇಲೆ. ಮಹಿಳೆಯೊ... ಅತ್ಯಾಚಾರ ಪ್ರಕರಣದಲ್ಲಿ ಆರೋಪಿಯಾಗುವುದಕ್ಕೂ ಮ... ಹರೋನ್ ತನ್ನ ಮಾಜಿ ಪತ್ನಿಯನ್ನು ಸುಪಾರಿ ಕೊ... ಕೊಲ್ಲಿಸಿದ್ದ. ಶಿಕ್ಷೆಯಿಂದ ಬಚಾವಾಗಲು ಆಸ್ಟ್ರೇಲಿಯಕ್ಕೆ ... ಮುಚ್ಚಿ ಬಂದಿದ್ದ ಹರೋನ್ ಆಸ್ಟ್ರೇಲಿಯಾದ ಯೊ... ಕುಟುಂಬದ ಸದಸ್ಯರಿಗೆ ಬೆದರಿಕೆಯ ಮೇಲ್‌ಗ... ರವಾನಿಸುತ್ತಿದ್ದ. ಅದು ಅಫಘಾನಿಸ್ತಾನದ ಯುದ್ಧ... ಭಾಗವಹಿಸಿದರೆಂಬ ತಪ್ಪಿಗೆ ಆಸ್ಟ್ರೇಲಿಯದ ಹತ ಯೋ... ಸಂಬಂಧಿಗಳನ್ನು ಗುರಿಯಾಗಿಸಿಕೊಂಡು.

ಮಹಿಳೆಯೊಬ್ಬಳ ಮೇಲೆ ಅತ್ಯಾಚಾರವೆಸಗಿ ತನ್ನ ಪ... ಪತ್ನಿಯನ್ನೇ ಕೊಲ್ಲಿಸಿದವನಿಗೆ ಐಸಿಸ್ ಉಗ್ರರೇ ಆದ...

ಮುಸ್ಲಿಮರೆಲ್ಲರೂ ಭಯೋತ್ಪಾದಕರಲ್ಲದೇ ಹೋದ... ಭಯೋತ್ಪಾದಕರೆಲ್ಲರೂ ಮುಸ್ಲಿಮರೇ ಎಂಬ ವ್ಯಂಗ್ಯೋ... ಹರೋನ್, ಬೋಕೋ ಹರಾಮ್, ತಾಲಿಬಾನ್‌ಗಳು ... ಸಮರ್ಥನೆಗಳಷ್ಟೆ. ಇವತ್ತು ವಿಶ್ವದ ಕೆಲ ಬೆರಳೆಣಿಕೆಯ... ಮುಸ್ಲಿಂ ರಾಷ್ಟ್ರಗಳನ್ನು ಬಿಟ್ಟರೆ ಬಹುತೇಕ ಮುಸ್ಲಿಂ ರಾಷ್ಟ್ರ... ಈ ಥರದ ಜಿಹಾದಿ ಪಡೆಗಳು ಹುಟ್ಟಿಕೊಂ... ಪಾಕಿಸ್ತಾನದಲ್ಲಿ ತೆಹ್ರಿಕ್-ಇ-ತಾಲಿಬಾನ್, ಅಫಘಾನಿಸ್ತಾನ... ಮುಲ್ಲಾ ಓಮರ್‌ನ ತಾಲಿಬಾನ್ ಮತ್ತು ಅಲ್‌ಕೈ... ಈಜಿಪ್ಟ್‌ನಲ್ಲಿ ಮುಸ್ಲಿಂ ಬ್ರದರ್‌ಹುಡ್, ಪ್ಯಾಲಸ್ತೀನಿ... ಹಮಾಸ್, ನೈಜೀರಿಯಾದ ಬೋಕೋ ಹರಾಮ್, ಕೀ... ಅಲ್‌ಶಬಾಬ್, ಫಿಲಿಫೀನ್ಸ್‌ನಲ್ಲಿ ಅಬುಸಯ್ಯ... ಗಾಜಾಪಟ್ಟಿಯ ಅಲ್‌ಅಕ್ಸಾ ಆತ್ಮಹತ್ಯಾದಳ, ಇರಾ... ಅನ್ಸರ್-ಅಲ್-ಇಸ್ಲಾಮ್, ಅಲ್ಜೀರಿಯಾದ ಜಿ... ಸೋಮಾಲಿಯಾದ ಅಲ್ ಶಬಾಬ್, ಚೀನಾದಲ್ಲಿ T... ಮತ್ತು ಕ್ಸಿಂಜಿಯಾಂಗ್ ಉಗ್ರರು, ಟರ್ಕಿಯಲ್ಲಿ ಗ್ರೇ... ಈಸ್ಟರ್ನ್ ಇಸ್ಲಾಮಿಕ್ ರೈಡರ್ಸ್ (IBDA-... ಲೆಬನಾನ್‌ನ ಹೆಜ್ಬುಲ್ಲಾ, ಸಿರಿಯಾ ಮತ್ತು ಇರಾಕ... ಐಸಿಸ್, ಕಾಶ್ಮೀರದಲ್ಲಿ ಜೈಷ್ ಎ ಮೊಹ... ಇಂಡೋನೇಷಿಯಾದಲ್ಲಿ ಜೇಮಾಹ್ ಇಸ್ಲಾಮಿ... ಫಿಲಿಫೈನ್ಸ್‌ನ ಮೋಡೋ ಇಸ್ಲಾಮಿಕ್ ಲಿಬರೇಷನ್ ಫ್ರ... ಮೊರಾಕ್ಕೋದಲ್ಲಿ ಮೊರಾಕ್ಕನ್ ಇಸ್ಲಾಮಿಕ್ ಕಂಬ್ಯಾಟ... ಗ್ರೂಪ್ ಮತ್ತು ಭಾರತದಲ್ಲಿ ಇಂಡಿಯನ್ ಮುಜಾಹಿದ್...

ಉದ್ದಕ್ಕೂ ನರಮೇಧ

63 ಮಂದಿಯನ್ನು ಕೊಂದು 120 ಮಂದಿ... ಆಸ್ಪತ್ರೆಯಲ್ಲಿ ನರಳುವಂತೆ ಮಾಡಿದ 1983ರ ಏ... 18ರ ಅಮೆರಿಕದ ಎಂಬೆಸ್ಸಿ ಬಾಂಬಿಂಗ್‌ನಿಂದ ಶುರು... 305 ಮಂದಿಯನ್ನು ಕೊಂದು 75 ಅಮಾಯಕ... ಗಾಯಗೊಳಿಸಿದ 1983ರ ಅಕ್ಟೋಬರ್‌ನ ಬೈರ...



ಸಿಡ್ನಿಯ ಲಿಂಡ್ ಕೇಫೆ ರಕ್ತಪಾತ

ಅಮೆರಿಕದ ಯುದ್ಧ ನೀತಿ ಮತ್ತು ಮುಸ್ಲಿಂ ಬುದ್ಧಿಜೀವಿಗಳ ಆತ್ಮವಂಚನೆ


ವಿಶ್ವದ ವಿವಿಧ ಮುಸ್ಲಿಂ ರಾಷ್ಟ್ರಗಳಲ್ಲಿ ತಲೆ ಎತ್ತಿದ ಜಿಹಾದಿ ಬಂಡಾಯ ಮತ್ತು ಅದರ ಕ್ರೌರ್ಯದ ಬಗ್ಗೆ ನಮ್ಮ ಮುಸ್ಲಿಂ ಬುದ್ಧಿಜೀವಿಗಳು ನೀಡುವ ಸಮರ್ಥನೆಯೆಂದರೆ ಅದು ಅಮೆರಿಕನ್ ಸಾಮ್ರಾಜ್ಯ ವಾದ.

ಅಮೆರಿಕದ ಯುದ್ಧನೀತಿ ಮತ್ತು ಮುಸ್ಲಿಂ ರಾಷ್ಟ್ರಗಳ ಕೈಗೊಂಬೆ ಸರ್ಕಾರಗಳ ದ್ರೋಹದ ಫಲವಾಗಿಯೇ ಮುಸ್ಲಿಂ ಯುವ ಸಮೂಹ ದಂಗೆಯೆದ್ದಿದೆ ಎಂಬುದು ಭಾಗಶಃ ನಿಜವಿರಬಹುದು. ಆದರೆ ಕಾರಣ ಅದು ಮಾತ್ರವೇ?


ಅಮೆರಿಕದ ವಿರುದ್ಧದ ಆಕ್ರೋಶಕ್ಕೋ, ಅದರ ಕೈಗೊಂಬೆ ಆಡಳಿತಗಾರನೊಬ್ಬನ ದುರಾಡಳಿತಕ್ಕೇ ಇದ್ಯಾವುದಕ್ಕೂ ಸಂಬಂಧವೇ ಇಲ್ಲದ ಮುಗ್ಧ-ಬಸ್ ಪ್ರಯಾಣಿಕರನ್ನು ಬಸ್ಸಿನ ಸಮೇತ ಬೆಂಕಿ ಹಚ್ಚಿ ಕೊಲ್ಲುವುದಕ್ಕೂ ಏನು ಸಂಬಂಧ? ಯಾರೋ ಸೈನಿಕರು ತಮ್ಮವರನ್ನು ಕೊಂದರೆಂದು ಅದಕ್ಕೆ ಸಂಬಂಧವೇ ಇಲ್ಲದ ಹಾಲುಗಲ್ಲದ ಹಸುಳೆಗಳನ್ನು ಕೊಲ್ಲುವುದು ಯಾವ ನ್ಯಾಯ? ಯಾರದೋ ಮನೆ ಹೆಣ್ಣು ಮಕ್ಕಳನ್ನು ಇನ್ಯಾರೋ ಹೊತ್ತೊಯ್ದು ಅವರನ್ನು ಮತಾಂತರಿಸಿ ಮದುವೆಯಾಗುತ್ತೇವೆ ಎಂದರೆ ಅದು ಅಮೆರಿಕಕ್ಕೆ ಕೊಟ್ಟ ಪೆಟ್ಟಾಗುತ್ತಾ ಅಥವಾ ಅಮೆರಿಕದ ಯುದ್ಧ ದಾಹಕ್ಕೆ ಸಮರ್ಥನೆ ಕಲ್ಪಿಸುತ್ತಾ?

ಆತ್ಮವಂಚನೆಗೂ ಮಿತಿಯಿರಬೇಕಲ್ಲವೇ? ಧರ್ಮದ ಅಫೀಮು ಕುಡಿದು ತಾವೇ ರಾಕ್ಷಸರಾಗಬಾರದಲ್ಲವೇ? ಅಮೆರಿಕವನ್ನು ಕ್ಯೂಬ, ರಷ್ಯಾ, ಚೈನಾ, ಕೊರಿಯಾಗಳಂಥ ದೇಶಗಳು ನಾಗರಿಕವಾಗೇ ಎದುರಿಸುತ್ತಿರುವಾಗ, ವಿಯೆಟ್ನಾಮ್‌ನಂಥ ಪಿಳ್ಳೆ ರಾಷ್ಟ್ರವೊಂದು ಬಲಾಢ್ಯ ಅಮೆರಿಕನ್ ಪಡೆಯನ್ನು ನೀರುಗಾಯಿ ಹೊಡೆದಿರುವಾಗ ಯಾರೋ ಶಾಲಾ ಮಕ್ಕಳನ್ನು ಕೊಂದು ಅದಕ್ಕೆ ಜಾಗತಿಕ ರಾಜಕಾರಣದ ನೆಪ ಹೇಳುವುದು, ಹೆಣ್ಣು ಮಕ್ಕಳನ್ನು ಅಪಹರಿಸಿ ಅದಕ್ಕೂ ಐರೋಪ್ಯ ನೀತಿಯ ಕಣೆ ಹೇಳುವುದು ಮುಸ್ಲಿಂ ಬುದ್ಧಿಜೀವಿಗಳ ಆತ್ಮವಂಚನೆಯಲ್ಲದೆ ಮತ್ತೇನು?

ಬಾಂಬಿಂಗ್ ಮೊದಲಾಗಿ ಮೊನ್ನೆ ಪೇಶಾವರದ ಶಾಲೆಯ ನರಮೇಧದವರೆಗೆ ಮುಸ್ಲಿಂ ಉಗ್ರರು ಆಡಿಕೊಂಡೇ ಬಂದಿದ್ದಾರೆ. 2011ರ ಜುಲೈ ಯ ಕರಾಚಿಯ ಎರಡು ಮಸೀದಿಗಳ ಮೇಲೆ ತ್ಯ ದಾಳಿ ನಡೆಸಿ 100 ಮಂದಿಯನ್ನು ಕೊಂದ ನದ ತೆಹ್ರಿಕ್ ಇ ತಾಲಿಬಾನ್ ಉಗ್ರರ ಕೃತ್ಯ ರ ಜನವರಿ 1ರಂದು ಪಾಕಿಸ್ತಾನದಲ್ಲಿ ವಾಲಿಬಾಲ್ ವಳಿಗೆ ಕಾರ್ ಬಾಂಬ್ ನುಗ್ಗಿಸಿ 100 ಮಂದಿಯನ್ನು ರಕ್ತದಾಹ, 2009ರ ಅಕ್ಟೋಬರ್ ಬಾಗ್ದಾದ್ ಬಾಂಬಿಂಗ್, ಮುಂಬಯಿ ಮೇಲಿನ 2008ರ 2006ರ ಮುಂಬಯಿ ರೈಲ್ವೇ ಸ್ಟೇಷನ್ನಿನ ಮೇಲಿನ ಬಲಿಯಾದ 208 ಮಂದಿ, ಗಾಯಗೊಂಡ 700 ಇಂಡೋನೇಷಿಯಾದ ಬಾಲಿ ನೈಟ್‌ಕ್ಲಬ್ ದಾಳಿಗೆ ಗಿದ 202 ಮಂದಿ ಮತ್ತು 2001ರ ಸೆಪ್ಟೆಂಬರ್







ಸು 6000 ಜನರನ್ನು ಗಾಯಗೊಳಿಸಿ 2977 ಯನ್ನು ಬಲಿ ತೆಗೆದುಕೊಂಡ ಅಮೆರಿಕದ ಟ್ರೇಡ್ ಸೆಂಟರ್ ಮೇಲಿನ ದಾಳಿಗಳ ಲೆಕ್ಕ ಹಾಕುತ್ತಾ ದೆ ಬಲಿಯಾದವರ ಸಂಖ್ಯೆ ಐವತ್ತು ಸಾವಿರವನ್ನು ಟ್ಟಿದೆ.

ಇರಾಕ್ ಮತ್ತು ಸಿರಿಯಾದ ಬಹುಭಾಗವನ್ನೆಲ್ಲ ಕೊಂಡು ಪ್ರತ್ಯೇಕ ಇಸ್ಲಾಮಿಕ್ ರಾಷ್ಟ್ರ ಅಥವಾ ಘೋಷಿತ ಖಲೀಫೊತ್ತಿಗೆ (caliphate) ಯ ತ್ತ ಐಸಿಸ್ ಉಗ್ರರ ರಕ್ತಪಾತವನ್ನು ಬದಿಗಿಟ್ಟು ಕಿದರೆ ಕಾಣಸಿಗುವ ಬಲಿಪಶುಗಳ ಸಂಖ್ಯೆಯಿದು.

ಯಾದ ಅಂತರ್ಯುದ್ಧಕ್ಕೂ ಮುನ್ನ ವಿಶ್ವದ ಸಕಲ ಮೂಲಭೂತವಾದಿಗಳೆಲ್ಲರ ಕಣ್ಮಣಿಯಂತಿದ್ದದ್ದು ನ ಅಲ್‌ಕೈದಾ. ಜೊತೆಗೆ ಅಫಘಾನಿಸ್ತಾನದ ನ್ ಕೂಡ ಮುಸ್ಲಿಂ ಮೂಲಭೂತವಾದ ವಂತಿತ್ತು. ಆದರೆ ಸಂಘಟನೆ, ಕ್ರೌರ್ಯ ಮತ್ತು ದಲ್ಲಿ ಐಸಿಸ್ ಇವೆರಡನ್ನೂ ಮೀರಿಸಿದ ವೇಗ ತು. ಸಾಲುಸಾಲು ಸೈನಿಕರ ಹತ್ಯಾಕಾಂಡ, ವಿದೇಶಿ ರ ಶಿರಚ್ಛೇದದ ವೀಡಿಯೋ ಚಿತ್ರೀಕರಣ, ತಮ್ಮದೇ ಪಂಥದವರನ್ನು ಸಾಲಾಗಿ ನಿಲ್ಲಿಸಿ ಗುಂಡಿಕ್ಕುವ ಪದ ದೃಶ್ಯಾವಳಿಗಳನ್ನು ನಿರ್ಲಜ್ಜವಾಗಿ ಧರ್ಮದ ಐಸಿಸ್ ಪ್ರಸಾರ ಮಾಡುತ್ತಲೇ ಇದೆ.

ಖಲೀಫೊತ್ತಿಗೆ

ಇಸ್ಲಾಮಿಕ್ ಸಾಮ್ರಾಜ್ಯವನ್ನು ಸ್ಥಾಪಿಸುತ್ತೇನೆಂದೋ, ಶ್ ಆಳ್ವಿಕೆ ಅಥವಾ ಖಲೀಫರ ಧರ್ಮಾಳ್ವಿಕೆಯನ್ನೋ ವ ಐಸಿಸ್ ಉಗ್ರರ ಕ್ರೌರ್ಯದ ವಿರುದ್ಧ ಖುದ್ದು ಅಲ್‌ಕೈದಾ ಸಂಘಟನೆಯೇ ಖಂಡನಾ ಹೇಳಿಕೆ ನೀಡಿತು. ಮೊನ್ನೆಯಷ್ಟೇ ಬೆಂಗಳೂರು ಪೊಲೀಸರಿಗೆ ಸೆರೆ ಸಿಕ್ಕ ಮೆಹದಿ ಮಸ್ರೂರ್ ಬಿಸ್ವಾಸ್ ಎಂಬ ಟೆಕ್ಕಿ ತಾನು ಐಸಿಸ್‌ನ ಪಕ್ಕಾ ಅಭಿಮಾನಿಯೆಂದು ಯಾವುದೇ ಅಳುಕಿಲ್ಲದೆ ಘೋಷಿಸಿಕೊಂಡಿದ್ದು, ಆಸ್ಟ್ರೇಲಿಯಾದ ಕೆಫೆಗೆ ನುಗ್ಗಿ ಅಲ್ಲಿನ ಗ್ರಾಹಕರನ್ನು ಒತ್ತೆಯಾಗಿಸಿಕೊಂಡ ಹರೋನ್ ಮೋನಿಸ್ ಬೇಡಿಕೆಯಿಟ್ಟದ್ದು, ಬ್ರಿಟನ್, ಅಮೆರಿಕದ ವಿದ್ಯಾವಂತ ಯುವಕರನೇಕರು ಐಸಿಸ್‌ನ 'ಸಾಧನೆ'ಗೆ ಮಾರುಹೋಗಿದ್ದು ಇತ್ಯಾದಿಗಳೆಲ್ಲ ಮುಸ್ಲಿಂ ಮೂಲಭೂತವಾದಿ ಮನಸ್ಥಿತಿಯುಳ್ಳವರಲ್ಲಿ ಅದರ ಜನಪ್ರಿಯತೆಯನ್ನು ಸಾರಿ ಹೇಳುವಂತಿತ್ತು.

ಮಧ್ಯ ಪ್ರಾಚ್ಯ ಸೇರಿದಂತೆ ವಿಶ್ವದ ಬಹುತೇಕ ಮುಸ್ಲಿಂ ರಾಷ್ಟ್ರಗಳ ಯುವಕರ ಪಾಲಿಗೆ ಸದ್ಯ ಐಸಿಸ್ ಕ್ರೌರ್ಯಗಳೇ ಆದರ್ಶವಾಗಿ ಕಾಣಿಸಬಹುದು ಅಥವಾ ಕ್ರಿಶ್ಚಿಯನ್ನರ ಪೋಪ್‌ಗೆ ಪರ್ಯಾಯವಾಗಿ ಖಲೀಫರೊಬ್ಬರನ್ನು ಸೃಷ್ಟಿಸುವ ಉದ್ದೇಶ ಆಕರ್ಷಕವಾಗಿರಲೂ ಬಹುದು. ಇಲ್ಲಿ ಕಾಡುವ ಪ್ರಶ್ನೆಯೆಂದರೆ ಕ್ರೌರ್ಯ, ರಕ್ತಪಾತ, ಹತ್ಯಾಕಾಂಡದ ಹೊರತಾಗಿ ಯೂ ಖಲಿಫೇಟ್ ಅಥವಾ ಶರೀಯತ್ (ಇಸ್ಲಾಮಿಕ್ ಕಾನೂನು ವ್ಯವಸ್ಥೆ) ಸಾಧ್ಯವಿಲ್ಲವೆ? ಧಾರ್ಮಿಕ ಮೂಲಭೂತ ವಾದವೆಂಬುದು ಇವತ್ತು ವಿಶ್ವದ ಬಹುತೇಕ ಮುಸ್ಲಿಂ ರಾಷ್ಟ್ರಗಳ ಪಾಲಿಗೆ ಕಂಟಕವಾಗಿಬಿಟ್ಟಿದೆ. ಅಶಾಂತಿ, ಭಯೋತ್ಪಾದನೆ ಅಂತರ್ಯುದ್ಧ ರಕ್ತಪಾತಗಳಲ್ಲೇ ಬಹುತೇಕ ಮುಸ್ಲಿಂ ರಾಷ್ಟ್ರಗಳು ಹೈರಾಣಾಗುತ್ತಿವೆ. ಮುಸ್ಲಿಂ ಮೂಲಭೂತವಾದಕ್ಕೆ ಪ್ರತಿಕ್ರಿಯೆಯಾಗಿ ಕ್ರಿಶ್ಚಿಯನ್, ಹಿಂದೂ, ಬೌದ್ಧರ ಉಗ್ರವಾದಿ, ಮೂಲಭೂತವಾದಿ ಗುಂಪುಗಳು ತಲೆ ಎತ್ತುತ್ತಿವೆ. ಒಂದು ಧರ್ಮವಾಗಿ ಬಹುಶಃ ಇಸ್ಲಾಂ ಕಂಡಷ್ಟು ರಕ್ತಪಾತವನ್ನು ಬೇರಾವ ಧರ್ಮವೂ ಕಂಡಿರಲಿಕ್ಕಿಲ್ಲ. ಇಸ್ಲಾಮಿನಲ್ಲಿ ಅಂಥಾದ್ದೇನಿದೆ?

ನಮ್ಮದೇ ಭಾಷೆಯಲ್ಲೇ ಹೇಳಬೇಕೆಂದರೆ ಸಾಬರು, ತುರುಕರು, ಮುಸಲ್ಮಾನರು ಇತ್ಯಾದಿಯಾಗಿ ಕರೆಯಲ್ಪಡುವ ಮುಸ್ಲಿಮರ ನಂಬಿಕೆ, ದೇವರು, ಜೀವನ ಶೈಲಿಗಳ ಕುರಿತಂತೆ ನಮ್ಮಲ್ಲಿ ಚಿತ್ರವಿಚಿತ್ರ ಕಲ್ಪನೆಗಳಿವೆ. ಇಸ್ಲಾಂ ದೃಷ್ಟಿಕೋನದಲ್ಲಿ ಮಹಮ್ಮದ್ ಖಾಸಿಂ, ಬಾಬರ್, ಘಜನಿ ಮಹ್ಮದ್ ಇತ್ಯಾದಿಗಳು ಧರ್ಮ ವಿಸ್ತಾರಕರಂತೆ ಕಂಡರೆ ಇಲ್ಲಿನ ಇತಿಹಾಸಕಾರರ ಕಣ್ಣಿಗೆ ಕ್ರೂರಿಗಳು, ರಕ್ತಪಿಪಾಸುಗಳಾಗಿ ಕಂಡಿದ್ದಾರೆ. ಮುಸ್ಲಿಂ ದಾಳಿಕೋರರ ಕ್ರೌರ್ಯಕ್ಕೂ ಒಂದು ಧರ್ಮವಾಗಿ ಇಸ್ಲಾಮಿಗೆ ಇರುವ ಸಂಬಂಧದ ವಿಶ್ಲೇಷಣೆಯನ್ನು ಮಾಡುವವರ್‍ಯಾರು?

ಇಸ್ಲಾಮಿನ ಹೊಗೆಯೆಲ್ಲಿ?

ಜಿಹಾದ್, ಕಾಫಿರ್, ಮತಾಂತರ, ಬುರ್ಖಾ, ಗಡ್ಡ, ಖಡ್ಗ, ಮಸೀದಿ ಇತ್ಯಾದಿ ಸಂಕೇತಗಳೇ ಇವತ್ತು ಮುಸ್ಲಿಮರ ಬಗೆಗಿನ ಕಲ್ಪನೆ ಮತ್ತು ಅಭಿಪ್ರಾಯವನ್ನು ನಿರ್ಧರಿಸುತ್ತಿವೆ. ಇಸ್ಲಾಂ ಸ್ಥಾಪಕ ಮಹಮ್ಮದ್ (ಸ) ಪೈಗಂಬರರ ಕಾಲದ ಪರಿಸ್ಥಿತಿ ನಾಗರಿಕತೆಗೂ ಈಗಿನ ನಾಗರಿಕ ಸ್ಥಿತಿಗತಿಗೂ ಅಜಗಜಾಂತರ ವ್ಯತ್ಯಾಸಗಳಿರುವುದನ್ನು ಅರ್ಥಮಾಡಿಕೊಳ್ಳುವವರಾದರೂ ಯಾರು? ಸೈನಿಕರ ಮೇಲಿನ ಪ್ರತೀಕಾರಕ್ಕೆ ಮುಗ್ಧ ಹಸುಳೆಗಳನ್ನು ಕೊಂದು ಹಾಕಿದ ತಾಲಿಬಾನ್‌ಗಳ ಪೈಶಾಚಿಕತೆಗೆ ಪ್ರತ್ಯಕ್ಷವೋ ಪರೋಕ್ಷವೋ ಮುಸಲ್ಮಾನರು ಉತ್ತರಗಳನ್ನು ಕಂಡುಕೊಳ್ಳಲೇಬೇಕು. ಪಾಶ್ಚಿಮಾತ್ಯ ಶಿಕ್ಷಣವನ್ನು ವಿರೋಧಿಸುವುದಕ್ಕೂ ಇಸ್ಲಾಂ ಆಳ್ವಿಕೆ ಸ್ಥಾಪಿಸುವುದಕ್ಕೂ ನೈಜೀರಿಯಾದ ನಿಷ್ಪಾಪಿ ಹೆಣ್ಣುಮಕ್ಕಳನ್ನು ಹೊತ್ತೊಯ್ಯುವುದಕ್ಕೂ ಸೂತ್ರ ಸಂಬಂಧವಿಲ್ಲ. ಆದರಿದು ನಡೆಯುವುದು ಇಸ್ಲಾಂನ ಹೆಸರಲ್ಲಿ!

ಧರ್ಮಕ್ಕಾಗಿ ಪ್ರಾಣ ಕೊಟ್ಟರೆ ಸ್ವರ್ಗ ಪ್ರಾಪ್ತಿ, ಸ್ವರ್ಗದಲ್ಲಿ ಅಸಂಖ್ಯಾತ ದೇವಕನ್ನಿಕೆಯರು ಪ್ರಾಣತೆತ್ತವನ ಸೇವೆಗೈಯುತ್ತಾರೆ, ಸ್ವರ್ಗ-ನರಕಗಳಿರುವುದೇ ಸತ್ಯ ಕಾಫೀರನನ್ನು ಕೊಂದರೆ ಸ್ವರ್ಗ ಗ್ಯಾರಂಟಿ, ಧರ್ಮಕ್ಕಾಗಿ ಯುದ್ಧ ಮಾಡಲೇಬೇಕು ಇತ್ಯಾದಿ ಮೌಢ್ಯಗಳನ್ನು ತಲೆತುಂಬಿಸಿಕೊಂಡ ಮುಸ್ಲಿಂ ಮೂಲಭೂತವಾದಿಗಳಿಗೆ ವಿವೇಕ ಹೇಳುವವರ್‍ಯಾರು?

ಮುಸಲ್ಮಾನರ ದುರಂತವೋ ಶಾಪವೋ ಗೊತ್ತಿಲ್ಲ, ಮುನ್ನೂರು ಮಂದಿ ಶಾಲಾಬಾಲಕಿಯರನ್ನು ಹೊತ್ತೊಯ್ದು ತನ್ನ ಸಹಚರರ ಕಾಮತೃಷೆಗೆ ಬಳಸುವ ಬೋಕೋ ಹರಾಮ್‌ನ ಪೈಶಾಚಿಕತೆಯನ್ನು ನಾಗರಿಕ ಸಮಾಜ ಇಸ್ಲಾಂನ ತಲೆಗೆ ಕಟ್ಟುತ್ತದೆ. ಕರಾಚಿಯ ಮಾರುಕಟ್ಟೆಗೆ ಬಾಂಬ್ ಇಟ್ಟು ಮುಗ್ಧರನ್ನು ಕೊಂದ ತಾಲಿಬಾನ್ ಕ್ರೌರ್ಯದ ಹೊಣೆಯನ್ನು ಮೀಡಿಯಾಗಳು ಇಸ್ಲಾಮಿನ ಹೆಗಲಿಗೇ ಹೊರಿಸುತ್ತದೆ. ಶಾಲೆಯ ಮುಗ್ಧ ಮಕ್ಕಳನ್ನು ಸೈತಾನನೇ ನಾಚುವಂತೆ ಕೊಂದು ಹಾಕಿ ಅದಕ್ಕೆ ಇಸ್ಲಾಮಿನ ಸಮರ್ಥನೆ ಕೊಡಲಾಗುತ್ತದೆ.

ಯಾರೋ ತಲೆಕೆಟ್ಟವನೊಬ್ಬ ಮಾಡಿದ ಅನಾಹುತವಿಂದು ಇಸ್ಲಾಮನ್ನು ಮತ್ತಷ್ಟು ಕುಖ್ಯಾತಿಗೆ ನೂಕುತ್ತದೆ. ಯಾರೋ ಮಕ್ಕಳನ್ನು ಕೊಂದು ಪೈಶಾಚಿಕತೆ ಮೆರೆದರೆ ಅದಕ್ಕೆ ಇಸ್ಲಾಂ ಹೊಣೆ ಹೊರಬೇಕಾಗುತ್ತದೆ. ಇನ್ನಾರೋ ದುರುಳನೊಬ್ಬ ಕೆಫೆಗೆ ನುಗ್ಗಿ ರಕ್ತ ಹರಿಸುವುದಕ್ಕೆ ಇಸ್ಲಾಂ ಗುರಾಣಿಯಾಗಬೇಕಾಗುತ್ತದೆ. ಮುಸ್ಲಿಂ ಮೂಲಭೂತವಾದವೆಂಬುದು ವಿಶ್ವಕ್ಕೇ ತಲೆನೋವಾಗಿ ಪರಿಣಮಿಸಿದೆ.

ನಾಗರಿಕ ಸಮಾಜದ ಕಣ್ಣಿಗೆ ಇಸ್ಲಾಂ ಹಿಂದೆಂದಿಗಿಂತಲೂ ಕುಖ್ಯಾತಿ ಗೀಡಾಗಿರುವ ಕಾಲವಿದು. ವ್ಯವಸ್ಥೆಯೊಂದರ ನಾಶಕ್ಕೆ ಅದರೊಳಗಡೆಯೇ ಬೀಜವೂ ಅಡಗಿರುತ್ತದೆಯಂತೆ. ಹಾಗೇ ಯಾರು ಖಡ್ಗದಿಂದ ಆರಂಭಿಸುತ್ತಾರೋ ಅವರ ಖಡ್ಗದಿಂದಲೇ ನಾಶವಾಗುತ್ತಾರಂತೆ. ಅದೀಗ ಪಾಕಿಸ್ತಾನದ ಮೂಲಕ ಸಾಬೀತಾಗುತ್ತಿದೆಯೇ? ಇರಾಕ್ ಮತ್ತು ಸಿರಿಯಾದ ಐಸಿಸ್ ಕ್ರೌರ್ಯ ಅದಕ್ಕೊಂದು ಸಾದ್ಯಂತ ಉದಾಹರಣೆಯೇ? ಹಿಂದೂ ಮೂಲಭೂತವಾದದ ವಿರುದ್ಧ ಹಿಂದೂಗಳೇ ದೊಡ್ಡ ಪ್ರತಿರೋಧ ತೋರುತ್ತಿರುವಾಗ ಕ್ರಿಶ್ಚಿಯನ್ ಸಾಮ್ರಾಜ್ಯವಾದದ ವಿರುದ್ಧ ಕ್ರಿಶ್ಚಿಯನ್ನರೇ ಬೀದಿಗಿಳಿದಿರುವಾಗ ಮುಸ್ಲಿಮರು ತಮ್ಮ ಧರ್ಮದ ದುರುಪಯೋಗದ ವಿರುದ್ಧ ದನಿಯೆತ್ತಬೇಕಿದೆ.

ಕಾಲವಿನ್ನೂ ಮಿಂಚಿಲ್ಲ. ಈಗ ಬದಲಾಗದೆ ಹೋದರೆ, ದನಿಯೆತ್ತದೆ ಹೋದರೆ ಮುಸ್ಲಿಮರಿಗೆ ಆಪತ್ತು ತಪ್ಪಿದ್ದಲ್ಲ.

● ರಾ. ಸೋಮನಾಥ್

ಕ್ರೈಸ್ತ ಅಳಿಯನ ಸಮೇತ ಮಗಳನ್ನೇ ಕೊಂದ ಮುಸ್ಲಿಂ ತಂದೆ...!


ಇಲ್ಲಿಗೆ ಐದು ವರ್ಷದ ಹಿಂದೆ ನಡೆದ ಘಟನೆಯಿದು. ತನ್ನ ಮಗಳು ಕ್ರಿಶ್ಚಿಯನ್ ಯುವಕನೊಬ್ಬನನ್ನು ಪ್ರೇಮಿಸಿ ಮದುವೆಯಾಗಿದ್ದನ್ನು ಸಹಿಸದ ಬೆಂಗಳೂರಿನ ಮುಸ್ಲಿಂ ತಂದೆಯೊಬ್ಬ ಅಳಿಯನನ್ನು ಪದೇಪದೇ ಇಸ್ಲಾಮಿಗೆ ಮತಾಂತರವಾಗುವಂತೆ ಒತ್ತಾಯಿಸುತ್ತಲೇ ಇದ್ದ. ಮುಸ್ಲಿಮನಾಗದೇ ಹೋದರೆ ಆತನನ್ನು ಬಿಟ್ಟು ಬರುವಂತೆ ಮಗಳಿಗೂ ತಾಕೀತು ಮಾಡಿದ್ದ.

ಅಳಿಯನಿಗೆ ಮಡದಿಗಿಂತ ಕ್ರೈಸ್ತತನವೇ ದೊಡ್ಡದಾಯಿತು. ಇನ್ನು ಮಗಳು ತಾನೇ ಮೆಚ್ಚಿದ ಗಂಡನನ್ನು ಹೇಗೆ ಬಿಟ್ಟಾಳು. ಹಾಗಂತ ತಂದೆ ಬಿಡಲಿಲ್ಲ. ಆತನಿಗೆ ಇಸ್ಲಾಮಿಗಿಂತ ಮಿಗಿಲ್ಯಾವುದಿಲ್ಲ. ಹೇಳಿಕೇಳಿ ರೋಸತ್ತ ತಂದೆ ಅದೊಂದು ದಿನ ತನ್ನ ಮಗನನ್ನು ಜೊತೆ ಹಾಕಿಕೊಂಡಿದ್ದೇ ಅಳಿಯನ ಮನೆಗೆ ನುಗ್ಗಿದ್ದೇ ತನ್ನ ಮಗಳನ್ನೂ ಸೇರಿಸಿ ಅಳಿಯನನ್ನು ಕೊಚ್ಚಿ ಹಾಕಿದ. ಅಣ್ಣ ಮತ್ತು ತಂದೆಯ ಕೈಯಾರೇ ಕೊಲೆಯಾದ ಮಡದಿ ತನ್ನ ಧರ್ಮಕ್ಕೆ ಗಂಟು ಬಿದ್ದು ಹೆಣವಾದ ಕ್ರೈಸ್ತ ಅಳಿಯರ ಹೆಣಗಳೆದುರು ಅವರ ಪುಟ್ಟ ಮಗು ಅನಾಥವಾಗಿ ರೋದಿಸುತ್ತಿದ್ದ ದೃಶ್ಯ ಎಂಥವರನ್ನೂ ಕರಗಿಸುವಂತಿತ್ತು.

ಧರ್ಮಕ್ಕಾಗಿ ತನ್ನ ಮಗಳು ಅಳಿಯನನ್ನು ಕತ್ತರಿಸಿ ಹಾಕಿದ ತಂದೆ, ತಂಗಿ ಎಂಬ ರವಷ್ಟೂ ಮಮಕಾರವಿಲ್ಲದ ಅಣ್ಣ, ತನ್ನನ್ನು ನಂಬಿ ಸರ್ವಸ್ವವನ್ನೂ ತೊರೆದು ಬಂದವಳಿಗಾಗಿ ಧರ್ಮ ಬಿಡದೇ ಹೆಣವಾದ ಗಂಡ; ಧರ್ಮದ ಪಿತ್ತ ನೆತ್ತಿಗೇರಿದರೆ ಹೇಗೆ ಮನುಷ್ಯತ್ವ ನಿರ್ನಾಮಗೊಳ್ಳುತ್ತದೆ ಮತ್ತು ಮನುಷ್ಯ ಹೇಗೆ ಸೈತಾನನಾಗುತ್ತಾನೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಇದು ಖಾಪ್ ಪಂಚಾಯತ್‌ಗಳು ಮಾಡಿಸಿರುವ ಕೊಲೆಗಳಿಗಿಂತಲೂ, ಜಾತಿ ಹೆಸರಲ್ಲಿ ನಡೆದಿರುವ ಕೊಲೆಗಳಿಗಿಂತಲೂ ಭಿನ್ನವೇನಲ್ಲ.

ಧಾರ್ಮಿಕ ಮೂಲಭೂತವಾದ ಏನೆಲ್ಲಾ ಅನಾಹುತಕ್ಕೆ ಕಾರಣವಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ.





ಸುಬ್ಬಯ್ಯ ಕರ್ನಾಟಕದ ಮಟ್ಟಿಗೆ ಒಂದು ಆಸಿ

ಚಿಕ್ಕಮಗಳೂರಿನಲ್ಲಿ ಕೋಮು ಸೌಹಾರ್ದ ವೇದಿಕೆಯ ಸಭೆಯೊಂದನ್ನು ಕೆಲವು ವರ್ಷಗಳ ಹಿಂದೆ ಆಯೋಜಿಸಲಾಗಿತ್ತು. ಆ ಸಭೆಯಲ್ಲಿ ಭಾಗವಹಿಸಲು ಎ.ಕೆ.ಸುಬ್ಬಯ್ಯ ತೆರಳಿದ್ದರು. ಅವರು ತಂಗಿದ್ದ ಲಾಡ್ಜ್‌ಗೆ ಅವರನ್ನು ಭೇಟಿಯಾಗಲು ಕೆಲವರು ಬಂದಿದ್ದರು. ಅವರುಗಳು ಮಾವೋವಾದಿ ಸಂಘಟನೆಗೆ ಸಂಬಂಧ ಪಟ್ಟವರು. ಅವರುಗಳು ಸುಬ್ಬಯ್ಯನವರೊಂದಿಗೆ ಸಂಘಟನೆಯ ಬಗ್ಗೆ ಸಂಘಟನೆ ಮಾಡುವಾಗ ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಿದ್ದರು. ಪೊಲೀಸ್ ಇಲಾಖೆ ತಮ್ಮನ್ನು ನಕ್ಸಲೀಯರು ಎಂದು ಹಣೆಪಟ್ಟಿ ಕಟ್ಟಿ ಅನವಶ್ಯಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಅವರು ಸುಬ್ಬಯ್ಯನವರಿಗೆ ಹೇಳತೊಡಗಿದರು.

ನಕ್ಸಲೀಯರು ಎಂಬ ಪದ ಕಿವಿಗೆ ಬೀಳುವುದನ್ನೇ ಕಾಯುತ್ತಿದ್ದಂತೆ ಸುಬ್ಬಯ್ಯನವರು ನಕ್ಸಲ್ ಚಳವಳಿಯ ಬಗ್ಗೆ ಮಾತನಾಡಲು ತೊಡಗಿದರು. ತನಗೆ ನಕ್ಸಲೀಯರ ಬಗ್ಗೆ ಅಪಾರವಾದ ಸಹಾನುಭೂತಿ ಇದೆ. ಆದರೆ ನಕ್ಸಲ್ ಹೋರಾಟದ ಮಾರ್ಗದ ಬಗ್ಗೆ ಆಕ್ಷೇಪವಿದೆ ಎಂದು ಹೇಳಿದರು. ನಕ್ಸಲ್ ಹೋರಾಟ ಮಾಡುತ್ತಿರುವವರು ತಮ್ಮ ಕುಟುಂಬದವರನ್ನೆಲ್ಲಾ ತೊರೆದು ಕಾಡಿನಲ್ಲಿ ಅಲೆಯುತ್ತಾರೆ. ಹೀಗೆ ಅವರು ಕುಟುಂಬದವರನ್ನೆಲ್ಲಾ ತೊರೆದು ಭೂಗತರಾಗಿ ಯಾರಿಗಾಗಿ ಮತ್ತು ಏತಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ ಎಂದು ಸುಬ್ಬಯ್ಯ ಅವರಲ್ಲಿ ಪ್ರಶ್ನಿಸಿದರು.

ಸುಬ್ಬಯ್ಯನವರ ಈ ಪ್ರಶ್ನೆ ಅವರಿಗೆ ರುಚಿಸಿರಲಿಲ್ಲ. ಸರಕಾರದ ನೀತಿಗಳು ಸರಿಯಾಗಿ ಇಲ್ಲ. ಸಾಮಾಜಿಕ ಸಮಸ್ಯೆಗಳು ಇವೆ. ಸಮಾಜದಲ್ಲಿ ಅಸಮಾನತೆ ಇದೆ. ಮೇಲುಕೀಳು ಎಂಬ ಭಾವನೆ ಇದೆ. ಇದರಿಂದ ರೊಚ್ಚಿಗೆದ್ದು ಕೆಲವರು ಭೂಗತರಾಗಿ ಹೋರಾಟ ಮಾಡುತ್ತಿದ್ದಾರೆ. ಅವರು ಸಮಾಜಕ್ಕಾಗಿ ತ್ಯಾಗ ಮಾಡುತ್ತಿದ್ದಾರೆ ಎಂದು ಅವರೊಂದಿಗೆ ಚರ್ಚಿಸಲು ಬಂದವರು ಹೇಳಿದರು. ಪೊಲೀಸರು ಅವರನ್ನು ನಿರಂತರವಾಗಿ ಬೇಟೆ ಆಡುತ್ತಿರುತ್ತಾರೆ ಎಂದು ಅವರು ಹೇಳಿದರು. ಹಾಗಾಗಿ ನಕ್ಸಲರು ಪೊಲೀಸರ ದಾಳಿಗೆ ಭಯಪಟ್ಟು ಕಾಡಿನಲ್ಲಿ ಅಲೆದಾಡುತ್ತಿರುತ್ತಾರೆ ಎಂದು ಹೇಳಿದ ಅವರು, ಸಮಾಜದಲ್ಲಿ ಆಗುತ್ತಿರುವ ಅನ್ಯಾಯವನ್ನು ಕಂಡು ಅದರ ವಿರುದ್ಧ ರೊಚ್ಚಿಗೆದ್ದು, ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ಭೂಗತರಾಗಿ ಹೋರಾಟಗಳನ್ನು ಮಾಡುತ್ತಿದ್ದಾರೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸುಬ್ಬಯ್ಯ "ಬಂದೂಕು ಹಿಡಿದು ಹೋರಾಟ ಮಾಡುವುದು ಇದಕ್ಕೆ ಉತ್ತರವಲ್ಲ. ಪ್ರಜಾಪ್ರಭುತ್ವದ ಮಾರ್ಗದಲ್ಲಿಯೇ ಹೋರಾಟಗಳನ್ನು ನಡೆಸಬೇಕು. ಭಯೋತ್ಪಾದನೆಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಶಸ್ತ್ರಧಾರಿಗಳಾದ ಕೂಡಲೇ ಅವರು ಸರಕಾರದ ವಿರುದ್ಧ ಇದ್ದಾರೆ ಎಂದು ಹೇಳಿಕೊಂಡು ಅವರನ್ನು ದಮನ ಮಾಡಲು ಸರಕಾರ ಮುಂದಾಗುತ್ತದೆ. ಸಾಕೇತ್ ರಾಜನ್‌ರಿಂದ ಮೊದಲ್ಗೊಂಡು ಯಾರೆಲ್ಲಾ ಭೂಗತರಾಗಿ ಹೋರಾಟಗಳನ್ನು ನಡೆಸಿದ್ದಾರೋ ಅವರು ಏನನ್ನೂ ಸಾಧಿಸದೆ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಇದರಿಂದ ಅವರ ಕುಟುಂಬಕ್ಕೂ ನಷ್ಟ, ಸಮಾಜಕ್ಕೂ ನಷ್ಟ. ಸಾರ್ಥಕತೆ ಮಾತ್ರ ಶೂನ್ಯ" ಎಂದು ಹೇಳಿದರು. "ನಕ್ಸಲೀಯರು ಕಾಡಿನಲ್ಲಿ ಅಲೆದಾಡುತ್ತಾ ಕಷ್ಟ ಸಹಿಷ್ಣುಗಳಾಗಿರುತ್ತಾರೆ. ಅವರಿಗೆ ತೊಂದರೆಗಳನ್ನು ಶಕ್ತವಾಗಿ ಎದುರಿಸುವ ಶಕ್ತಿ ಇದೆ. ಹಾಗಿರುವಾಗ ಅವರು ಭೂಗತರಾಗಿ ಬಂದೂಕು ಹಿಡಿದು ಹೋರಾಟ ಮಾಡುವುದಕ್ಕಿಂತ, ಶಸ್ತ್ರವನ್ನು ತ್ಯಜಿಸಿ, ಮುಖ್ಯವಾಹಿನಿಗೆ ಬಂದು, ಪ್ರಜಾಪ್ರಭುತ್ವದ ಮಾರ್ಗದಲ್ಲಿ ಹೋರಾಟವನ್ನು ಮಾಡಬೇಕು" ಎಂದು ಹೇಳಿದರು. "ಪೊಲೀಸರು ಪ್ರಜಾಪ್ರಭುತ್ವ ಮಾರ್ಗದಲ್ಲಿ ಹೋರಾಟ ಮಾಡುವಾಗ ಕೇಸುಗಳನ್ನು ಹಾಕುತ್ತಾರೆ. ಅದರ ವಿರುದ್ಧ ನ್ಯಾಯಾಲಯದಲ್ಲಿ ಹೋರಾಡಬೇಕು. ಜೀವದ ಹಂಗು ತೊರೆದು, ಕುಟುಂಬದವರ ಸಂಪರ್ಕವೇ ಇಲ್ಲದೆ, ಕಾಡಿನಲ್ಲಿ ಅಲೆದಾಡಿಕೊಂಡು, ಪ್ರತೀಕ್ಷಣ ಜೀವ ಭಯದಿಂದ ಇರುವುದಕ್ಕಿಂತಲೂ ಇಂತಹ ಹೋರಾಟಗಳು ಒಳ್ಳೆಯದಲ್ಲವೆ?" ಎಂದು ಪ್ರಶ್ನಿಸಿದ ಸುಬ್ಬಯ್ಯ, ಕಾಡಿನಲ್ಲಿರುವವರೆಲ್ಲರೂ ಶಸ್ತ್ರ ತ್ಯಜಿಸಿ ಹೋರಾಟವನ್ನು ಮಾಡಬೇಕೆಂದು ಹೇಳಿದರು.

ಹೀಗೆ ಸುಬ್ಬಯ್ಯ ಮಾತನಾಡುವ ವೇಳೆಯಲ್ಲಿ ನಕ್ಸಲೀಯರು ಶರಣಾಗತರಾಗುವ ಪ್ರಸ್ತಾಪವಿರಲಿಲ್ಲ. ಆದರೆ ಸುಬ್ಬಯ್ಯನವರ ಮನಸ್ಸಿನಲ್ಲಿ ಆ ವಿಚಾರ ಇತ್ತು. ಅವರ ವಿಚಾರಗಳಿಗೆ ಮೂರ್ತ ಸ್ವರೂಪ ಎಂಬಂತೆ ಈಗ ಡಿಸೆಂಬರ್ 8ರಂದು ಚಿಕ್ಕಮಗಳೂರಿನಲ್ಲಿ ಅಂದರೆ ಯಾವ ಸ್ಥಳದಲ್ಲಿ ಸುಬ್ಬಯ್ಯನವರು ಈ ವಿಚಾರದ ಬಗ್ಗೆ ಚರ್ಚಿಸಿದ್ದರೋ, ಅದೇ ಚಿಕ್ಕಮಗಳೂರಿನಲ್ಲಿ ನಕ್ಸಲರಾದ ನೂರ್ ಶ್ರೀಧರ್ ಹಾಗೂ ಸಿರಿಮನೆ ನಾಗರಾಜ್‌ರವರು ಮುಖ್ಯವಾಹಿನಿಗೆ ಬಂದಿದ್ದಾರೆ. ಆ ಸಂದರ್ಭದಲ್ಲಿ ಹಿರಿಯರಾದ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಹಾಗೂ ಗೌರಿ ಲಂಕೇಶ್‌ರವರು ಉಪಸ್ಥಿತರಿದ್ದರು. ಅಲ್ಲಿ ಕಾಣುತ್ತಿದ್ದ ಕೊರತೆ ಈ ಇಡೀ ಪ್ರಕ್ರಿಯೆಯಲ್ಲಿ ಸಕ್ರಿಯರಾಗಿ ಇದ್ದಂತಹ ಸುಬ್ಬಯ್ಯನವರ ಗೈರುಹಾಜರಿ. ಶಾಂತಿಗಾಗಿ ನಾಗರಿಕ ವೇದಿಕೆಯ ಹೆಸರಿನಲ್ಲಿ ಇವರುಗಳು ನಕ್ಸಲರ ಶರಣಾಗತಿ



ಪ್ರಕ್ರಿಯೆಯ ಬಗ್ಗೆ ಸರಕಾರದೊಂದಿಗೆ ವ್ಯವಹರಿಸಿದ್ದರು. ಇದರ ಫಲವಾಗಿಯೇ ಕರ್ನಾಟಕ ರಾಜ್ಯ ಸರಕಾರವು ನಕ್ಸಲರ ಶರಣಾಗತಿ ಮತ್ತು ಪುನರ್‌ವಸತಿ ರಾಜ್ಯಮಟ್ಟದ ಸಮಿತಿಗೆ ಹೆಚ್.ಎಸ್.ದೊರೆಸ್ವಾಮಿ, ಗೌರಿ ಲಂಕೇಶ್ ಹಾಗೂ ಎ.ಕೆ. ಸುಬ್ಬಯ್ಯನವರನ್ನು ಸೇರ್ಪಡೆ ಮಾಡಿತ್ತು.

ಅನ್ಯಾಯವನ್ನು ಕಂಡಾಗಲೆಲ್ಲಾ ತನ್ನ ಶಕ್ತಿ ಮೀರಿ ಪ್ರತಿಭಟನೆ ನಡೆಸುವ ಸುಬ್ಬಯ್ಯ, ವಿಧಾನ ಪರಿಷತ್ ಸದಸ್ಯರಾಗುವ ವೇಳೆಗೆ ಸುಮಾರು 37 ಪೊಲೀಸ್ ಪ್ರಕರಣಗಳನ್ನು ಎದುರಿಸಿದ್ದ ವ್ಯಕ್ತಿ. ಜೊತೆಗೆ 1975ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ದೇಶದ ಮೇಲೆ ಹೇರಿದ್ದ ಆಂತರಿಕ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅದರ ವಿರುದ್ಧ ಹೋರಾಟ ನಡೆಸಿ, 19 ತಿಂಗಳುಗಳ ಕಾಲ ಸೆರೆವಾಸ ಅನುಭವಿಸಿದವರು.

ಸುಬ್ಬಯ್ಯ ಮೂಲತಃ ಕೊಡವ ಜನಾಂಗಕ್ಕೆ ಸೇರಿದವರು ಮತ್ತು ಕೊಡಗಿನಲ್ಲಿ ಇದ್ದಂತಹ ವಿಶೇಷವಾದ ಜಮ್ಮಾ ಹಿಡುವಳಿಯನ್ನು ಹೊಂದಿದ್ದವರು. ಈ ಎರಡೂ ವರ್ಗಕ್ಕೆ ಕೋವಿಯನ್ನು ಲೈಸನ್ಸ್ ರಹಿತವಾಗಿ ಭಾರತದಾದ್ಯಂತ ಇಟ್ಟುಕೊಳ್ಳುವ ಹಕ್ಕು ಇದೆ. ಆದರೂ ಅವರಿಗೆ ಶಸ್ತ್ರ ಹೋರಾಟದ ಬಗ್ಗೆ ಕಿಂಚಿತ್ತೂ ನಂಬಿಕೆ ಇಲ್ಲ. ಜನಶಕ್ತಿಯ ಮುಂದೆ ಯಾವುದೇ ಶಕ್ತಿ ನಿಲ್ಲುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನ ಶಕ್ತಿಗೆ ಹೆಚ್ಚಿನ ಬಲ. ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರು ಜನಸೇವಕರು. ಜನರು ಸಾರ್ವಭೌಮರು ಎಂಬ ಕಲ್ಪನೆ ಸುಬ್ಬಯ್ಯನವರದು. ಇಂತಹ ಶ್ರೇಷ್ಠ ಚಿಂತನೆಯ ಸುಬ್ಬಯ್ಯನವರ ನಕ್ಸಲರು ಮುಖ್ಯವಾಹಿನಿಗೆ ಹಿಂದಿರುಗಿದಾಗ ಗೈರುಹಾಜರಿ ಖಂಡಿತವಾಗಿಯೂ ಎದ್ದು ಕಾಣುತ್ತಿತ್ತು.

ನಕ್ಸಲರ ಬಗ್ಗೆ ಇಲ್ಲದ ಕ್ಯಾತೆ ತೆಗೆದ ವ್ಯಕ್ತಿ ಸಿ.ಟಿ. ರವಿ. ತನ್ನ ಜಿಲ್ಲೆಯಲ್ಲಿ ನಕ್ಸಲರು ಮುಖ್ಯವಾಹಿನಿಗೆ ಬರುವುದು ಆತನಿಗೆ ಸಹಿಸಲು ಸಾಧ್ಯವಿಲ್ಲದ ವಿಚಾರವಾಗಿತ್ತು. ನಕ್ಸಲ್ ಪಡೆಗೆ ಹೊಸಬರನ್ನು ಸೇರಿಸಿಕೊಳ್ಳುವ ಪ್ರಕ್ರಿಯೆಗಾಗಿ ಇವರಿಬ್ಬರು ಶರಣಾಗತರಾಗುತ್ತಿದ್ದಾರೆ, ಅವರು ಮುದಿಯರು ಎಂದು ಸಿ.ಟಿ. ರವಿ ಹಲುಬಲು ತೊಡಗಿದರು. ಅವರಿಗೆ ಕನಸಿನಲ್ಲಿಯೂ ನಕ್ಸಲೀಯರು ಕಾಡುತ್ತಿದ್ದಂತೆ ಕಂಡುಬಂತು. ಗೌರಿ ಲಂಕೇಶ್ ವಿರುದ್ಧ ರಾಜ್ಯಪಾಲರಿಗೂ ದೂರು ನೀಡಿದರು. ತಮ್ಮ ಸಾಮ್ರಾಜ್ಯಕ್ಕೆ ಎಲ್ಲಿ ಹೊಡೆತ ಬೀಳುತ್ತದೋ ಎಂಬ ಭಯ ಸಿ.ಟಿ. ರವಿಯವರನ್ನು ಕಾಡುತ್ತಿದ್ದಂತೆ ಕಂಡುಬಂತು. ಕಾಡುಮೇಡಿನಲ್ಲಿ ಹೋರಾಟ ನಡೆಸುವವರು ತಾವಾಗಿಯೇ ಮುಖ್ಯವಾಹಿನಿಗೆ ಬರುತ್ತೇವೆ ಎಂದಾಗ ಅವರಿಗೆ ಅವಕಾಶವನ್ನು ಕಲ್ಪಿಸುವ ಹೃದಯ ವೈಶಾಲ್ಯತೆಯನ್ನು ತೋರಬೇಕಾಗಿದ್ದ ಸಿ.ಟಿ.ರವಿ ಮತ್ತಷ್ಟು ಕುಬ್ಜರಾದರು. ನಕ್ಸಲರು ಮುಖ್ಯವಾಹಿನಿಗೆ ಬರಬೇಕು ಮತ್ತು ಪ್ರಜಾಪ್ರಭುತ್ವ ಮಾರ್ಗದಲ್ಲಿಯೇ ಹೋರಾಟಗಳನ್ನು ನಡೆಸಬೇಕು ಎಂಬ ಚಿಂತನೆ ಉಳ್ಳಂತಹ ಸುಬ್ಬಯ್ಯನಂತಹ ವ್ಯಕ್ತಿತ್ವ ಎಂತಹದ್ದು ಮತ್ತು ನಕ್ಸಲರನ್ನು ದಮನ ಮಾಡಬೇಕು ಎಂದು ಭಾವಿಸುವಂತಹ ಸಿ.ಟಿ. ರವಿಯಂತಹವರ ವ್ಯಕ್ತಿತ್ವ ಎಂತಹದ್ದು ಎಂದು ಇದರಿಂದಲೇ ಸ್ಪಷ್ಟವಾಗುತ್ತದೆ.

ಸುಬ್ಬಯ್ಯ ಅವತ್ತು ಗೈರು ಹಾಜರಾದದ್ದು ಅವರ ಅನಾರೋಗ್ಯದ ಕಾರಣದಿಂದ. ಅವರಿಗೆ ಕೆಲವು ತಿಂಗಳ ಹಿಂದೆ ಗಂಟಲಿನ ಕ್ಯಾನ್ಸರ್‌ಗಾಗಿ ಶಸ್ತ್ರ ಚಿಕಿತ್ಸೆ ನಡೆದಿತ್ತು. ಅವರಿಗೆ ಸಂಪೂರ್ಣ ವಿಶ್ರಾಂತಿ ಪಡೆಯಲು ವೈದ್ಯರು ಸೂಚಿಸಿದ್ದ ಕಾರಣ ಮತ್ತು ಯಾವುದೇ ಕಾರಣಕ್ಕೂ ಸೆದ್ಯದ ಪರಿಸ್ಥಿತಿಯಲ್ಲಿ ಮೊಬೈಲ್ ಬಳಸಬಾರದು ಎಂಬ ಸೂಚನೆಯನ್ನು ನೀಡಿದ್ದ ಕಾರಣ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದರು. ನಕ್ಸಲರು ಮುಖ್ಯವಾಹಿನಿಗೆ ಬರುವ ಪ್ರಕ್ರಿಯೆ ಅವರ ಗಮನದಲ್ಲಿ ಇತ್ತು. ಆ ಪ್ರಕ್ರಿಯೆ ಬೆಂಗಳೂರಿನಲ್ಲಿ ನಡೆಯುವುದಿದ್ದರೆ ತಾನು ಖಂಡಿತವಾಗಿಯೂ ಅದರಲ್ಲಿ ಭಾಗವಹಿಸುತ್ತೇನೆ ಎಂದು ಅವರು ಹೇಳಿದ್ದರು. ಆದರೆ ಅದು ನಡೆದದ್ದು ಚಿಕ್ಕಮಗಳೂರಿನಲ್ಲಿ ಮತ್ತು ಆ ಸಂದರ್ಭದಲ್ಲಿ ಅವರು ಇದ್ದದ್ದು ಕೊಡಗಿನ ತಮ್ಮ ತೋಟದ ಮನೆಯಲ್ಲಿ. ಆದರೂ ಪತ್ರಿಕೆಗಳ ಮೂಲಕ ಮತ್ತು ಟಿವಿಯ ಮೂಲಕ ಈ ಎಲ್ಲಾ ಚಟುವಟಿಕೆಯನ್ನು ಸೂಕ್ಷ್ಮವಾಗಿ ಅವರು ಗಮನಿಸಿದ್ದರು.

ಅವರು ಆರೋಗ್ಯದಿಂದ ಇದ್ದು, ಓಡಾಡಿಕೊಂಡು ಇದ್ದಾಗ ಅವರ ಬೆಲೆ ಏನು ಎಂಬುದು ಬಹಳಷ್ಟು ಮಂದಿಗೆ ತಿಳಿದಿರಲಿಲ್ಲ. ಅದರಲ್ಲಿಯೂ ವಿಶೇಷವಾಗಿ ಕೊಡಗಿನ ಜನತೆಗೆ ಅವರ ಬಗ್ಗೆ ತಿಳಿದೇ ಇರಲಿಲ್ಲ ಎಂದು ಹೇಳಬಹುದು. ಕೊಡಗಿನ ಸಾಕಷ್ಟು ಹೋರಾಟಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾಗ ಅವರ ಬಗ್ಗೆ ಅಪಸ್ವರಗಳು ಕೇಳಿಬಂದಿತ್ತು. ವ್ಯವಸ್ಥಿತ ಅಪಪ್ರಚಾರಗಳು ಆಗುತ್ತಿದ್ದವು. ಆದರೆ ಡಾ. ಕಸ್ತೂರಿರಂಗನ್ ಸಮಿತಿ ವರದಿಯ ಬಗ್ಗೆ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಲು ಕೊಡಗು ಜಿಲ್ಲೆಗೆ ತಜ್ಞರ ಸಮಿತಿ ಬಂದ ವೇಳೆಯಲ್ಲಿ ಸುಬ್ಬಯ್ಯ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದೇ ಇದ್ದದ್ದರ ಬಗ್ಗೆ ಸಾರ್ವಜನಿಕವಾಗಿ ಚರ್ಚೆನಡೆದಿತ್ತು. ಅವರ ಅನುಪಸ್ಥಿತಿ ಎಂತಹ ದುಷ್ಪರಿಣಾಮವನ್ನು ಬೀರುತ್ತದೆ ಎಂದು ಜನಪ್ರತಿನಿಧಿಗಳಾದಿಯಾಗಿ ಸಾರ್ವಜನಿಕರು ಮಾತನಾಡುತ್ತಿದ್ದರು. ಯಾವುದೇ ಸಮಿತಿ ಇರಲಿ, ಯಾವುದೇ ಸರಕಾರವಿರಲಿ, ಯಾವುದೇ ವ್ಯಕ್ತಿ ಇರಲಿ ತನ್ನ ಅಭಿಪ್ರಾಯವನ್ನು ಯಾವುದೇ ಅಳುಕು ಇಲ್ಲದಂತೆ ಹೇಳುವಂತಹ ಶಕ್ತಿ ಸುಬ್ಬಯ್ಯನವರಲ್ಲಿ ಇದೆ.

ಕಪಟತನವೆಂದರೆ ಏನು ಎಂದು ಅರಿಯದ ನಿಷ್ಕಲ್ಮಷ ವ್ಯಕ್ತಿತ್ವದ ವ್ಯಕ್ತಿ ಸುಬ್ಬಯ್ಯ. ಅವರ ಮಾತುಗಳು ಛಾಟಿ ಬೀಸಿದಂತೆ ಇರುತ್ತದೆ. ಅವರ ಮಾತಿಗೆ ಎಂತಹ ಶಕ್ತಿ ಇದೆ ಎನ್ನುವುದಕ್ಕೆ ಒಂದು ನಿದರ್ಶನ ಇತ್ತೀಚೆಗೆ ರಾಜ್ಯದಲ್ಲಿ ಸುದ್ದಿ ಮಾಡಿದ್ದಂತಹ ಕೆ.ಪಿ.ಎಸ್.ಸಿ. ಹಗರಣ. ಕೆ.ಪಿ.ಎಸ್.ಸಿ.ಯ ಫಲಿತಾಂಶವನ್ನು ರದ್ದು ಮಾಡಿ, ರಾಜ್ಯ ಸರಕಾರ ಆದೇಶ ಹೊರಡಿಸಿದಾಗ, ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದಾಗ, ಆ ಪ್ರತಿಭಟನೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪಾಲ್ಗೊಂಡಿದ್ದರು. ಕರ್ನಾಟಕ ರಾಜ್ಯ ಸರಕಾರ ಆಯ್ಕೆಯಾದವರಿಗೆ ಬಹಳ ಅನ್ಯಾಯವನ್ನು ಮಾಡುತ್ತಿದೆ ಎಂದು ಕುಮಾರಸ್ವಾಮಿ ಹೇಳಿಕೆಯನ್ನು ನೀಡಿ, ಸಿದ್ದರಾಮಯ್ಯನವರ ವಿರುದ್ಧ ಆಕ್ರೋಶ ಭುಗಿಲೇಳುವಂತೆ ಮಾಡಿದ್ದರು. ಹಾಗಾಗಿ ಸಿದ್ದರಾಮಯ್ಯ ಸರಕಾರದ ವಿರುದ್ಧ ಕರ್ನಾಟಕದ ಜನರು, ಅದರಲ್ಲಿಯೂ ವಿಶೇಷವಾಗಿ ಪ್ರತಿಭಟನೆ ನಡೆಸುತ್ತಿದ್ದ ವ್ಯಕ್ತಿಗಳ ಕುಟುಂಬದವರು ಕಿಡಿಕಾರುತ್ತಿದ್ದರು. ಜೊತೆಗೆ ಅವರ ಹೋರಾಟಕ್ಕೆ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷರಾದ ಸಿ.ಎಸ್.ದ್ವಾರಕನಾಥ್‌ರಂತಹವರು ಕೂಡ ಬೆಂಬಲ ಸೂಚಿಸಿದ್ದರಿಂದ, ಸಿದ್ದರಾಮಯ್ಯ ಒಂದು ರೀತಿಯಲ್ಲಿ ವಿಲನ್ ಆಗಿ ಪ್ರತಿಬಿಂಬಿಸಲ್ಪಟ್ಟಿದ್ದರು. ಸರಕಾರವನ್ನು ಸಮರ್ಥಿಸುವ ಕೆಲಸವನ್ನು ಅವರ ಸಂಪುಟದ ಸಹೋದ್ಯೋಗಿಗಳಾಗಲಿ, ಕಾಂಗ್ರೆಸ್ ಪಕ್ಷವಾಗಲಿ ಮಾಡಲಿಲ್ಲ. ಕಾಂಗ್ರೆಸ್ ಅಧ್ಯಕ್ಷ ಹಾಗೂ ಮುಖ್ಯಮಂತ್ರಿಗಳ ನಡುವಿನ ಸಮರದಿಂದ ಮುಖ್ಯಮಂತ್ರಿಗಳು ಬಹುತೇಕ ಒಬ್ಬಂಟಿಯಾಗಿದ್ದರು. ಆಗ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯೊಂದನ್ನು ನಡೆಸಿ, ಕುಮಾರಸ್ವಾಮಿಯವರಿಗಾಗಲಿ, ದೇವೇಗೌಡರಿಗಾಗಲಿ ಕೆ.ಪಿ.ಎಸ್.ಸಿ.ಯ ಫಲಿತಾಂಶವನ್ನು ರದ್ದು ಮಾಡಿರುವ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಸುಬ್ಬಯ್ಯ ಹೇಳಿದ್ದರು.

ಕೆ.ಪಿ.ಎಸ್.ಸಿ.ಯು ಇಲ್ಲಿಯವರೆಗೆ ದೇವೇಗೌಡ ಕುಟುಂಬದ ಆಸ್ತಿ ಎನ್ನುವಂತೆ ಇತ್ತು. ಕೆ.ಪಿ.ಎಸ್.ಸಿ.ಯ ಅಧ್ಯಕ್ಷರು ಮತ್ತು ಸಮಿತಿಯವರು ದೇವೇಗೌಡರ ಆಣತಿಯಂತೆ ಕಾರ್ಯ ನಿರ್ವಹಿಸುತ್ತಿದ್ದರು. ದೇವೇಗೌಡರು ಕೆ.ಪಿ.ಎಸ್.ಸಿ.ಯ ನೇರ ಫಲಾನುಭವಿ ಎಂದು ಹೇಳಿದ ಎ.ಕೆ. ಸುಬ್ಬಯ್ಯ ಅವರ ಪುತ್ರ ಬಾಲಕೃಷ್ಣೇಗೌಡ ಕೆ.ಪಿ.ಎಸ್.ಸಿ. ಮೂಲಕ ಹುದ್ದೆ ಗಿಟ್ಟಿಸಲು ದೇವೇಗೌಡರು ಉತ್ತರ ಪತ್ರಿಕೆಯನ್ನೇ ಬದಲಾಯಿಸಿ, ತನ್ನ ಪುತ್ರನ ಭವಿಷ್ಯವನ್ನು ರೂಪಿಸಿದ್ದರು ಎಂದು ಒಂದು ಬಾಂಬ್ ಸಿಡಿಸಿದ್ದರು. ಇದರಿಂದ ಪ್ರತಿಭಟನೆಯಲ್ಲಿ ಕುಳಿತಿದ್ದ ಕುಮಾರಸ್ವಾಮಿ ನಲುಗಿ ಹೋಗಿ, ಏನೇನೋ ಬಡಬಡಿಸಲು ಪ್ರಾರಂಭಿಸಿ, ಸುಬ್ಬಯ್ಯನವರ ಆರೋಪಕ್ಕೆ ಸಾಕ್ಷಿ ಬೇಕು ಎಂದು ಕೇಳಿದರು. ಆಗ ಸುಬ್ಬಯ್ಯನವರು ಹೇಳಿದ ಮಾತು ಅವರ ನೈತಿಕ ಶಕ್ತಿ ಎಷ್ಟು ಗಟ್ಟಿಯಾಗಿದೆ ಎಂಬುದನ್ನು ಸಾಬೀತುಮಾಡಿತು. ಸುಬ್ಬಯ್ಯ ಒಂದು ಮಾತು ಹೇಳಿದರೆ ಮುಗಿಯಿತು. ಸುಬ್ಬಯ್ಯನವರ ಮಾತೇ ಸಾಕ್ಷಿ. ಸುಬ್ಬಯ್ಯನವರ ನೈತಿಕತೆ ಏನು ಎಂಬುದು ಇಡಿ ಜಗತ್ತಿಗೇ ತಿಳಿದಿದೆ. ಹಾಗಾಗಿ ಕುಮಾರಸ್ವಾಮಿ ಈ ವಿಚಾರದಲ್ಲಿ ಸಾಕ್ಷಿ ಕೇಳುವ ಅಗತ್ಯವಿಲ್ಲ. ಹಾಗೇನಾದರೂ ತಾನು ಹೇಳುತ್ತಿರುವುದು ಸುಳ್ಳು ಎಂದಾದಲ್ಲಿ ದೇವೇಗೌಡರಲ್ಲಿ ಈ ಬಗ್ಗೆ ಕುಮಾರಸ್ವಾಮಿ ಪ್ರಶ್ನಿಸಲಿ ಎಂದು ಕುಮಾರಸ್ವಾಮಿಯವರ ಬಾಯಿ ಮುಚ್ಚಿಸಿದ್ದರು. ದೇವೇಗೌಡರು ಮಾತ್ರ ಸುಬ್ಬಯ್
ಆರೋಪವನ್ನು ನಿರಾಕರಿಸುವ ಗೋಜಿಗೇ ಹೋ
ತಮ್ಮ ಬಣ್ಣ ಬಯಲಾಗುವ ಭಯ ಅವರನ್ನು ಕಾ
ಏನೋ?


ಇದರಿಂದಾಗಿ ಸಿದ್ದರಾಮಯ್ಯನವರಿಗೆ ನಿರಾಳವ
ಕುಮಾರಸ್ವಾಮಿಯವರ ಪ್ರತಿಭಟನೆ, ಹೋರಾಟ
ಹಾರಾಟಗಳು ಸಂಪೂರ್ಣವಾಗಿ ಸ್ಥಗಿತಗೊಂಡಿತು. ಮ
ಕೆ.ಪಿ.ಎಸ್.ಸಿ. ಎಂಬ ಭೂತ ಸಿದ್ದರಾಮಯ್ಯನ
ಕಾಡುವುದು ಸಹ ನಿಂತಿತ್ತು. ಇದು ಸುಬ್ಬಯ್ಯನವರ
ಮಾತಿನ ಫಲವಾಗಿತ್ತು. ಇಂತಹ ಹೇಳಿಕೆಗಳನ್ನು
ವೈಯಕ್ತಿಕ ಲಾಭಕ್ಕೆ ಅವರು ಎಂದೂ ಬಳ
ಅಪ್ರಮಾಣಿಕರು ಪ್ರಾಮಾಣಿಕರಂತೆ ಮಾತನಾಡುವಾಗ
ಸುಬ್ಬಯ್ಯನವರಿಗೆ ಸಹಿಸಲು ಸಾಧ್ಯವಾಗುವುದಿಲ್ಲ ಎನ್
ಇದು ಒಂದು ನಿದರ್ಶನವಷ್ಟೆ.

ಕೆ.ಎಸ್.ಪುಟ್ಟಣ್ಣಯ್ಯ ಹಲವಾರು ಹೋರಾ
ಸುಬ್ಬಯ್ಯನವರ ಜೊತೆಯಲ್ಲಿ ಗುರುತಿಸಿಕೊಂಡ
ಇತ್ತೀಚೆಗೆ ಅವರು ಕೊಡಗು ಜಿಲ್ಲೆಯ ಮೂಲಕ
ರಾಜ್ಯಕ್ಕೆ ಹಾದುಹೋಗುವ ಹೈಟೆನ್ಷನ್ ವಿದ್ಯುತ್ ಮ
ವಿಚಾರದಲ್ಲಿ ಸುಬ್ಬಯ್ಯನವರ ನಿಲುವಿಗೆ ವಿರು
ಕೊಡಗು ಜಿಲ್ಲೆಯಲ್ಲಿ ಹೋರಾಟಗಳಲ್ಲಿ ಭಾಗವಹಿ
ವಾಸ್ತವತೆ ಏನು ಎಂಬುದನ್ನು ತಿಳಿಯದೆ, ಡ
ಪರಿಸರವಾದಿಗಳ ಕೈಗೊಂಬೆಯಂತೆ ಪುಟ್ಟಣ್ಣಯ್ಯ ಕ
ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸಿದ್ದು ಸುಬ್ಬಯ್ಯನವರಿಗೆ ಸ
ಸಾಧ್ಯವಾಗಲಿಲ್ಲ. ಹಾಗಾಗಿ ತನ್ನ ಜೊತೆಯಲ್ಲಿ ಪ್ರ
ಮಾಡುತ್ತಿದ್ದ ವ್ಯಕ್ತಿ ಎಂಬುದನ್ನು ಬದಿ
ಕೆ.ಎಸ್.ಪುಟ್ಟಣ್ಣಯ್ಯನವರ ವಿರುದ್ಧ ಪತ್ರಿಕಾ ಹೇಳಿಕೆ
ಸುಬ್ಬಯ್ಯ ನೀಡಿದರು. ಕೊಡಗಿನ ವಿಚಾರ
ನೋಡಿಕೊಳ್ಳಲು ಜಿಲ್ಲೆಯ ಶಾಸಕರು ಮತ್ತು ನಾವು
ನೀವು ಮಂಡ್ಯ ಜಿಲ್ಲೆಯ ಬಗ್ಗೆ ತಲೆಕೆಡಿಸಿಕೊಂಡರೆ
ಎಂದು ಪುಟ್ಟಣ್ಣಯ್ಯನವರನ್ನು ತಿವಿದಿದ್ದರು.

ಒಂದು ರೀತಿಯಲ್ಲಿ ಸಮಾನ ಮನಸ್ಕರ
ಪುಟ್ಟಣ್ಣಯ್ಯ ಹಾಗೂ ಸುಬ್ಬಯ್ಯ ಪರಸ್ಪರ ವಿರುದ್ಧ
ಮಾತನಾಡುವುದು ಇವರಿಬ್ಬರ ಒಡನಾಡಿಗಳಿಗೆ ನುಂಗ
ತುತ್ತಾಗಿತ್ತು. ಹಾಗಾಗಿ ದೇವನೂರು ಮಹದೇವ
ವ್ಯಕ್ತಿಗಳು ಸುಬ್ಬಯ್ಯನವರಿಗೆ ಪುಟ್ಟಣ್ಣಯ್ಯನವರ
ಬಹಿರಂಗವಾಗಿ ಹೇಳಿಕೆ ನೀಡಬಾರದೆಂದು
ಮಾಡಿಕೊಂಡರು. ಆದರೆ ಅದನ್ನು ನಿರಾಕರಿಸಿದ ಸ
"ಕೊಡಗು ಜಿಲ್ಲೆಯ ವಿಚಾರ ನನಗೆ ತಿಳಿದಿರ
ಪುಟ್ಟಣ್ಣಯ್ಯನವರಿಗೆ ತಿಳಿದಿಲ್ಲ. ನಾನು ಈ ವಿಚ
ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸು
ಎಂಬುದು ಪುಟ್ಟಣ್ಣಯ್ಯನವರಿಗೆ ಗೊತ್ತಿದೆ. ಹಾಗಿ
ಹೆಜ್ಜೆ ಹಾಕುವ ಮೊದಲು ವಿಚಾರವೇನು ಎಂದ
ಬಳಿ ಪುಟ್ಟಣ್ಣಯ್ಯ ಚರ್ಚಿಸಬೇಕಾಗಿತ್ತು. ವಾಸ್ತವ
ಅರಿತುಕೊಳ್ಳಬೇಕಾಗಿತ್ತು. ಹಾಗೆ ಚರ್ಚೆ ಮಾಡ
ನಿಲುವಿಗೆ ವಿರುದ್ಧವಾಗಿ ಬಹಿರಂಗವಾಗಿ ಹ
ಮಾಡುತ್ತಿರುವ ವ್ಯಕ್ತಿಯ ವಿರುದ್ಧ ನಾನು ಬಹಿರಂಗ
ನೀಡಿದರೆ ತಪ್ಪಿಲ್ಲ" ಎಂದು ತಮ್ಮ ನಿಲ
ಸಮರ್ಥಿಸಿಕೊಂಡಿದ್ದರು.

ಇಬ್ಬರು ನಕ್ಸಲ್ ನಾಯಕರು ಮುಖ್ಯವ
ಬಂದಿರುವುದು ಸುಬ್ಬಯ್ಯನವರಿಗೆ ಅ
ಸಂತೋಷವನ್ನುಂಟುಮಾಡಿದೆ. ತನ್ನ ಕಲ್ಪನೆಯ ಹ
ನಕ್ಸಲರು ಬರುತ್ತಿದ್ದಾರೆ ಎಂಬ ಭಾವನೆ ಅವರಿಗೆ
ಸುಬ್ಬಯ್ಯ ಕರ್ನಾಟಕದ ಮಟ್ಟಿಗೆ ಒಂದು ಆಸ್ತಿ,
ಒಂದು ಜ್ಞಾನಭಂಡಾರ. ಅವರ ಚಿಂತನೆಗಳು
ಶ್ರೇಷ್ಠ ಮತ್ತು ನಿಷ್ಕಲ್ಮಷ. ಅವರ ಅನುಭವ ಅಪಾರ
ಬುದ್ಧಿ ಶಕ್ತಿ ಅತ್ಯಂತ ಚುರುಕು. 80ರ ಇಳಿ ವ
ಯುವಕರಂತೆ ಚಿಂತಿಸುವ ಅವರು, ಪ್ರಗ
ಚಿಂತನೆಯಲ್ಲಿ ಎಲ್ಲರಿಗಿಂತಲೂ ಸುಮಾರು ಎರಡ
ಮುಂದೆ ಇದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.
ದೈಹಿಕವಾಗಿ ಅನಾರೋಗ್ಯ ಬಂದಿತ್ತು. ಆದರೆ ಮಾನ
ಅವರು ಬಹಳ ಗಟ್ಟಿಯಾಗಿಯೇ ಇದ್ದಾರೆ. ಅವ
ದೈಹಿಕ ಅನಾರೋಗ್ಯದಿಂದ ಹೊರ ಬಂದು,
ಪಡೆಯುತ್ತಿದ್ದು ಅವರಿಗೆ ಇದು ಕೈಕಟ್ಟಿದಂತಹ ಸ್ಥಿ
ಕೊಡಗು ಜಿಲ್ಲೆಯ ಹಾಗೂ ಕರ್ನಾಟಕ ರಾಜ್ಯದ ಹ
ಸಮಸ್ಯೆಗಳಿಗೆ, ನಕ್ಸಲ್ ಸಮಸ್ಯೆಗೆ ಪರಿಹಾರವನ್ನು ಕಂಡ
ರೀತಿಯಲ್ಲಿಯೇ ಪರಿಹಾರವನ್ನು ಕಂಡುಕೊಳ್ಳಬ
ನಮ್ಮ ಚಿಂತನೆಗಳಿಗೆ ಸ್ಪಂದಿಸುವ ಸರಕಾರ
ರಾಜ್ಯದಲ್ಲಿ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ
ಆಂತರಿಕ ಸಮಸ್ಯೆಗಳ ನಡುವೆಯೂ ಜನಪರ ನ
ತಳೆಯುತ್ತಿದ್ದಾರೆ. ಅವರ ಕೈಬಲಪಡಿಸುವುದರ
ನಮ್ಮ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊ
ಈ ಸಂದರ್ಭದಲ್ಲಿ ತಾನು ವಿಶ್ರಾಂತಿ ಪಡೆಯುತ್ತಿ
ಸಮಸ್ಯೆಯಾಗಿದೆ ಎಂದು ಭಾವಿಸುತ್ತಿರುವ
ಸಂಪೂರ್ಣವಾಗಿ ಗುಣಮುಖರಾಗಿ, ಕಿರ
ಮಾರ್ಗದರ್ಶನ ಮಾಡುವ ಸ್ಥಿತಿಯಲ್ಲಿ ಇನ್ನಷ್ಟು
ಕಾಲ ಇರಬೇಕಾಗಿರುವುದು ಅಗತ್ಯವಾಗಿದೆ.


● ಬಿ.ಎನ್. ಮನು



ಹಲ್ಲೆಗೊಳಗಾದ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಶ್ರೀದೇವಮ್ಮ



ಕೋನಿಗರಹಳ್ಳಿಯ ದಲಿತರು



ಹಲ್ಲೆಗೊಳಗಾದ ದಲಿತ ಯುವಕ ಹರೀಶ

ಸಾಮಾಜಿಕ ಬಹಿಷ್ಕಾರ ಆಸರೆಗಾಗಿ ಕಾಯುತ್ತಿರುವ ಕೋನಿಗರಹಳ್ಳಿ ದಲಿತರು

ಭಾರತ ದೇಶದ ಹಳ್ಳಿಗಳಲ್ಲಿನ ಬಹುತೇಕ ದಲಿತರ ಪಾಡಿದು. ಎಲ್ಲಿಯ ತನಕ ದಲಿತರು ಹರಿಜನ ಪ್ರಜ್ಞೆ ಇಟ್ಟುಕೊಂಡು "ಬಡವ ನೀ ಮಡಗಿದಂಗಿರು" ಎಂಬ ಗಾದೆವಾಕ್ಯಕ್ಕೆ ಕಟ್ಟುಬಿದ್ದು ದೇವಸ್ಥಾನ, ಹೋಟೆಲ್, ಕ್ಷೌರಿಕರ ಅಂಗಡಿ, ಗ್ರಾಮ ಪಂಚಾಯತಿ, ಪೊಲೀಸ್ ಸ್ಟೇಷನ್ನುಗಳಿಂದ ದೂರವಿರುತ್ತಾರೋ ಅಲ್ಲಿಯ ತನಕ ದಲಿತರ ಮೇಲೆ ಯಾವುದೇ ದೌರ್ಜನ್ಯಗಳು ನಡೆಯಲಾರವು. ಯಾವಾಗ ದಲಿತರು ಅಂಬೇಡ್ಕರ್ ಪ್ರಜ್ಞೆ ಬೆಳೆಸಿಕೊಂಡು ತಮ್ಮ ಹಕ್ಕುಗಳಿಗೆ ದನಿ ಎತ್ತಿದ್ದಾರೋ ಅಲ್ಲೆಲ್ಲ ಅವರ ಮೇಲೆ ಸವರ್ಣೀಯರು ಬಹಿಷ್ಕಾರಗಳಿಂದ ಆರಂಭಿಸಿ ಭಯಾನಕ ಕೊಲೆಗಳನ್ನೂ ಮಾಡಿಬಿಟ್ಟಿದ್ದಾರೆ. ನಂತರ ಆ ಕೊಲೆಗಳನ್ನು ಅರಗಿಸಿಯೂ ಜಯಿಸಿಕೊಂಡಿದ್ದಾರೆ. ಶಾಸಕಾಂಗಕ್ಕಾಗಲೀ, ಕಾರ್ಯಾಂಗಕ್ಕಾಗಲೀ, ನ್ಯಾಯಾಂಗಕ್ಕಾಗಲೀ ಈ ಕೊಲೆಗಾರರನ್ನು ಪತ್ತೆ ಹಚ್ಚಿ ಶಿಕ್ಷಿಸಲು ಆಗುತ್ತಿಲ್ಲ. ಯಾಕೆಂದರೇ ಸತ್ತವರು ದಲಿತರು.

ಈ ರೀತಿ ನಾಯಿಗಳಿಗಿಂತ ಕೀಳಾಗಿ ದಲಿತರನ್ನು ನಡೆಸಿಕೊಳ್ಳುತ್ತಿರುವ ದೇಶದಲ್ಲೇ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಕೋನಿಗರಹಳ್ಳಿಯೂ ಇದೆ. ಈ ಜಿಲ್ಲೆ ಸಮಾಜ ಕಲ್ಯಾಣ ಸಚಿವರ ತವರು ಜಿಲ್ಲೆ. ಹಲವು ಬಹಿಷ್ಕಾರ ಪ್ರಕರಣಗಳು ಇಲ್ಲಿ ನಡೆದಿವೆ, ನಡೆಯುತ್ತಿವೆ.

ಈ ಊರಿನಲ್ಲಿ ಸುಮಾರು 40 ದಲಿತ ಕುಟುಂಬಗಳಿವೆ. ಇನ್ನುಳಿದಂತೆ ಕುಂಚಿಟಿಗರು (ಒಕ್ಕಲಿಗರು) 30, ಅಳ್ಳಿಕಾರರು 40, ಗೊಲ್ಲರು 40, ನಾಯಕರವು 5 ಕುಟುಂಬಗಳಿವೆ. ನಾಯಕರೂ ಸೇರಿದಂತೆ ಸವರ್ಣೀಯರೆಲ್ಲರೂ ದಲಿತ ಕುಟುಂಬಗಳಿಂದ ಅರ್ಧ ಮೈಲಿ ದೂರವೇ ವಾಸವಾಗಿದ್ದಾರೆ. ಎರಡು ವರ್ಗಕ್ಕೂ ಪ್ರತ್ಯೇಕ ಶಾಲೆಗಳೇ ಇವೆ. ವ್ಯವಸಾಯವೇ ಮುಖ್ಯ ಕಸುಬು. ದಲಿತರ ಕೇರಿಯಲ್ಲಿ ಇಂದಿಗೂ ಗುಡಿಸಲುಗಳು ಉಸಿರಾಡುತ್ತಿವೆ. ಸರಿಯಾದ ನೀರಿನ ವ್ಯವಸ್ಥೆ ಇಲ್ಲ. ಅನ್ನ ಬಟ್ಟೆಗೆ ಸಾಕಾಗುವಷ್ಟು ಜಮೀನಿಲ್ಲ. ಸರ್ಕಾರದ ಯಾವ ಕಾರ್ಯಕ್ರಮಗಳೂ ಇಲ್ಲಿನ ದಲಿತರಿಗೆ ಪರಿಣಾಮಕಾರಿಯಾಗಿ ತಲುಪಿಲ್ಲ.

ಕೋನಿಗರಹಳ್ಳಿಯ ದಲಿತರು ಮತ್ತು ಸವರ್ಣೀಯರು ಹಿಂದಿನಿಂದಲೂ ಬಹಳ ಅನ್ಯೋನ್ಯವಾಗಿದ್ದರು. ಇದಕ್ಕೆ ಕಾರಣ ದಲಿತರು ತಮ್ಮಷ್ಟಂತೆ ಯಾವುದನ್ನೂ ಪ್ರಶ್ನಿಸದೇ ಬದುಕುತ್ತಿದ್ದದ್ದು. ಆದರೆ ಶಿಕ್ಷಣ ಪಡೆದ ಕೆಲವು ದಲಿತ ಯುವಕರಿಗೆ ಒಳಗೊಳಗೇ ಅಸಮಾಧಾನವಿದ್ದದ್ದು ನಿಜ. ಈ ಊರಿನಿಂದ ಒಬ್ಬ ದಲಿತ ಯುವಕ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟರಿಗೆ ಕೊಡಮಾಡುವ ಐ.ಎ.ಎಸ್ ತರಬೇತಿಗೆ ದೆಹಲಿಗೆ ಹೋಗಿಯೂ ಬಂದಿದ್ದಾನೆ.

ಈ ರೀತಿ ಇದ್ದ ಕೋನಿಗರಹಳ್ಳಿಯಲ್ಲಿ 2011 ರ ಮೇ ತಿಂಗಳಲ್ಲಿ ಒಂದು ಘಟನೆ ನಡೆಯಿತು. ದಲಿತರೂ ಸೇರಿದಂತೆ ಎಲ್ಲ ಜನಾಂಗದವರೂ ಹೊಸದಾಗಿ ನವೀಕರಿಸಿದ್ದ ಗ್ರಾಮದೇವತೆ ಬಾಲಕೃಷ್ಣ ದೇವಸ್ಥಾನಕ್ಕೆ ಪೂಜೆ ಮಾಡಿಸಲು ಹೋಗಿದ್ದರು. ಆಗ ದಲಿತ ರಾಮಜ್ಜ ಸಂಪ್ರದಾಯದಂತೆ ಗುಡಿಯಿಂದ ದೂರವೇ ನಿಂತು ಪೂಜೆ ಸಲ್ಲಿಸಿಕೊಂಡು ಬರದೆ ಗುಡಿಯ ಹತ್ತಿರವೇ ತೆರಳಿದ್ದ. ಇದನ್ನು ವಿರೋಧಿಸಿದ ಸವರ್ಣೀಯರು ಅವನನ್ನು ತರಾಟೆಗೆ ತೆಗೆದುಕೊಂಡಿದ್ದರು. ರಾಮಜ್ಜನ ಸ್ವಾಭಿಮಾನಕ್ಕೆ ಧಕ್ಕೆ ಬಂದು ಅವನೂ ಸವರ್ಣೀಯರನ್ನು ತರಾಟೆಗೆ ತೆಗೆದುಕೊಂಡಿದ್ದ. ಎಂದೂ ಅವರ ವಿರುದ್ಧ ಬಾಯಿ ಮಾಡಲು ಹೆದರುತ್ತಿದ್ದ ದಲಿತರು ಇಂದು ಬಾಯಿ ಮಾಡುವುದನ್ನು ಸಹಿಸಲಾರದ ಸವರ್ಣೀಯರು ಗುಂಪಾಗಿ ಬಂದು ಅಂದು ರಾತ್ರಿ ರಾಮಜ್ಜನ ಮನೆಗೆ ನುಗ್ಗಿ ಅವನನ್ನು ಥಳಿಸಿದ್ದರು. ಮನೆಗೆ ಹಾನಿ ಮಾಡಿದ್ದರು. ದಲಿತರೆಲ್ಲರೂ ಹೆದರಿಕೊಂಡೇ ಈ ದೃಶ್ಯವನ್ನು ನೋಡುತ್ತಾ ನಡುಗುತ್ತಿದ್ದರು. ಆ ಕ್ಷಣವನ್ನು ನೆನಸಿಕೊಳ್ಳುವ ರಾಮಜ್ಜ ತನ್ನ ಮೇಲೆ ಹಲ್ಲೆಯಾಗಿರುವುದನ್ನು ಹೇಳುವ ಬದಲು "ಅಂಬೇಡ್ಕರ್ ಫೋಟೋನ ಕೆಳಗೆಸೆದು ಗಾಜು ಒಡೆದು ಹಾಕಿದ್ರು, ಸಾರ್" ಎಂದು ಅಳಲು ತೋಡಿಕೊಳ್ಳುತ್ತಾರೆ. ಇಷ್ಟೆಲ್ಲ ಆದರೂ ದಲಿತರು ದೂರು ನೀಡಲೇ ಇಲ್ಲ, ಅದಕ್ಕೆ ಕಾರಣ ಪ್ರಾಣ ಭಯ! ಮನೆಗೆ ನುಗ್ಗಿ ಮತ್ತೆ ಥಳಿಸಿಬಿಟ್ಟಾರು ಎಂಬ ಭಯ.

ಇಲ್ಲಿಂದ ಆರಂಭವಾಯಿತು ದಲಿತರ ಮೇಲಿನ ದೌರ್ಜನ್ಯ. ದಿನದಿಂದ ದಿನಕ್ಕೆ ದಲಿತರಲ್ಲಿ ಬೆಳೆಯುತ್ತಿದ್ದ ಸ್ವಾಭಿಮಾನ ಮಿಕ್ಕ ಜಾತಿಯವರೆಲ್ಲರನ್ನೂ ಒಗ್ಗಟ್ಟಾಗುವಂತೆ ಮಾಡಿತ್ತು. ದಲಿತರು ಮನುಷ್ಯ ಸಹಜರಂತೆ ಬದುಕಿದರೆ ಧರ್ಮ ಉದ್ಧಾರವಾಗುವುದೆ!!

ಇದೇ ವರ್ಷದ ಮೇ ತಿಂಗಳಿನಲ್ಲಿ ಮತ್ತೊಂದು ಘಟನೆ ನಡೆಯಿತು. ದಲಿತರ ಕೇರಿಯಲ್ಲಿರುವ ಗೋಣ ಮುಗ್ಗಲು ಮರದ ಎಲೆಗಳು ದಡಾರ ರೋಗಕ್ಕೆ ನಾಟಿ ಮದ್ದು. ಈ ಮರದ ಕೊಂಬೆಗಳನ್ನು ಸುಖಾಸುಮ್ಮನೆ ಸವರ್ಣೀಯರ ಶಿವರಾಜ ಮುರಿಯುತ್ತಿದ್ದ. ಅದನ್ನು ಪ್ರಶ್ನಿಸಿದ ದಲಿತ ದೇವೇಂದ್ರನನ್ನು ಅಲ್ಲೇ ಶಿವರಾಜ, ರಾಕೇಶ ಮುಂತಾದವರು ಥಳಿಸಿದರು. ಜಾತಿ ನಿಂದಿಸಿ ಬೈದಿದ್ದರು.

ಇಷ್ಟಕ್ಕೆ ನಿಲ್ಲದ ಸವರ್ಣೀಯರು ಅಂದು ರಾತ್ರಿ ಈ ಪ್ರಕರಣದ ಬಗ್ಗೆ ನ್ಯಾಯ ಪಂಚಾಯತಿ ಕರೆದಿದ್ದರು. ಮುಗ್ಧರಾದ ದಲಿತರು ಗುಂಪಾಗಿ ಪಂಚಾಯತಿಗೆ ತೆರಳಿದ್ದರು. ಊರಿನ ಮುಖಂಡರೆಲ್ಲಾ ಅಲ್ಲಿದ್ದು ತೀರ್ಮಾನ ಮಾಡುತ್ತಿರುವಾಗ ಈ ಮೊದಲೇ ಪೂರ್ವಯೋಜಿತವಾಗಿ ದೊಣ್ಣೆ, ಪೈಪು, ಕಲ್ಲುಗಳನ್ನು ತಂದಿದ್ದ ಸವರ್ಣೀಯರ ಗುಂಪೊಂದು ದಲಿತರ ಮೇಲೆ ಮಾರಣಾಂತಿಕ ಹಲ್ಲೆಯನ್ನು ಮಾಡಿತು. ದಲಿತರು ಹೆದರಿ ತಮ್ಮ ತಮ್ಮ ಮನೆಗಳನ್ನು ಹೊಕ್ಕಿದರೂ ಬಿಡದೆ ಹಿಂಬಾಲಿಸಿ ಥಳಿಸಲಾಯಿತು. ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದ ದಲಿತೆ ಶ್ರೀದೇವಮ್ಮ ಸೇರಿದಂತೆ ಆರು ಜನರಿಗೆ ಗಂಭೀರವಾಗಿ ಗಾಯಗಳಾಗಿ ಆಸ್ಪತ್ರೆ ಸೇರಿದರು. ಪೊಲೀಸ್ ಸ್ಟೇಷನ್ನಿನಲ್ಲಿ ದೂರು ದಾಖಲಾಯಿತು.

ಶಾಸಕರಾದ ಟಿ. ರಘುಮೂರ್ತಿಯವರೂ ಬಂದು ಸಾಂತ್ವನ ಹೇಳಿದ್ದರು. ಪೊಲೀಸರೂ ಒಂದು ತಿಂಗಳು ದಲಿತರಿಗೆ ರಕ್ಷಣೆ ಕೊಟ್ಟಿದ್ದರು ಆದರೆ ದಲಿತರಲ್ಲಿನ ಭಯ ಹೋಗಲಾಡಿಸಲು, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಪ್ಪಿಸಲು ಇವರಾರಿಗೂ ಸಾಧ್ಯವಾಗಿಲ್ಲ. ಸವರ್ಣೀಯರ ಮೇಲೆ ದೂರು ಕೊಟ್ಟಿದ್ದಕ್ಕಾಗಿ ದಲಿತರ ಮೇಲೆ ಸವರ್ಣೀಯರ ದ್ವೇಷ ಹೆಚ್ಚಾಗಿದೆ. ಪೊಲೀಸರು ಹೋದನಂತರ ಸಮಯಕ್ಕಾಗಿ ಕಾದು ಕುಳಿತಿದ್ದ ಸವರ್ಣೀಯರಿಗೆ ಆ ಸುಸಮಯ ಸಿಕ್ಕೇಬಿಟ್ಟಿತು.

ಕೋನಿಗರಹಳ್ಳಿಯ ದಲಿತೆ ಶ್ರೀದೇವಮ್ಮ ಕಳೆದ ಎರಡು ವರ್ಷಗಳಿಂದ ಟಿ.ಎನ್.ಕೋಟೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದರು. ದಿನಾಂಕ 5-11-2014 ರ ಬುಧವಾರ ಅಸ್ಪೃಶ್ಯತೆ ನಿವಾರಣೆಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಸ್ಪೃಶ್ಯತೆ ಆಚರಣೆ ಶಿಕ್ಷಾರ್ಹ ಅಪರಾಧವೆಂದು ಅಚ್ಚಾಗಿರುವ, ವಿವಿಧ ರೀತಿಯ ಅಸ್ಪೃಶ್ಯತೆ ಆಚರಣೆಗಳನ್ನು ತಿಳಿಸುವ ಕರಪತ್ರವೂ ತಯಾರಾಗಿತ್ತು. ಕೋನಿಗರಹಳ್ಳಿಯ ದಲಿತರು ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಾ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸುತ್ತಿದ್ದರು. ಮಾಹಿತಿ ತಿಳಿಸುವ ಆ ಕರಪತ್ರವನ್ನು ಗ್ರಾಮ ಪಂಚಾಯತಿಯ ಸೂಚನಾಫಲಕದಲ್ಲಿ ಶ್ರೀದೇವಮ್ಮನವರ ಗಂಡ ಕೋನಿಗರಹಳ್ಳಿಯ ನೀರುಗಂಟಿಯೂ ಆದ ಭೂತಪ್ಪ ಅಂಟಿಸಿದ್ದರು. ಅದನ್ನು ಕಂಡು ಸವರ್ಣೀಯ ತಿಪ್ಪೇಸ್ವಾಮಿ "ಯಾರನ್ನು ಕೇಳಿ ಈ ಕರಪತ್ರ ಅಂಟಿಸಿದ್ದೀಯ" ಎಂದು ಪ್ರಶ್ನಿಸಿ ಭೂತಪ್ಪನಿಗೆ ಥಳಿಸಿದ. ಈ ವಿಚಾರ ಇಲ್ಲಿಗೇ ನಿಲ್ಲದೆ ಶ್ರೀದೇವಮ್ಮನನ್ನು ಕರೆಸಿಕೊಂಡು ಅವರಿಗೆ ತಿಳಿಯದೇ ಒಂದು ಪತ್ರಕ್ಕೆ ಸುಮ್ಮನೆ ಸಹಿ ಹಾಕಿಸಿಕೊಂಡಿದ್ದರು. ಆದರೆ ಅದು ರಾಜೀನಾಮೆ ಪತ್ರವೆಂದು ನಂತರ ತಿಳಿದ ಶ್ರೀದೇವಮ್ಮ ರಾಜೀನಾಮೆ ವಾಪಸ್ಸು ಪಡೆಯಲು ಹತ್ತು ದಿನದ ಕಾಲಾವಕಾಶ ಇರುವುದರಿಂದ ರಾಜೀನಾಮೆ ವಾಪಸ್ಸು ಪಡೆದರು. ಇದನ್ನು ಸಹಿಸದ ಸವರ್ಣೀಯ ಮುಖಂಡರು ಗ್ರಾಮ ಪಂಚಾಯತಿಯ ಇತರ ಸದಸ್ಯರನ್ನು ಸಂಪರ್ಕಿಸಿ ಶ್ರೀದೇವಮ್ಮನವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆ ಮಾಡಿ ಅಧ್ಯಕ್ಷೆ ಹುದ್ದೆಯಿಂದ ಕೆಳಗಿಳಿಸಿದ್ದಾರೆ. ಭೂತಪ್ಪನನ್ನೂ ನೀರುಗಂಟಿ ಕೆಲಸದಿಂದ ತೆಗೆದುಹಾಕಿದ್ದಾರೆ.

ಈ ಮೇಲಿನ ಘಟನೆ ನಡೆದ ದಿನದಿಂದಲೇ ದಲಿತರನ್ನು ಎಲ್ಲಾ ಸವರ್ಣೀಯರೂ ತಮ್ಮ ಹೊಲಗದ್ದೆಗಳಲ್ಲಿ ಕೂಲಿಗೆ ಕರೆಯುತ್ತಿಲ್ಲ. ಹೊಟ್ಟೆಪಾಡಿನ ಕೆಲಸಕ್ಕಾಗಿ ದಲಿತರು ಅಕ್ಕಪಕ್ಕದ ಹಳ್ಳಿಗಳಿಗೆ ಹೋಗುತ್ತಿದ್ದಾರೆ. ತಮ್ಮ ಜಮೀನುಗಳ ಪಕ್ಕದಲ್ಲಿನ ಸಾರ್ವಜನಿಕ ರಸ್ತೆಯನ್ನೂ ಪ್ರವೇಶಿಸಲು ಬಿಡುತ್ತಿಲ್ಲ. ಹೆಣ್ಣು ಮಕ್ಕಳು ಇಷ್ಟು ದಿನ ಬಹಿರ್ದೆಸೆಗೆ ತೆರಳುತ್ತಿದ್ದ ಜಮೀನುಗಳಿಗೂ ಬಿಡುತ್ತಿಲ್ಲ. ದಲಿತ ಕೇರಿಗೆ ಬರುವ ನೀರಿನ ಪೈಪು ಸವರ್ಣೀಯರ ಕೇರಿಯಲ್ಲಿರುವುದರಿಂದ ನೀರಿನ ಸರಬರಾಜನ್ನು ಬೇಕಾಬಿಟ್ಟಿಯಾಗಿ ಬಿಡುತ್ತಿದ್ದಾರೆ. ರಾತ್ರಿ ಎರಡು ಗಂಟೆಗೆ ನೀರು ಬಿಡುತ್ತಿದ್ದಾರೆ ಎಂದು ದಲಿತರು ಹೇಳುತ್ತಾರೆ. ದಲಿತರ ಕಾಲೋನಿಯಲ್ಲಿರುವ ಶಾಲೆಗೆ ಈ ಹಿಂದೆ ಬರುತ್ತಿದ್ದ ಆರು ಸವರ್ಣೀಯ ಮಕ್ಕಳನ್ನು ಅವರ ಪೋಷಕರು ಬೇರೆ ಶಾಲೆಗೆ ವರ್ಗಾಯಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ದಲಿತರು ಮತ್ತೆ ಗುಲಾಮರಾಗಿ ತಮ್ಮ ಅಡಿಯಾಳಾಗಿ ಜೀವಿಸಬೇಕೆಂಬ ದುರಾಲೋಚನೆಯಿಂದ ಅಲ್ಲಿನ ಸವರ್ಣೀಯರು ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿ, ದಲಿತರ ಸಹಾಯಕ್ಕೆ ಹೋದವರಿಗೆ ದಂಡ ವಿಧಿಸಲಾಗುತ್ತದೆ ಎಂದು ಬೆದರಿಕೆ ಒಡ್ಡಿದ್ದಾರೆ. ಇದುವರೆಗೆ ಸರ್ಕಾರದ ಕಡೆಯಿಂದ ತಹಸೀಲ್ದಾರರು, ಸಮಾಜ ಕಲ್ಯಾಣ ಅಧಿಕಾರಿಗಳು ಎರಡು ಬಾರಿ ಭೇಟಿ ನೀಡಿ ದಲಿತರಿಗೆ ಜಮೀನು, ಮೂಲ ಸೌಕರ್ಯ ಕೊಡಿಸುವುದಾಗಿ ಭರವಸೆ ನೀಡಿ ತೆರಳಿದ್ದಾರೆ. ಪೊಲೀಸರು ಬಂದೋಬಸ್ತ್ ಮಾಡಿದಿಲ್ಲ. ಈ ಸಂದರ್ಶನಕ್ಕೆ ಹೋಗುವ ಹಿಂದಿನ ದಿನ ಒಬ್ಬ ಸವರ್ಣೀಯ ದಲಿತರ ಕೇರಿ ಬಳಿ ಬಂದು "ನನ್ನ ಐದು ಎಕರೆ ಜಮೀನು ಹೋದರೂ ಚಿಂತೆಯಿಲ್ಲ, ನಿಮ್ಮಲ್ಲಿ ಯಾರನ್ನಾದರು ಕೊಲೆ ಮಾಡಿ ಜೈಲಿಗೆ ಹೋಗುತ್ತೇನೆ" ಎಂದು ಬೆದರಿಕೆಯೊಡ್ಡಿದ್ದನ್ನು ದಲಿತರು ಭಯದಿಂದಲೇ ಹೇಳಿದರು.

ಸಮಾಜ ಕಲ್ಯಾಣ ಅಧಿಕಾರಿಗಳು "ಯಾಕೆ ದೂರು ಕೊಡಲಿಲ್ಲ?" ಎಂದು ಕೇಳಿದರೆ ಅಲ್ಲಿನ ದಲಿತರು "ನಮಗೆ ಪ್ರಾಣ ಭಯ" ಎಂದು ಹೇಳುತ್ತಿದ್ದಾರೆ. "ಗುಂಪುಗುಂಪಾಗಿ ಬರುವ ಸವರ್ಣೀಯರು ದಲಿತ ಕೇರಿಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಮನೆಗಳಿಗೆ ನುಗ್ಗುತ್ತಾರೆ" ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ.



ಕೋನಿಗರಹಳ್ಳಿಯ ದಲಿತರ ಗುಡಿಸಲುಗಳು




ಅಧಿಕಾರಿಗಳ ಭೇಟಿ

"ನಾವು ಅವರ ಹಬ್ಬಗಳಿಗೆ ತಮಟೆ ಬಡಿಯಾಂಗಿಲ್ಲ ಸಾರ್; ಅವ್ರ ಹಬ್ಬಕ್ಕ ಅವ್ರೆ ಬಡ್ಕಳ್ಳಿ" ಎಂದು ಹೇಳುವ ದಲಿತರ ಸ್ವಾಭಿಮಾನ ಸವರ್ಣೀಯರ ನಿದ್ದೆಗೆಡಿಸಿರುವುದಂತು ನಿಜ. ಆ ಕಾರಣಕ್ಕೆ ದಿನೇದಿನೇ ಭಯದಲ್ಲಿ ದಲಿತರು ಬದುಕುತ್ತಿದ್ದರೂ ತಮ್ಮ ಸ್ವಾಭಿಮಾನವನ್ನು ಬಿಟ್ಟು ಕೊಡಲು ತಯಾರಿಲ್ಲ. ಮುರುಘಾ ಮಠದ ಸ್ವಾಮೀಜಿಗಳು ಭೇಟಿ ಕೊಟ್ಟು ರಾಜಿಯಾಗಲು ತಿಳಿಸಿದರೂ ಪದೇ ಪದೇ ಥಳಿಸಿಕೊಂಡು ರಾಜಿಯಾಗಿರುವ ದಲಿತರು ಈಗ ರಾಜಿಯಾಗಲು ಒಪ್ಪುತ್ತಿಲ್ಲ. ಕೆಲವು ಸ್ಥಳೀಯ ದಲಿತ ಸಂಘಟನೆಗಳು ದಲಿತರಿಗೆ ಧೈರ್ಯ ತುಂಬುವ ಕೆಲಸ ಮಾಡಿವೆಯಾದರೂ ಆ ಬಲ ಸಾಲುತ್ತಿಲ್ಲ. ಕೋನಿಗರಹಳ್ಳಿಯ ದಲಿತರಿಗೆ ಈಗ ದಲಿತ ಸಂಘಟನೆಗಳ ಬಲ ಬೇಕಾಗಿದೆ.

ವೇದಿಕೆಗಳಲ್ಲಿ ಸ್ವಾಭಿಮಾನಿಗಳಾಗಬೇಕು ಎಂದು ಭಾಷಣ ಬಿಗಿಯುವ ದಲಿತ ಮುಖಂಡರು ಈಗಾಗಲೇ ಸ್ವಾಭಿಮಾನದ ಕಡೆ ಹೆಜ್ಜೆ ಇಟ್ಟಿರುವ ಕೋನಿಗರಹಳ್ಳಿಯ ದಲಿತರ ಪರವಾಗಿ ನಿಲ್ಲಬೇಕಿದೆ. ಅವರಿಗೆ ನ್ಯಾಯ ಒದಗಿಸಿಕೊಡಬೇಕಿದೆ. "ಈ ನಾಲ್ಕು ಜಾತಿಯವರೂ ನಮ್ಮ ವಿರುದ್ಧ ಒಂದಾಗಲಿಕ್ಕೆ ನಾವು ಮಾಡಿರುವ ಪಾಪವಾದರೂ ಏನು ಸಾರ್?" ಎಂದು ಪ್ರಶ್ನಿಸುತ್ತಿರುವ ದಲಿತ ಯುವಕ ಹರೀಶನಿಗೆ ಇಡೀ ನಾಗರಿಕ ಸಮಾಜ ಉತ್ತರಿಸಬೇಕಿದೆ.

● ವಿಕಾಸ ಆರ್. ಮೌರ್ಯ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಪೆಟ್ರೋಲ್ ಕಳ್ಳ ಆಂಡರ್‌ಸನ್

ಯೆಮ್ಮೆಯದೊಡ್ಡಿ ಈಗಿನ ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಹತ್ತಿರದ ಒಂದು ಹಳ್ಳಿ. ಬಾಬಾಬುಡನ್‌ಗಿರಿ ಬೆಟ್ಟಗಳ ಪೂರ್ವಕ್ಕೆ ಇದ್ದ ಹೊಗರಕಾನು ಬೆಟ್ಟಗಳ ತಪ್ಪಲಲ್ಲಿ ಈ ಹಳ್ಳಿ ಇತ್ತು. ಯೆಮ್ಮೆಯದೊಡ್ಡಿಯ ದಕ್ಷಿಣದಲ್ಲಿ ಆಗ 'ಮಡಕ' ಎಂದು ಕರೆಯಲಾಗುತ್ತಿದ್ದ ದೊಡ್ಡ ಕೆರೆಯಿತ್ತು. ಕೆರೆಯ ಸುತ್ತ ಅರಣ್ಯದ ಹೊದಿಕೆಯಿದ್ದ ಗುಡ್ಡಬೆಟ್ಟಗಳಿದ್ದವು. ಈ ಬೆಟ್ಟಗಳಿಂದ ನಾಲೆಯೊಂದು ಹರಿಯುತ್ತಿದ್ದು ಅದು ಹತ್ತು ಮೈಲಿ ದೂರದಲ್ಲಿದ್ದ ಬೀರೂರಿನ ಉತ್ತರಕ್ಕೆ ಮೂರು ಮೈಲಿ ದೂರದ ಇನ್ನೊಂದು ಕೆರೆಗೆ ಸೇರುತ್ತಿತ್ತು.

ಇಲ್ಲಿನ ಅರಣ್ಯ ಪ್ರದೇಶ ಕಾಡುಪ್ರಾಣಿಗಳಿಂದ ಶ್ರೀಮಂತವಾಗಿತ್ತು. ಅಷ್ಟೇ ಅಲ್ಲದೆ ಸುತ್ತಲಿನ ಹಳ್ಳಿಯ ಜನರೂ ತಮ್ಮ ಸಾಕುಪ್ರಾಣಿಗಳನ್ನು ಮೇಯಿಸಲು ಹಗಲೆಲ್ಲಾ ಕಾಡಿಗೆ ಅಟ್ಟುತ್ತಿದ್ದರು. ಹಾಗಾಗಿ ಇಲ್ಲಿ ಹುಲಿಗಳ ಸಂಖ್ಯೆ ಸಾಕಷ್ಟಿತ್ತು. ಮೊದಮೊದಲು ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದ ಹುಲಿಗಳು ದನಗಾಹಿಗಳ ನಿರ್ಲಕ್ಷ್ಯದಿಂದಾಗಿ ಸುಲಭವಾಗಿ ಸಿಗುತ್ತಿದ್ದ ಸಾಕುಪ್ರಾಣಿಗಳನ್ನೂ ಕೊಂದು ತಿನ್ನಲು ಪ್ರಾರಂಭಿಸಿದ್ದವು. ಇಲ್ಲಿ ಪ್ರತಿನಿತ್ಯ ಹುಲಿಗಳು ಯಾವುದಾದರೂ ಹಸುವನ್ನೋ, ಹೋರಿಯನ್ನೋ ಕೊಂದ ಸಮಾಚಾರವಾಗಲೀ ಅಥವಾ ಚಿರತೆಗಳು ಕರುಗಳು, ಕುರಿಗಳು, ನಾಯಿಗಳನ್ನು ಬೇಟೆಯಾಡಿದ ಸುದ್ದಿಯಾಗಲೀ ಇದ್ದೇ ಇರುತ್ತಿತ್ತು. ಹುಲಿಗಳು ಕೆಲವೊಮ್ಮೆ ತಮ್ಮ ಕಿರಿಯ ಸೋದರರಾದ ಚಿರತೆಗಳ ಮೇಲೂ ಆಕ್ರಮಣ ಮಾಡುತ್ತಿದ್ದುದರಿಂದ ಚಿರತೆಗಳು ತಮ್ಮ ಕಾರ್ಯಕ್ಷೇತ್ರವನ್ನು ಊರಿನ ಹೊರವಲಯಕ್ಕೆ ಸೀಮಿತಗೊಳಿಸಿಕೊಂಡಿರುತ್ತಿದ್ದವು.

1946ನೇ ಇಸವಿಯ ಮೊದಲ ಭಾಗದಲ್ಲಿ ವಿಭಿನ್ನ ಸ್ವಭಾವದ ಎಳೆಯ ಗಂಡು ಹುಲಿಯೊಂದು ಈ ಪ್ರದೇಶದಲ್ಲಿ ಕಾಣಿಸಿಕೊಂಡಿತು. ಮೊದಮೊದಲು ಈ ಹುಲಿ ಬೀರೂರಿನ ಹೊರವಲಯದಲ್ಲಿ ಸಂಜೆ ಮನೆಗೆ ಹಿಂತಿರುಗುತ್ತಿದ್ದ ಪ್ರಾಣಿಗಳ ಗುಂಪಿನಿಂದ ಕರುಗಳು ಮತ್ತು ಕುರಿಗಳನ್ನು ಬೇಟೆಯಾಡುತ್ತಿತ್ತು. 'ತೆಂಡು' ಎಂದು ಕರೆಯಲ್ಪಡುತ್ತಿದ್ದ ದೊಡ್ಡಜಾತಿಯ ಚಿರತೆಗಳು ಹುಲಿಯಂತೆ ಸಾಕುಪ್ರಾಣಿಗಳ ಕುತ್ತಿಗೆಯನ್ನು ಮುರಿದು ಕೊಲ್ಲುತ್ತಿದ್ದುದರಿಂದ ಜನರು ಈ ದುಷ್ಟಮೃಗ ಚಿರತೆಯಾಗಿರಬೇಕು ಎಂದುಕೊಂಡರು. ಒಮ್ಮೆ ದನಗಾಹಿಯೊಬ್ಬ ಈ ಹುಲಿ ಕರುವೊಂದನ್ನು ಬೇಟೆಯಾಡುವುದನ್ನು ಕಣ್ಣಾರೆ ನೋಡಿದ ಮೇಲೆ ಜನರಿಗೆ ಯಾವ ಅನುಮಾನಗಳು ಉಳಿಯಲಿಲ್ಲ.

ಈ ಎಳೆಯ ಹುಲಿ ಬಹಳ ಬೇಗ ಬೆಳೆದು ಪ್ರೌಢ ವಯಸ್ಸಿಗೆ ಬಂದಿತು. ಅದನ್ನು ಬೇಟೆಯಾಡಲು ಯತ್ನಿಸಿದ ಇದೇ ಹಳ್ಳಿಯ ಮತ್ತು ಹೊರಗಿನಿಂದ ಬಂದ ಶಿಕಾರಿಗಳಿಗೆ ಆಶ್ಚರ್ಯಕರವಾಗಿ ಚಳ್ಳೆಹಣ್ಣು ತಿನ್ನಿಸುತ್ತಾ ಅದು ತನ್ನ ಧೈರ್ಯ ಮತ್ತು ಕುತಂತ್ರವನ್ನು ಬೆಳೆಸಿಕೊಳ್ಳುತ್ತಲೇ ಹೋಯಿತು. ವಾರದಲ್ಲಿ ಎರಡು ಮೂರು ಬಾರಿ ಅತ್ಯುತ್ತಮ ಜಾತಿಯ ಪ್ರಾಣಿಗಳನ್ನು ಕೊಲ್ಲುತ್ತಾ ಸುತ್ತಲಿನ ದನಗಾಹಿಗಳಿಗೆ ಬಹುದೊಡ್ಡ ಕಂಟಕವಾಗಿ ಮಾರ್ಪಟ್ಟಿತ್ತು.

1948ರ ಕೊನೆಯಲ್ಲಿ ನಾನು ಕೆಲವು ಸ್ನೇಹಿತರೊಂದಿಗೆ ಯೆಮ್ಮೆಯದೊಡ್ಡಿಗೆ ಭೇಟಿಕೊಟ್ಟಿದ್ದೆ. ಆಲ್ಫೀ ರಾಬರ್ಟ್‌ಸನ್ ಎನ್ನುವ ನನ್ನೊಬ್ಬ ಸ್ನೇಹಿತನಿಗೆ ಒಂದು ಹುಲಿಯ ಚರ್ಮವನ್ನು ಉಡುಗೊರೆಯಾಗಿ ಕೊಡುವ ಉದ್ದೇಶ ನನ್ನದಾಗಿತ್ತು. ಸಾಕುಪ್ರಾಣಿಗಳಿಗೆ ಯಮದೂತನಾಗಿದ್ದ ಈ ಹುಲಿಯ ಸಮಾಚಾರವನ್ನು ನಾನು ಸಾಕಷ್ಟು ಕೇಳಿದ್ದೆ. ಬೀರೂರಿನಲ್ಲಿ ನಾವು ಕೆಲವು ದಿನ ಕ್ಯಾಂಪ್ ಮಾಡಿದರೆ ಅದನ್ನು ಸುಲಭವಾಗಿ ಬೇಟೆಯಾಡಬಹುದು ಎಂದು ನನಗೆ ಖಾತ್ರಿಯಿತ್ತು.

ನಾವೆಲ್ಲಾ ಒಂದು ಸಂಜೆ ಬೀರೂರಿಗೆ ಹೊರಟೆವು. ದುರಾದೃಷ್ಟದಿಂದ ತಿಪಟೂರಿನ ಬಳಿ ನಮ್ಮ ಕಾರು ಸಣ್ಣ ಅಪಘಾತಕ್ಕೊಳಗಾಗಿ ಪೆಟ್ರೋಲ್ ಟ್ಯಾಂಕ್‌ಗೆ ತೂತುಬಿದ್ದ ಕಾರಣ ಅದರಲ್ಲಿದ್ದ ಪೂರ್ಣ ಇಂಧನ ಹೊರಗೆ ಚೆಲ್ಲಿಹೋಯಿತು. ಸ್ಟೋವ್‌ನ್ನು ಉರಿಸಲು ತಂದಿದ್ದ ಇಂಧನವಿದ್ದ ಬಾಟಲಿಯನ್ನು ಕಾರ್ಬೊರೇಟರ್‌ಗೆ ಜೋಡಿಸಿಕೊಂಡು ಕಾರನ್ನು ತಿಪಟೂರಿನವರೆಗೆ ತಂದೆವು. ಇಲ್ಲಿ ಕಾರಿನ ಪೆಟ್ರೋಲ್‌ಟ್ಯಾಂಕ್ ದುರಸ್ತಿಯೇನೋ ಆಯಿತು. ಆದರೆ ಅಲ್ಲಿನ ಬಂಕ್‌ನಲ್ಲಿ ಪೆಟ್ರೋಲ್ ಖಾಲಿಯಾಗಿತ್ತು. ಅರಸೀಕೆರೆಯವರೆಗೆ ಹೋಗುವಷ್ಟಾದರೂ ಇಂಧನ ಹೊಂದಿಸುವ ನಮ್ಮೆಲ್ಲಾ ಪ್ರಯತ್ನಗಳು ವಿಫಲವಾದಾಗ ನಾನು ಹೊಸ ಉಪಾಯವನ್ನು ಹುಡುಕಿದೆ. ಆಗ ಬೆಳಗಿನ ಜಾವ 3.30 ಆಗಿದ್ದು ಇಡೀ ಊರು ಮಲಗಿತ್ತು. ಊರಿನ ರಸ್ತೆಗಳನ್ನು ಹುಡುಕಿ ಒಂದು ಕಡೆ ನಿಂತಿದ್ದ ಕಾರಿನಿಂದ ಸ್ವಲ್ಪ ಪೆಟ್ರೋಲನ್ನು ಕದ್ದುಬಿಟ್ಟೆ! ಅದನ್ನು ಉಳಿದಿದ್ದ ಸ್ಟೋವ್ ಇಂಧನಕ್ಕೆ ಬೆರೆಸಿ ಅರಸೀಕೆರೆ ತಲುಪಿ ಅಲ್ಲಿ ನಮ್ಮ ಪೆಟ್ರೋಲ್ ಟ್ಯಾಂಕ್ ಭರ್ತಿಮಾಡಿಕೊಂಡೆವು.

ಇಷ್ಟೆಲ್ಲಾ ಆಗಿ ಬೀರೂರನ್ನು ಸೇರುವಾಗ ಬೆಳಗ್ಗೆ 7.30 ಆಗಿತ್ತು. ಅಲ್ಲಿಂದ ಅರಣ್ಯ ಪ್ರದೇಶದ ಕಡೆ ಎರಡು ಮೈಲು ಹೋದಾಗ ಒಂದು ಹೊಲದಲ್ಲಿ ಹದ್ದುಗಳು ಗುಂಪುಗೂಡಿದ್ದವು. ನನ್ನ ಸ್ನೇಹಿತ ಅದರ ಫೋಟೋ ತೆಗೆಯುತ್ತಿರುವಾಗ ನಾನು ಕೆಳಗಿಳಿದು ಆ ಕಡೆ ಹೋಗಿ ನೋಡಿದೆ. ಅಲ್ಲಿ ಹೋರಿಯೊಂದನ್ನು ಚಿರತೆ ಕೊಂದುಹಾಕಿತ್ತು.

ಚಿರತೆಯನ್ನು ಬಿಟ್ಟು ಹುಲಿಯ ಬೆನ್ನು ಹಿಡಿದಿದ್ದು

ಹುಲಿ ತನ್ನ ಬೇಟೆಯ ಕುತ್ತಿಗೆಯನ್ನು ಮುರಿದು ಕೊಂದುಹಾಕಿ ನಂತರ ಗುದದ್ವಾರದ ಮೂಲಕ ಅದರ ಹೊಟ್ಟೆ ಮತ್ತು ಕರುಳುಗಳನ್ನು ಹೊರತೆಗೆದು ದೂರಕ್ಕೆ ಎಸೆಯುತ್ತದೆ. ಕೊಂದ ಪ್ರಾಣಿಗಳ ಹೊಟ್ಟೆಯಲ್ಲಿರುವ ಆಹಾರ ಮತ್ತು ಮಲವನ್ನೆಲ್ಲಾ ಸೇರಿಸಿಕೊಂಡು ಹುಲಿ ತಿನ್ನುವುದಿಲ್ಲ. ಆದರೆ ಇಲ್ಲಿ ಸತ್ತು ಬಿದ್ದಿರುವ ಹೋರಿಯ ಕುತ್ತಿಗೆಯಲ್ಲಿ ಹಲ್ಲುಗಳ ಗುರುತಿದ್ದು ಬೆನ್ನುಮೂಳೆ ಮುರಿದಿರಲಿಲ್ಲ, ಅಲ್ಲದೆ ಹೊಟ್ಟೆಯ ಹಿಂದಿನ ಭಾಗವನ್ನು ಮಾತ್ರ ತಿನ್ನಲಾಗಿತ್ತು. ಹಾಗಾಗಿ ಈ ಹಸುವಿನ ಬೇಟೆಗಾರ ಚಿರತೆ ಎನ್ನುವುದರಲ್ಲಿ ಸಂದೇಹವಿರಲಿಲ್ಲ.



ನಮಗೆ ತಕ್ಷಣ ಬೇಟೆಯಾಡಲು ಒಂದು ಪ್ರಾಣಿ ದೊರೆತದ್ದಕ್ಕೆ ಖುಷಿಯಾಗಿತ್ತು. ಹೋರಿಯ ಶವವನ್ನು ಎಲೆಗಳಿಂದ ಮುಚ್ಚಿ ಹದ್ದುಗಳಿಂದ ಅದನ್ನು ರಕ್ಷಿಸಿದೆವು. ನಾನು ಹತ್ತಿರದ ಪೊದೆಗಳಲ್ಲಿ ಸಂಜೆ ಬಂದು ಕುಳಿತುಕೊಳ್ಳಲು ಅನುಕೂಲವಾಗುವಂತೆ ಒಂದು ಮರೆಯನ್ನು ನಿರ್ಮಾಣಮಾಡಿದೆ. ಹಿಂದಿನ ರಾತ್ರಿ ನಮಗಾಗಿದ್ದ ತೊಂದರೆಗಳಿಗೆ ಇವತ್ತು ಪರಿಹಾರ ಸಿಗಬಹುದು ಎನ್ನಿಸಿತು.

ಸಂಜೆ 5 ಗಂಟೆಗೆ ನಾವು ಮತ್ತೆ ಆ ಸ್ಥಳಕ್ಕೆ ಹಿಂತಿರುಗಿದೆವು. ಶವದ ಮೇಲಿದ್ದ ಎಲೆಗಳನ್ನು ತೆಗೆದ ಮೇಲೆ ನನ್ನ ಸ್ನೇಹಿತ ಆಲ್ಫೀ ಚಿರತೆಯ ಬೇಟೆಗಾಗಿ ನಾವು ನಿರ್ಮಿಸಿದ್ದ ಮರೆಯಲ್ಲಿ ಕುಳಿತಕೊಂಡನು. ನಾನು ಇನ್ನೇನು ಬೀರೂರಿಗೆ ಹೊರಡಬೇಕು ಎನ್ನುವಷ್ಟರಲ್ಲಿ ಉಸಿರುಬಿಗಿಹಿಡಿದು ಓಡು ಬಂದ ದನಗಾಹಿಯೊಬ್ಬ ನಮಗೆ ಒಂದು ಹೊಸ ಸಮಾಚಾರವನ್ನು ತಿಳಿಸಿ ನಾವಿದ್ದ ಸ್ಥಳದಿಂದ ಒಂದೇ ಮೈಲು ದೂರದಲ್ಲಿ ಅರ್ಧಗಂಟೆಯ ಹಿಂದೆ ಹುಲಿಯೊಂದು ದೊಡ್ಡ ಹಸುವೊಂದನ್ನು ಕೊಂದುಹಾಕಿತ್ತು.

ಖಾತ್ರಿಯಾಗಿ ಬೇಟೆಯಾಡಬಹುದಾದ ಚಿರತೆ ಅಥವಾ ಹುಲಿಬೇಟೆ ಒಂದು ಪ್ರಯತ್ನ–ಇವೆರಡರಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯ ಆಲ್ಫೀಗೆ ನೀಡಿದೆ. ಅವನು ನಾನು ಮಾಡಿಕೊಳ್ಳಬಹುದಾಗಿದ್ದ ಆಯ್ಕೆ ಅಂದರೆ ಹುಲಿಬೇಟೆ- ಗೆ ಬೆಂಬಲ ಸೂಚಿಸಿದ. ಹಾಗಾಗಿ ನಾವು ನ[illegible] ಸರಂಜಾಮುಗಳನ್ನು ಕಾರಿಗೆ ಹಾಕಿಕೊಂಡು ಅಲ್ಲಿಂದ ಹೊರಟೆವು. ದನಗಾ[illegible] ಹಸು ಸತ್ತು ಬಿದ್ದಿದ್ದ ಜಾಗಕ್ಕೆ ನಮ್ಮನ್ನು ಕರೆತಂದ.

ಅದು ಹಾಲನ್ನು ಕೊಡುತ್ತಿದ್ದ ಅತ್ಯುತ್ತಮ ಜಾತಿಯ ಕಪ್ಪು ಹಸುವಾಗಿ[illegible] ಹುಲಿ ಹಸುವಿನ ಕುತ್ತಿಗೆಯನ್ನು ಮುರಿದು ಹಾಕಿದ್ದು ಮೂಗಿನಿಂದ ಇ[illegible] ನೊರೆ ಬರುತ್ತಿತ್ತು. ದನಗಾಹಿಗಳು ಮತ್ತು ಇತರ ಪ್ರಾಣಿಗಳ ಗಲಾಟೆಯಿಂದ ಹುಲಿ ಶವದ ಚಿಕ್ಕ ಭಾಗವನ್ನೂ ತಿನ್ನುವ ಮೊದಲೇ ಅಲ್ಲಿಂದ ಓಡಿಹೋಗಿ ಆಗಲೇ 6 ಗಂಟೆಯಾಗಿದ್ದು ಬಹಳ ಬೇಗ ಕತ್ತಲಾಗುತ್ತಿತ್ತು. ಸುತ್ತಲಿನ ಪ್ರದೇಶ[illegible] ಯಾವ ಮರಗಳೂ ಇರಲಿಲ್ಲ. ಹಾಗಾಗಿ ನಾವು ನೆಲದ ಮೇಲಿನಿಂದ ಹುಲಿಯನ್ನು ಬೇಟೆಯಾಡುವ ಅಪಾಯವನ್ನು ತೆಗೆದುಕೊಳ್ಳಲು ಸಿದ್ಧರಿಲ್ಲದಿ[illegible] ಹಸುವಿನ ಶವವನ್ನು ಹಾಗೆಯೇ ಬಿಟ್ಟು ಹೊರಡಬೇಕಾಗಿತ್ತು. ಆದರೆ ಅಲ್ಲಿ[illegible] ಹೊರಡಲು ಆಲ್ಫೀ ಒಪ್ಪಲಿಲ್ಲ. ಹಾಗಾಗಿ ಹತ್ತಿರದ ಪೊದೆಯೊಂದರ ಕೆ[illegible] ರೆಂಬೆಗಳನ್ನು ಮುರಿದು ಕುಳಿತುಕೊಳ್ಳಲು ಮರೆಯನ್ನು ಸಿದ್ಧಮಾಡಿದೆ. 6[illegible] ಗಂಟೆಗೆ ನಾವು ಆ ಪೊದೆಯಲ್ಲಿ ಕುಳಿತುಕೊಂಡೆವು.

ಹದಿನೈದು ನಿಮಿಷದಲ್ಲಿ ಪೂರ್ಣ ಕತ್ತಲಾಗಿ 20 ಗಜ ದೂರದ[illegible] ಹಸುವಿನ ಶವ ಕಾಣುತ್ತಲೇ ಇರಲಿಲ್ಲ. ಅವತ್ತು ಚಂದ್ರನ ಬೆಳಕಿರಲಿಲ್ಲ ಮ[illegible] ನಕ್ಷತ್ರಗಳ ಮಂದ ಪ್ರಕಾಶ ಅಷ್ಟು ದೂರದವರೆಗೆ ಪಸರಿಸುತ್ತಿರಲಿಲ್ಲ.

ನರಿಗಳ ನರಿಬುದ್ಧಿ!

ಸುಮಾರು ಒಂದು ಗಂಟೆಯ ನಂತರ ಅರ್ಧ ಮೈಲು ದೂರದಲ್ಲಿ ಒ[illegible] ನರಿಯೊಂದರ ವಿಚಿತ್ರ ಕೂಗು ಕೇಳಿಸಿತು. ಕಾಡಿನ ವಿಚಿತ್ರ ಪ್ರಾಣಿಯ[illegible] ನರಿಯ ವರ್ತನೆಯ ಬಗೆಗೆ ಸಾಕಷ್ಟು ಜನ ಬರೆದಿದ್ದಾರೆ. ನರಿಗಳು ಸಾಮಾನ್ಯ[illegible] ಗುಂಪುಗಳಲ್ಲಿ ಊರಿನ ಹೊರವಲಯಗಳಲ್ಲಿ ವಾಸಿಸುತ್ತವೆ. ತಿಂದು ಬಿಸಾಕಿ[illegible] ಹಳಸಲು ಮಾಂಸಾಹಾರವನ್ನು ಹುಡುಕಿಕೊಂಡು ರಾತ್ರಿಯ ವೇಳೆ [illegible] ಊರಿನ ಸುತ್ತಲಿನ ಪ್ರದೇಶಗಳೊಳಗೆ ಬರುತ್ತವೆ. ಗುಂಪಿನ ಮುಖಂಡ [illegible] ಕೂಗಿದೊಡನೆ ಇತರ ನರಿಗಳೂ ಒಟ್ಟಾಗಿ ಕೂಗಿ ಇಲ್ಲಿನ ಹಳ್ಳಿಗರಿಗೆ ಪರಿಚಿತ[illegible] ವಿಶಿಷ್ಟ ಸದ್ದನ್ನು ಉಂಟುಮಾಡುತ್ತವೆ.


ಆದರೆ ಒಂಟಿ ನರಿ ಮಾತ್ರ ವಿಭಿನ್ನವಾಗಿ ಕೂಗುವುದಲ್ಲದೆ ಗು[illegible] ನರಿಗಳಂತೆ ವರ್ತಿಸುವುದಿಲ್ಲ. ಇದರಿಂದಾಗಿ ಇವುಗಳ ಬಗೆಗೆ ಸಾಕಷ್ಟು ದಂತಕ[illegible] ಮತ್ತು ಮೂಢನಂಬಿಕೆಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಎರಡು ರೀ[illegible] ಚಿಂತನೆಗಳನ್ನು ಗುರುತಿಸಬಹುದು. ಮೊದಲನೆಯದರ ಪ್ರಕಾರ ಒಂಟಿ [illegible] ತನ್ನ ವಿಭಿನ್ನ ಕೂಗಿನಿಂದ ಹುಲಿ ಅಥವಾ ಚಿರತೆಗಳನ್ನು ಆಕರ್ಷಿಸು[illegible] ನಂತರ ಅವುಗಳನ್ನು ತಾನು ನೋಡಿ ಇಟ್ಟಿರುವ ವನ್ಯಮೃಗದ [illegible] ಕರೆದೊಯ್ಯುತ್ತದೆ. ದುಷ್ಟಪ್ರಾಣಿಗಳು ಆ ಬೇಟೆಯನ್ನು ಕೊಂದು ತಿಂದ ನ[illegible] ಮಿಕ್ಕಿರುವುದರಲ್ಲಿ ನರಿ ತನ್ನ ಹೊಟ್ಟೆಯನ್ನು ತುಂಬಿಕೊಳ್ಳುತ್ತದೆ. ಹೀಗೆ [illegible] ಮಾಂಸಾಹಾರಿ ಪ್ರಾಣಿಗಳೊಡನೆ ಒಂದು ವಿಚಿತ್ರ ಪಾಲುದಾರಿಕೆ ನಡೆಸು[illegible] ಎರಡನೆಯ ಚಿಂತನೆಯ ಪ್ರಕಾರ ಒಂಟಿನರಿ ಒಂದು ಮಾಂಸಾಹಾರಿ ಪ್ರಾಣಿ[illegible] ಗುರುತಿಸಿಕೊಂಡು ಅದನ್ನು ಸುರಕ್ಷಿತವಾಗಿರುವ ದೂರದಿಂದ ಹಿಂಬಾಲಿಸು[illegible] ಇರುತ್ತದೆ. ಆ ಮಾಂಸಾಹಾರಿ ತಿಂದು ಮಿಕ್ಕಿರುವುದರಲ್ಲಿ ನರಿ ತನ್ನ ಹಸಿ[illegible] ಹಿಂಗಿಸಿಕೊಳ್ಳುತ್ತದೆ.

ಮೇಲಿನ ಎರಡು ಚಿಂತನೆಗಳಲ್ಲಿ ಯಾವುದೇ ಸರಿಯಾಗಿದ್ದರೂ, ಒಂಟಿನ[illegible] ಈ ರೀತಿಯ ಕೂಗು ಹತ್ತಿರದಲ್ಲಿ ಚಿರತೆ ಅಥವಾ ಹುಲಿ ಇರುವ[illegible] ಸೂಚನೆಯಾಗಿತ್ತು. ಇದು ಭಾರತದ ಕಾಡುಗಳ ತಿರುಗಾಟದಲ್ಲಿ ನನ್ನ ಅನು[illegible] ಕೂಡ ಬಂದಿತ್ತು.

ಅಂದಮೇಲೆ ಸದ್ಯದಲ್ಲಿಯೇ ಹುಲಿಯ ಆಗಮನ ಖಚಿತವಾಗಿತ್ತು. ಸು[illegible] ಹತ್ತು ನಿಮಿಷಗಳ ನಂತರ ಹುಲಿ ಶವದ ಹತ್ತಿರ ಬರುತ್ತಿರುವ ಸದ್ದು[illegible] ಕೇಳಿಸಿತು. ನಾನು ಆಲ್ಫೀಗೆ ತಿವಿದು ಸೂಚನೆ ನೀಡಿದೆ. ಕೆಲವೇ ಕ್ಷಣ[illegible] ಪೊದೆಗಳನ್ನು ಮುರಿದ ಮತ್ತು ಏನನ್ನೋ ಎಳೆದ ಸದ್ದು ಕೇಳಿಸಿತು.

ಆಲ್ಫೀ ಟಾರ್ಚ್‌ನ್ನು ಹೊತ್ತಿಸಿ ಬೆಳಕು ಹಾಯಿಸಿದ. ದುರಾದೃಷ್ಟವ[illegible] ಅವನು ಹುಲಿಯಿದ್ದ ಸ್ಥಳವನ್ನು ತಪ್ಪಾಗಿ ಗುರುತಿಸಿ ಟಾರ್ಚ್‌ನ ಬೆ[illegible] ಶವವಿದ್ದ ಸ್ಥಳದಿಂದ ಕೊಂಚ ಎಡಕ್ಕೆ ಹಾಯಿಸಿದ್ದ. ಹುಲಿಗೆ ಇಷ್ಟು [illegible] ಸೂಚನೆ ಸಾಕಾಗಿತ್ತು. "ವೂಫ್.." ಎನ್ನುವ ಘರ್ಜನೆಯೊಂದಿಗೆ ಅದು ಪೊ[illegible] ಮರೆಯಲ್ಲಿ ನೆಗೆದು ಮಾಯವಾಯಿತು.

(ಮುಂದುವರೆಯುವುದು)




ಕಂಬಳ ನಿಜಕ್ಕೂ ಜಾನಪದ ಕ್ರೀಡೆಯೇ?

ಸುಪ್ರೀಂ ಕೋರ್ಟ್‌ನ ಆದೇಶದನ್ವಯ ಕಂಬಳವನ್ನು ...ಷೇಧಿಸಿದಾಗ ಸ್ವಘೋಷಿತ ಜಾನಪದ ಪ್ರೇಮಿಗಳೆಲ್ಲಾ ...ಮೇ ಕಳಚಿ ಬಿದ್ದಂತಾಡುತ್ತಿದ್ದರು. "ಜಲ್ಲಿಕಟ್ಟು, ಕುದುರೆ .., ಕಂಬಳ ಇವೆಲ್ಲಾ ಒಂದೇ ಅಲ್ಲ, ರೈತರ ಕ್ರೀಡೆಯನ್ನು ...ಷೇಧಿಸಿ ಅನ್ಯಾಯ ಮಾಡಲಾಗುತ್ತಿದೆ. ಕಂಬಳ ಒಂದು ...ರ್ಮಿಕ ಕ್ರೀಡೆ, ಹಿಂಸೆಯಿಲ್ಲದೇ ಕಂಬಳ ನಡೆಸುತ್ತೇವೆ...." ...ಹೀಗೆ ಏನೇನೋ ಅಸಂಬದ್ಧ ಹೇಳಿಕೆಗಳನ್ನು ...ಗಮಾನ್ಯ ಪ್ರಭುಗಳು ನೀಡುತ್ತಿದ್ದಾರೆ. ಅಷ್ಟಕ್ಕೂ ಕಂಬಳ ...ವು ಜಾನಪದ ಕ್ರೀಡೆಯೇ? ಒಂದು ಕ್ರೀಡೆಯನ್ನು ...ಪದ ಕ್ರೀಡೆ ಎನ್ನಲು ಅದಕ್ಕಿರುವ ಮಾನದಂಡಗಳೇನು? ...ವಿ ಅಂಶಗಳ ಸುತ್ತ ಒಂದು ಚರ್ಚೆ ನಡೆಸೋಣ.

...ಕಂಬಳವನ್ನು ಯಾವುದೇ ದೃಷ್ಟಿಕೋನದಿಂದ ನೋಡಿ ... ಒಂದು ಜಾನಪದ ಕ್ರೀಡೆಯೆನ್ನಲಾಗದು. ಜನ-ಪದ ...ನೆ ಅದು ಜನಸಾಮಾನ್ಯರ, ಸರ್ವ ಜನರ ಕ್ರೀಡೆಯಾಗಿರ ... ಕಂಬಳ ಬಹು ಹಿಂದಿನಿಂದಲೂ ಊಳಿಗಮಾನ್ಯ ...ಷ್ಠೆ ದ್ಯೋತಕವಾಗಿಯೇ ಇದೆ. ಕಂಬಳದ ಕೋಣಗಳನ್ನು ...ವುದು, ಪಳಗಿಸುವುದು, ಒಂದೆಡೆಯಿಂದ ಇನ್ನೊಂದೆಡೆಗೆ ...ಸುವುದು, ಕಂಬಳದ ಗದ್ದೆಗಳಲ್ಲಿ ಓಡಿಸುವುದು ...ಜೀವಿಗಳು. ಕಂಬಳದ ಸ್ಪರ್ಧೆ ನಡೆಯುವಾಗ ಅಲ್ಲಿನ ...ಕ ವಿವರಣೆಗಾರರು ಕೋಣದ ಧನಿಗಳ ಹೆಸರನ್ನು ...ಗ ಎತ್ತಿ ಹೇಳುತ್ತಾರೆಯೇ ಹೊರತು ಕೋಣಗಳನ್ನು ...ುವ ನೈಜ ಕ್ರೀಡಾಳುವಿನ ಅರ್ಥಾತ್ ಶ್ರಮಜೀವಿಯ ...ನ್ನು ಎಲ್ಲಿಯೂ ಉಲ್ಲೇಖಿಸುವುದಿಲ್ಲ, ಫಲಿತಾಂಶದ ... ವರದಿಗಳಲ್ಲೂ ಕೇವಲ ಕೋಣದ ಧನಿಗಳ ಹೆಸರು ...ಪ್ರ ಇರುತ್ತದೆ. ಒಟ್ಟಿನಲ್ಲಿ ಕಂಬಳ ಸ್ಪರ್ಧೆಯಲ್ಲಿ ...ಣಗಳು ಗೆದ್ದರೆ ಅದರ ಭರಪೂರ ಕೀರ್ತಿ ಕೋಣಗಳ ...ಕಿಗೆ ಸಲ್ಲುತ್ತವೆ. ಇಲ್ಲಿ ಕಂಬಳದ ನೈಜ ಕ್ರೀಡಾಳುಗಳಾದ ...ಜೀವಿಯ ಪ್ರತಿಭೆ ನಗಣ್ಯವಾಗಿರುತ್ತದೆ. ಒಂದು ವೇಳೆ ...ಯಲ್ಲಿ ಸೋತರೆ ಯಜಮಾನನ ಕೋಪತಾಪಕ್ಕೆ ...ಣಗಳ ಜೊತೆಜೊತೆಗೆ ಅದನ್ನು ಓಡಿಸಿದ ಬಡಪಾಯಿ ...ಕನೂ ಗುರಿಯಾಗಬೇಕಾಗುತ್ತದೆ. ಒಂದು ಕ್ರೀಡೆಯಲ್ಲಿ ...ಯೋ ಒಬ್ಬ ಭಾಗವಹಿಸಿ ಗೆದ್ದರೆ ಅದರ ಕೀರ್ತಿ ...ಗೋ ಸಲ್ಲುತ್ತದೆಯೆಂದರೆ ಅದನ್ನು ನೈಜಕ್ರೀಡೆ ಎನ್ನಲು ... ಸಾಧ್ಯ? ಒಟ್ಟಿನಲ್ಲಿ ಇಲ್ಲಿ ಗೇಮ್ ಸ್ಪಿರಿಟ್‌ಗೆ ಯಾವ ...ಮೂ ಇಲ್ಲ, ಕಂಬಳದಲ್ಲಿ ನೈಜ ಆಟಗಾರನ ಶ್ರಮ ... ಪ್ರತಿಭೆಗೆ ಮೂರು ಕಾಸಿನ ಬೆಲೆಯೂ ಇಲ್ಲ.

...ಜಾನಪದ ಕ್ರೀಡೆಯೆಂದರೆ ಅದರಲ್ಲಿ ಜನಸಾಮಾನ್ಯರ ...ಗ್ಗೊಳ್ಳುವಿಕೆ ಬಹು ಅಗತ್ಯ. ಕಂಬಳದಲ್ಲಿ ಎಷ್ಟರಮಟ್ಟಿಗೆ ...ಮಾನ್ಯ ಪಾಲ್ಗೊಳ್ಳುತ್ತಾನೆ? ಇಲ್ಲಿ ಜನಸಾಮಾನ್ಯ ಒಂದು ...ರಂಜನೆಯನ್ನು ವೀಕ್ಷಿಸುವ ಪ್ರೇಕ್ಷಕನಾಗಿ ಮಾತ್ರ ...ಯುತ್ತಾನೆ. ಜನಸಾಮಾನ್ಯನ ಪಾಲ್ಗೊಳ್ಳುವಿಕೆ ಕೇವಲ ...ಗೆ ಮಾತ್ರ ಸೀಮಿತವಾಗಿರುತ್ತದೆ. ಕಂಬಳದಲ್ಲಿ ...ಸಾಮಾನ್ಯ ಪಾಲ್ಗೊಳ್ಳುವುದು ಖಂಡಿತಾ ಸಾಧ್ಯವಿಲ್ಲ. ...ಏಕೆಂದರೆ ಕಂಬಳದ ಕೋಣಗಳನ್ನು ಸಾಕಲು ಸಾಮಾನ್ಯ ...ನಿಗಂತೂ ಸಾಧ್ಯವೇ ಇಲ್ಲ. ಪ್ರಸ್ತುತ ಗದ್ದೆ ಸಾಗುವಳಿ ...ಸುವ ಬಡ ಮತ್ತು ಮಧ್ಯಮ ವರ್ಗದ ರೈತ ಸಾಗುವಳಿ ...ಶಕ್ಕಾಗಿ ಕೋಣಗಳನ್ನು ಸಾಕುವುದೇ ಇಲ್ಲ. ಒಂದೋ



ಬಾಡಿಗೆ ಕೋಣಗಳ ಮೂಲಕ ಅಥವಾ ಬಾಡಿಗೆ ಟ್ರ್ಯಾಕ್ಟರ್‌ಗಳನ್ನು ಬಳಸಿ ತಮ್ಮ ಗದ್ದೆಗಳನ್ನು ಉಳುಮೆ ಮಾಡುತ್ತಾರೆ. ಸ್ವಲ್ಪಮಟ್ಟಿಗೆ ಆರ್ಥಿಕ ಶಕ್ತಿಯಿದ್ದವನು ಕೋಣಗಳಿಗೆ ಬದಲಾಗಿ ಟ್ರ್ಯಾಕ್ಟರ್ ಖರೀದಿಗೆ ಒತ್ತು ನೀಡುತ್ತಾನೆ. ಕೋಣಗಳನ್ನು ಸಾಕುವುದು ಟ್ರ್ಯಾಕ್ಟರ್ ಖರೀದಿಗಿಂತ ದುಬಾರಿಯಾಗಿಯೇ ಪರಿಣಮಿಸಿದೆ. ಟ್ರ್ಯಾಕ್ಟರ್ ಖರೀದಿಗೆ ಬ್ಯಾಂಕುಗಳು ಸಾಲ ನೀಡುತ್ತವೆ. ಕೋಣ ಸಾಕಲು ಯಾವ ಬ್ಯಾಂಕೂ ಆರ್ಥಿಕ ನೆರವು ನೀಡುವುದಿಲ್ಲ. ಸಾಮಾನ್ಯ ದನ ಎತ್ತುಗಳನ್ನು ಸಾಕುವುದೇ ತ್ರಾಸದಾಯಕವಾಗಿರುವಾಗ ದೊಡ್ಡ ಕೋಣಗಳನ್ನು ಸಾಕುವುದು ಬಿಡಿ ಆ ಬಗ್ಗೆ ಯೋಚಿಸುವುದೂ ದೂರದ ಮಾತು. ಇನ್ನೊಂದು ವಿಚಾರ ನಾವು ನೆನಪಿಟ್ಟುಕೊಳ್ಳಬೇಕು. ಅದೇನೆಂದರೆ, ಇಂದು ಅನೇಕ ಕಂಬಳ ಪ್ರಿಯರು ಕೃಷಿಕರಾಗಿಯೇ ಉಳಿದಿಲ್ಲ. ನಗರ ಪ್ರದೇಶದ, ಅರೆನಗರ ಪ್ರದೇಶದ ಹಳೇ ಕಾಲದ ಊಳಿಗಮಾನ್ಯ ಪ್ರಭುಗಳು ತಮ್ಮ ಕೃಷಿ ಭೂಮಿಯ ತುಂಬಾ ಕಾಂಕ್ರೀಟು ಕಾಡುಗಳನ್ನು ನಿರ್ಮಿಸಿದ್ದಾರೆ. ಕೇವಲ ಪ್ರತಿಷ್ಠೆ ಪ್ರದರ್ಶನಕ್ಕೋಸ್ಕರ ಕಂಬಳದ ಕೋಣಗಳನ್ನು ಸಾಕುತ್ತಾರೆ.

ತುಳುನಾಡಿನಲ್ಲಿ ಬಹು ಹಿಂದಿನಿಂದಲೂ ಕಂಬಳಗಳನ್ನು ಆಯೋಜಿಸುತ್ತಾ ಬಂದವರು ಇಲ್ಲಿನ ಎರಡು ಬಲಿಷ್ಠ ಜಾತಿಯ ಭೂಮಾಲೀಕರು (ಕೆಲವು ಅಪವಾದಗಳನ್ನು ಹೊರತುಪಡಿಸಿ). ಇದರಲ್ಲಿ ಒಂದು ಜಾತಿಯವರಂತೂ ಅಪ್ಪಟ ಅಹಿಂಸಾವಾದಿಗಳು (?). ಮನುಷ್ಯ ತನ್ನ ಮನರಂಜನೆಗಾಗಿ ಬಡಪಾಯಿ ಪ್ರಾಣಿಗಳನ್ನು ಹಿಂಸಿಸುವುದು ಎಷ್ಟು ಸರಿ? ಕೋಣಗಳಿಗೆ ಮೂಗುದಾರ ತೊಡಿಸುವುದು, ಕಂಬಳದಲ್ಲಿ ಅವುಗಳಿಗೆ ನಿರ್ದಯವಾಗಿ ಬಾರುಕೋಲಿನಿಂದ ಮೈಮೇಲೆ ರಕ್ತ ಒಸರುವಂತೆ ಬಡಿಯುವುದು, ಸ್ಪರ್ಧೆಯಲ್ಲಿ ಸೋತರೆ ಕೋಣ ಮಾಲೀಕನ ಕಡೆಯ ಆಳುಗಳೆಲ್ಲಾ ಸೇರಿ ತಂತಮ್ಮ ಶಕ್ತಿ ಮೀರಿ ಕೋಣಗಳಿಗೆ ಹೊಡೆಯುವುದು ಇವೆಲ್ಲಾ ಹೊರಜಗತ್ತಿಗೆ ಕಾಣುತ್ತದೆ. ಕಂಬಳದ ಕೋಣಗಳನ್ನು ಸ್ಪರ್ಧೆಗೆ ಸಿದ್ಧಗೊಳಿಸುವಾಗ ಅವುಗಳ ಬಾಲಗಳನ್ನು ಬ್ಲೇಡ್‌ನಿಂದ ಗೀರಿ ರಕ್ತ ಒಸರುವಲ್ಲಿಗೆ ಉಪ್ಪು ಸವರುವುದು, ಬ್ಲೇಡ್‌ನಲ್ಲಿ ಗೀರಿದ ಬಾಲದ ಗಾಯಗಳಿಗೆ ಉಪ್ಪು ಇಟ್ಟು ಬಟ್ಟೆ ಕಟ್ಟುವುದು, ಆ ಉಪ್ಪು ಕಟ್ಟಿದ ಭಾಗವನ್ನು ಕೋಣಗಳನ್ನು ಓಡಿಸುವ ಸಂದರ್ಭ ಬಲವಾಗಿ ಅಮುಕುವುದು. ಇಂತಹ ಉರಿನೋವು ತಾಳಲಾರದೆ ಕೋಣಗಳು ಜೀವ ಬಿಟ್ಟು ಓಡುತ್ತವೆ. ಸೂಜಿ, ಮೊಳೆಯಂತಹ ಚೂಪಾದ ವಸ್ತುಗಳಲ್ಲಿ ಚುಚ್ಚುವುದು ಇವೆಲ್ಲಾ ಸ್ವಲ್ಪ ಗುಪ್ತವಾಗಿ ನಡೆಯುತ್ತವೆ. ಈ ರೀತಿ ಕೋಣಗಳಿಗೆ ಚಿತ್ರಹಿಂಸೆ ನೀಡಿ ಗೆಲುವು ಸಾಧಿಸಿ ಪ್ರತಿಷ್ಠೆ ಮೆರೆಯುವುದು ಎಷ್ಟು ಸರಿ?

ತಮ್ಮ ಪ್ರತಿಷ್ಠೆಗಾಗಿ ಬಡಪ್ರಾಣಿಗಳನ್ನು ಅಮಾನವೀಯವಾಗಿ ಹಿಂಸಿಸುವುದು ಅಹಿಂಸಾವಾದಿಗಳು ಪಾಲಿಸುವ ಧರ್ಮಕ್ಕೆ ತಾಳೆಯಾಗುತ್ತದೆಯೇ?

ಇತರರು ಆಹಾರವಾಗಿ ಬಳಸುವಾಗ ಉಕ್ಕುವ ಗೋಪ್ರೇಮ ಅವುಗಳನ್ನು ಹಿಂಸಿಸುವಾಗ ಎಲ್ಲಿರುತ್ತದೆ? ದನದ ಮಾಂಸವನ್ನು ತಿನ್ನುವವರು ಯಾರೂ ಒಂದು ಸಮುದಾಯದ ಪೂಜನೀಯ ಪ್ರಾಣಿ ಎಂಬ ಕಾರಣಕ್ಕೆ ಅವರ ಭಾವನೆಗಳಿಗೆ ನೋವು ಮಾಡಲೆಂದು ತಿನ್ನುವುದಿಲ್ಲ. ಆಡು-ಕುರಿ ಮಾಂಸಕ್ಕಿಂತ ಕಡಿಮೆ ಬೆಲೆಗೆ ಸಿಗುವ ರುಚಿಕರವಾದ ಪೌಷ್ಠಿಕಾಂಶಯುಕ್ತ ಆಹಾರವೆಂಬ ಕಾರಣಕ್ಕೆ ತಿನ್ನುತ್ತಾರೆ. ಪ್ರಾಣಿಹಿಂಸೆ ಎಂದು ಆಹಾರ ಪದ್ಧತಿಯನ್ನು ನಿಷೇಧಿಸಲು ಬರುವುದಿಲ್ಲ, ಹಾಗೆ ನಿಷೇಧಿಸುವುದಾದರೆ ಎಲ್ಲಾ ಮಾಂಸಾಹಾರಗಳನ್ನು ನಿಷೇಧಿಸಬೇಕಾಗುತ್ತದೆ. ಮಾತ್ರವಲ್ಲ ಸಸ್ಯಾಹಾರಗಳನ್ನು ನಿಷೇಧಿಸಬೇಕಾಗುತ್ತದೆ. ಕಂಬಳ ನಿಷೇಧದ ವಿಚಾರ ಗೋಹತ್ಯೆ ನಿಷೇಧಕ್ಕಾಗಿ ಬೊಬ್ಬೆ ಹೊಡೆಯುವವರನ್ನು ವಿಚಿತ್ರ ಇಕ್ಕಟ್ಟಿಗೆ ಸಿಲುಕಿಸಿದೆ.

ರೈತರ ಕ್ರೀಡೆಯಾದ ಕಂಬಳವನ್ನು ನಿಷೇಧಿಸಿ ಅನ್ಯಾಯ ಮಾಡಲಾಗುತ್ತಿದೆ ಎಂಬ ಪ್ರಲಾಪವೂ ಕೇಳಿಬರುತ್ತಿದೆ. ಕಂಬಳದ ಯಾಜಮಾನರು, ಕೋಣದ ಧನಿಗಳು ಎಲ್ಲರೂ ಭೂಮಾಲೀಕರೇ ಹೊರತು ರೈತರಲ್ಲ, ಎಷ್ಟು ಮಂದಿ ಕೋಣದ ಧನಿಗಳು ಇಂದು ಕೋಣಗಳನ್ನು ಕಟ್ಟಿ ಉಳುತ್ತಾರೆ? ರೈತ ಎಂದರೆ ಯಾರು? ಎಕರೆಗಟ್ಟಲೆ ಗದ್ದೆಗಳಿದ್ದು ಯಾರೋ ಶ್ರಮಜೀವಿಗಳನ್ನು ಬಳಸಿ ಗದ್ದೆ ಕೆಲಸ ಮಾಡಿಸಿ ಅದರ ಲಾಭ ಮಾತ್ರ ತಿನ್ನುವವರನ್ನು ರೈತರೆನ್ನಲಾಗದು. ಅಂತಹವರು ಗದ್ದೆಗಳ ಮಾಲೀಕರೇ ವಿನಃ ರೈತರಲ್ಲ, ಈ ಭೂಮಾಲೀಕರ ಗದ್ದೆಗಳಲ್ಲಿ ದುಡಿಯುವ ಶ್ರಮಜೀವಿಗಳು ನಿಜವಾದ ರೈತರು.

ಕಂಬಳ ನಿಷೇಧವನ್ನು ವಿರೋಧಿಸಿ ಕೆಲವರು ಕಂಬಳವನ್ನು "ಧಾರ್ಮಿಕ ಕ್ರೀಡೆ" ಎಂಬ ಹೇಳಿಕೆಗಳನ್ನು ನೀಡಿದ್ದಾರೆ. "ಧಾರ್ಮಿಕ ಕ್ರೀಡೆಗೆ ತಡೆ" ಎಂದು ಭಾವನಾತ್ಮಕವಾಗಿ ಮಾತನಾಡಿದಾಗ ಅದಕ್ಕೆ ಬೇರೆಯೇ ಬಣ್ಣ ಬರುತ್ತದೆ. ಉದ್ದೇಶಪೂರ್ವಕವಾಗಿ ಇಂತಹ ಮಾತುಗಳನ್ನಾಡಿರುವುದು ಸ್ಪಷ್ಟ. ವಾಸ್ತವದಲ್ಲಿ ತುಳುವರ ಧಾರ್ಮಿಕ ಆಚರಣೆಗಳಿಗೆ ಮತ್ತು ಕಂಬಳಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲ, ಕಂಬಳ ಪ್ರಾರಂಭಿಸುವಾಗ ಕೆಲವು ಧಾರ್ಮಿಕ ವಿಧಿಗಳನ್ನು ಆಚರಿಸುವುದನ್ನೇ ಮುಂದಿಟ್ಟು ಈ ಮಂದಿಗಳು ಕಂಬಳವನ್ನು ಧಾರ್ಮಿಕ ಕ್ರೀಡೆ ಎನ್ನುತ್ತಾರೆ. ಹಾಗೆ ನೋಡಹೋದರೆ ಸಿನಿಮಾ, ಆರ್ಕೆಸ್ಟ್ರಾ, ನಾಟಕಗಳಿಗೆ ಮುಂಚಿತವಾಗಿ ಯಾವುದಾದರೂ ಧಾರ್ಮಿಕ ಭಜನೆಗಳನ್ನೋ, ಹಾಡುಗಳನ್ನೋ ಹಾಡುವುದಿದೆ. ಅಂದಮಾತ್ರಕ್ಕೆ ಅವುಗಳನ್ನು ಧಾರ್ಮಿಕ ಎನ್ನಬಹುದೇ? ಇಷ್ಟಾಗಿಯೂ ಕಂಬಳವನ್ನು ಧಾರ್ಮಿಕ ಕ್ರೀಡೆ ಎನ್ನುವುದಾದರೆ ಅದು ಶಿವರಾತ್ರಿಗೂ ಕಳ್ಳತನಕ್ಕೂ ಇರುವ "ಅನುಕೂಲಶಾಸ್ತ್ರೀಯ" ಸಂಬಂಧದಂತಷ್ಟೆ.

ತುಳುನಾಡಿನ ಇನ್ನಿತರ ಜಾನಪದ ಜೂಜುಗಳಾದ ಕೋಳಿ ಅಂಕ, ತಾರಾಯಿ ಕಟ್ಟ (ತೆಂಗಿನಕಾಯಿ ಕಟ್ಟುವುದು) ಮುಂತಾದವುಗಳಿಗೆ ಜೂಜು ಎಂಬ ಹಣೆಪಟ್ಟಿ ಹಚ್ಚಿ ಅದನ್ನು ಆಡುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಲಾಗುತ್ತದೆ. ಸಾಮಾನ್ಯವಾಗಿ ಕೋಳಿ ಅಂಕ, ತಾರಾಯಿ ಕಟ್ಟ ಆಡುವವರು ಬಡ ಮತ್ತು ಮಧ್ಯಮ ವರ್ಗದ ಜೂಜು ಗಾರರು. ಕಂಬಳದಲ್ಲಿ ಬಡವರು ಬಾಜಿ ಕಟ್ಟುತ್ತಾರಾದರೂ, ಲಕ್ಷಗಳ ಲೆಕ್ಕದಲ್ಲಿ ಬಾಜಿ ಕಟ್ಟುವವರು ಶ್ರೀಮಂತರು ಮತ್ತು ಪ್ರತಿಷ್ಠಿತರು. ಜೂಜು ಬಡವರು ಆಡಿದರೂ ಶ್ರೀಮಂತರು ಆಡಿದರೂ ಜೂಜೇ ಹೊರತು ಇನ್ನೇನಲ್ಲ.

ಕಂಬಳ ನಡೆಯದಿದ್ದರೆ ಇಲ್ಲಿ ಯಾರೂ ಹಸಿವಿನಿಂದ ನರಳಿ ಸಾಯುವುದಿಲ್ಲ, ಕಂಬಳದಲ್ಲಿ ಪ್ರಾಣಿಹಿಂಸೆಯ ಹೊರತಾದ ಊಳಿಗಮಾನ್ಯ ದರ್ಪ ಮತ್ತು ಬಡವರ ಶ್ರಮದ ದುಡ್ಡಿನ ಪೋಲಾಗುವಿಕೆಯೂ ಇದೆ ಎಂಬುವುದನ್ನೂ ಗಮನಿಸಿ ಪ್ರಸ್ತುತ ಕಂಬಳ ನಿಷೇಧಕ್ಕೆ ಕಂಬಳಪರರು ತಂದ ತಡೆಯಾಜ್ಞೆಯನ್ನು ಹೈಕೋರ್ಟ್ ಮತ್ತೆ ರದ್ದುಗೊಳಿಸಬೇಕು. ಒಟ್ಟಿನಲ್ಲಿ ಯಾವುದೇ ವಿಧದ ಜೂಜು ಅದು ಜಲ್ಲಿಕಟ್ಟಾಗಲಿ, ಕುದುರೆ ರೇಸಾಗಲೀ, ಕಂಬಳವಾಗಲಿ, ಕ್ರಿಕೆಟ್ ಬೆಟ್ಟಿಂಗಾಗಲಿ, ಕೋಳಿ ಅಂಕವಾಗಲಿ ಇವೆಲ್ಲವೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಹಾನಿಕರ ಎಂಬುವುದರಲ್ಲಿ ಎರಡು ಮಾತಿಲ್ಲ.

● ಇಸ್ಮತ್ ಫಜೀರ್



ದುಡ್ಡಿದ್ದವರೇ ಬನ್ನಿ

...ದ್ದವರೇ ಬನ್ನಿ ನೀವು
[illegible]

ಮುಕ್ಕೋಟಿ ದೇವರಲೂ
ನಮಗಿದೆ ನಲ್ಮೆ
ಅತಿಥಿ ದೈವವು ನೀವು
ನಮಗದೇ ಹೆಮ್ಮೆ

ಪರಿಣಿತರು ನಾವು
ಮಾರಿಕೊಳ್ಳುವುದರಲ್ಲಿ
ಮನಬಿಚ್ಚಿ ಕೇಳಿ
ಇಲ್ಲ ಎನ್ನುವುದಿಲ್ಲ ನಾವು

ಈ ನೆಲ ನಮಗೆ ಅಮ್ಮ
ಕೊಟ್ಟವ್ಳಾಳೆ ಅನ್ನ
ಎಂದೆಂದಿನಿಂದಲೂ
ಕೈ ಹಿಡಿದು ನಮ್ಮ

ಅದರೇನು, ನಮಗೆ
ಬೇಕಾಗಿದೆ ಈಗ ಹೊನ್ನು
ಕೊಟ್ಟು ಬಿಡುತ್ತೇವೆ ಅವಳ
ನಿಮ್ಮ ಕೈಯಿಂಗೆ ಇನ್ನು

ಬಗಿಯುತ್ತೀರಾ ಒಡಲ
ಬಗೆದುಕೊಳ್ಳಿ

ಸುಲಿಯುತ್ತೀರಾ ಮೈಯ
ಸುಲಿದುಕೊಳ್ಳಿ

ಕೊಯ್ಯುತ್ತೀರಾ ಕೊರಳ
ಕೊಯ್ದುಕೊಳ್ಳಿ
ಮೊಗೆಯುತ್ತೀರಾ ಹವಳ
ಮೊಗೆದುಕೊಳ್ಳಿ

ತುಂಬಿಕೊಳ್ಳಿ ನಿಮ್ಮ ಬಳ್ಳ
ಹೇಳುತ್ತಲೇ ಸುಳ್ಳ

ಗೊತ್ತ ನಿಮಗೆ
ನಮ್ಮವರೇ ಕೇಳುತ್ತಿದ್ದರು
ನೆಲ, ಹಿಡಿ ಅಗಲ
ಅದೆಷ್ಟೋ ಕಾಲ

ಕಣ್ಣಿಗೊತ್ತಿಕೊಂಡು ಮಣ್ಣ
ತುಂಬಿಕೊಳ್ಳುತ್ತೇವೆ
ತುತ್ತಿನ ಚೀಲ
ಎಂದು

ಉಂಡು ಬಿಟ್ಟರೆ
ಅವರು ಹೊಟ್ಟೆ ತುಂಬ
ಗೇಯುವವರ್‍ಯಾರು
ನಿಮ್ಮ ಉಂಬಳ

ಅದಕ್ಕೇ,
ಕೊಡದೇ ಹಿಡಿದಿಟ್ಟಿದ್ದೇವೆ
ನಿಮ್ಮ ಬರುವಿಕೆಗಾಗಿ ಕಾದು
ದುಡಿಯಲೆಂದು ಅವರು
ನಿಮ್ಮ ಗುಲಾಮರಾಗಿ

2
ನಿಮಗೇ ಉಣಿಸ
ಬೆಳೆಸಬೇಕು
ಕೊಡಿ ಹನಿ ನೀರು
ಗೋಗರೆವ ರೈತ

ದಿನದರ್ಧ ಕರೆಂಟು ಬೇಕು
ಎಂದವನ ವರಾತ

ಕೊಟ್ಟರೂ ಅದನು
ಮೂರೇ ತಾಸು
ಕೊಡದೇ ಬಿಟ್ಟಿಲ್ಲ
ತಾಸು
ತೆಗೆಯುತ್ತಾ
[illegible]
ಅದರ ಪೀಸು(ಪೀಜು)

3
ಹೇಗೂ ನಮ್ಮದು
ಹಳ್ಳಿಗಳದೇ ನಾಡು
ರಸ್ತೆಗಳಿದ್ದರೆ ತಾನೇ
ಹಳ್ಳಿಗರ ದೌಡು
ಕುಡಿಯಲು ನೀರಿಲ್ಲ
ಕರೆಂಟು ಬರುವುದಿಲ್ಲ
ರಸ್ತೆಗೆ ಟಾರಿಲ್ಲ
ಜನರ ನೆಮ್ಮದಿ
ಬಯಸಿಯೇ ಅವು
ಇರುವುದಿಲ್ಲ

5
ದುಡ್ಡಿದ್ದವರೇ
ನೀವು ಅಂಜಬೇಕಿಲ್ಲ
ಬಯಸಿದಷ್ಟು ಭೂಮಿ
ಭರಪೂರ ನೀರು
ನಿರಂತರ ಕರೆಂಟು
ಅಂದಚಂದದ ರಸ್ತೆ
ನಿಮಗುಂಟು

ನೀವಿದ್ದರೆ ತಾನೇ
ನಮಗೂ ಗಂಟು
ಶಾಶ್ವತ ಉಂಟು
ನಮ್ಮ ನಿಮ್ಮ ನಂಟು



● ಕೆ.ಎಂ.ಗಂಗಾಧರಪ್ಪ

ತತ್ವಪದ ಸಮಗ್ರ ಸಾಹಿತ್ಯ ಸಂಪಾದನೆಗೂ ಮುನ್ನ..... ಒಂದೆರಡು ಮಾತು



ಕೈವಾರ ತಾತಯ್ಯ

18-19ನೆಯ ಶತಮಾನದ ತತ್ವಪದಕಾರರ ಕಾಲವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಕತ್ತಲೆಯ ಯುಗ' ಎಂದು ಗುರುತಿಸಲಾಯಿತು. ಇದಕ್ಕೆ ಕಾರಣಗಳೆಂದರೆ ವಸಾಹತುಶಾಹಿ ಚರಿತ್ರೆ ಹಾಗೂ ಸಾಹಿತ್ಯ ಚರಿತ್ರೆಗಳ ಮತೀಯ ವಿಭಜಕ ಕಣ್ಣುಪಟ್ಟಿ ಹಾಗೂ ದೇಶೀ ವಿದ್ವಾಂಸರ ವೈದಿಕ-ಪರ ಮತೀಯ ದೃಷ್ಟಿಕೋನ. ಪ್ರಾಚೀನ ಕಾಲದಲ್ಲಿ ಅವೈದಿಕ ಭೌತವಾದಿ ದರ್ಶನಗಳನ್ನು ನಾಶಪಡಿಸಲಾಯಿತು. ಮಧ್ಯಯುಗದಲ್ಲಿ ನಾಥ ಮೊದಲಾದ ಅನುಭಾವೀ ಪಂಥಗಳನ್ನು ರಾಕ್ಷಸೀಕರಿಸಲಾಯಿತು. ಅದರ ಮುಂದುವರಿಕೆಯಾಗಿ ತತ್ವಪದಗಳ ಕಾಲವನ್ನು ಕತ್ತಲೆಗೆ ತಳ್ಳಲಾಯಿತು. ಈ ಎಲ್ಲಕ್ಕೂ ಮುಖ್ಯ ಕಾರಣ ಸ್ಥಾಪಿತ ಧರ್ಮಗಳ ವಿರುದ್ಧ ಅವು ಪ್ರಕಟಿಸಿದ ಬಂಡುಕೋರತನ. ಭಾರತದ ಚರಿತ್ರೆಯನ್ನು ಹಾಗೂ ಜನಾಂಗಗಳನ್ನು ಧರ್ಮವನ್ನಾಧರಿಸಿ ವಿಭಾಗಿಸಿದ ವಸಾಹತುಶಾಹಿ ವಿದ್ವಾಂಸರೇ 'ಕನ್ನಡ ಸಾಹಿತ್ಯ ಚರಿತ್ರೆಯನ್ನು ಧರ್ಮಾಧಾರಿತವಾಗಿ ವಿಂಗಡಿಸಿದರು. ಆರಂಭದ ದೇಶೀ ವಿದ್ವಾಂಸರು ಅದನ್ನನುಸರಿಸಿದರು. ಹೀಗಾಗಿ ಧರ್ಮಾತೀತವೂ ಧರ್ಮವಿರೋಧಿಯೂ ಆದ ತತ್ವಪದ ಸಾಹಿತ್ಯವನ್ನು ಸಂಪಾದಿಸುವ, ಸಾಹಿತ್ಯ ಪ್ರಕಾರವೆಂದು ಚರ್ಚಿಸುವ ಅಗತ್ಯ ಕಂಡುಬರಲಿಲ್ಲ, ಇದಕ್ಕೆ ಕಾರಣ ತತ್ವಪದಗಳ ಅನುಭಾವಿಕ ನೆಲೆ.


ವೈದಿಕ ಪಾರಮ್ಯದ ಭಾರತೀಯ ಸಮಾಜದಲ್ಲಿ ಬೌದ್ಧ ಜೈನ ಧರ್ಮಗಳು ವೈದಿಕೀಕರಣಕ್ಕೊಳಗಾಗಿ ಶಕ್ತಿಯನ್ನು ಕಳೆದುಕೊಂಡವು. ಅವುಗಳ ಮೂಲ ಆಶಯಗಳನ್ನು ಮುಂದುವರೆಸುತ್ತ ಅನುಭಾವೀ ಹಾಗೂ ಭಕ್ತಿಚಳವಳಿಗಳು ಉಗಮವಾದವು. ಬೌದ್ಧ ಧರ್ಮದ ಮಹಾಯಾನ ಶಾಖೆಯ ಕವಲು ವಜ್ರಯಾನ ಹಾಗೂ ಕಾಪಾಲಿಕ ಪಂಥಗಳ ಪ್ರೇರಣೆಯಿಂದ ಮಧ್ಯಯುಗದಲ್ಲಿ ನಾಥಪಂಥ ಹುಟ್ಟಿತು. ಅರಬ್ ವ್ಯಾಪಾರಿಗಳ ಜತೆಯಲ್ಲಿಯೇ ಸೂಫಿ ಪಂಥದ ಒಂದು ಝರಿ ಭಾರತವನ್ನು ಪ್ರಾಚೀನಕಾಲದಲ್ಲಿಯೇ ಪ್ರವೇಶಿಸಿತ್ತಾದರೂ ಚಿಸ್ತಿಯಾ, ಖಾದ್ರಿಯಾ, ನಕ್ಷಬಂದಿಯಾ ಹಾಗೂ ಇನ್ನಿತರ ಸಿಲ್‌ಸಿಲಾಗಳು ಮಧ್ಯಕಾಲದಲ್ಲಿ ವ್ಯಾಪಕವಾಗಿ ಪ್ರಸಾರವಾದವು. ಭಾವನಾವಾದಿ ದರ್ಶನಗಳು ಹಾಗೂ ಅವುಗಳನ್ನಾಧರಿಸಿ ರೂಪಿತವಾದ ಧರ್ಮಗಳ ವಿರುದ್ಧ ಬಂಡೆದ್ದ ನಾಥಪಂಥ ಹಾಗೂ ಮುಸ್ಲಿಂ ಧರ್ಮದ ಪುರೋಹಿತಶಾಹಿ ಹಾಗೂ ನಿರಂಕುಶ ಪ್ರಭುತ್ವದ ವಿರುದ್ಧ ಬಂಡೆದ್ದ ಸೂಫಿ ಪಂಥಗಳು ಸಾಮರಸ್ಯ ಸಾಧಿಸಿದ್ದು ಈ ಕಾಲದ ಹಿಂದೂ ಮುಸ್ಲಿಂ ಸಹಿಷ್ಣುತೆಗೆ ಆನೆಬಲ ಒದಗಿಸಿತು. ಈ ಪಂಥಗಳ ಅನುಸಂಧಾನದಿಂದ ಭಾರತದಾದ್ಯಂತ ಅಸಂಖ್ಯ ಭಕ್ತಿ ಚಳವಳಿಗಳು ಹುಟ್ಟಿಕೊಂಡವು. ಬಂಗಾಳದಲ್ಲಿ ಚೈತನ್ಯ ಮಹಾರಾಷ್ಟ್ರದಲ್ಲಿ ವಾರಕರಿ, ಮಹಾನುಭಾವ, ದತ್ತ ಪಂಥಗಳು, ಅಸ್ಸಾಂನಲ್ಲಿ ಶಂಕರದೇವ, ಉತ್ತರ ಭಾರತದಲ್ಲಿ ಕಬೀರ, ನಾನಕ ಪಂಥಗಳು ರೂಪ ತಾಳಿದವು. ಆಳುವವರ್ಗ ಹಾಗೂ ಶಿಷ್ಟ ಧರ್ಮಗಳ ನೈಚ್ಯಾನುಸಂಧಾನದಿಂದ ಎಲ್ಲ ಬಗೆಯ ಅಸಮಾನತೆ ಹಾಗೂ ಹಿಂಸೆಗೆ ತುತ್ತಾದ ಶೋಷಿತ ಕೆಳವರ್ಗಗಳ ಹಾಗೂ ದುಡಿಯುವ ಸಮುದಾಯಗಳ ಬದುಕಿನಲ್ಲಿ ಹೊಸ ಸಂಚಲನವನ್ನು ಸೃಷ್ಟಿಸಿದವು. ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಯ ಜಾಗೃತಿಯನ್ನು ಹುಟ್ಟಿಸಿದವು. ಕನ್ನಡದ ಆಧುನಿಕ ಪೂರ್ವಕಾಲದ ಆರೂಢ ಇಲ್ಲವೇ ಅವಧೂತ ಪರಂಪರೆ ಹಾಗೂ ತತ್ವಪದ ಸಾಹಿತ್ಯ ಈ ಬಗೆಯ ಅನುಭಾವಿಕ ನೆಲೆಯ ಹೋರಾಟ ಹಾಗೂ ಜಾಗೃತಿಯ ಮುಂದುವರಿಕೆಯಾಗಿವೆ.

ಅನುಭಾವಿ ನೆಲೆಯ ಮುಖ್ಯ ಲಕ್ಷಣವೆಂದರೆ ಧಾರ್ಮಿಕ ಬಂಡಾಯ. ನಾಥಪಂಥವು ವೈದಿಕ, ಬೌದ್ಧ, ಶೈವ ಮೊದಲಾದ ಶಿಷ್ಟ ಮತ್ತು ಜಡಗೊಂಡ ಧರ್ಮಗಳ ವಿರುದ್ಧ ಬಂಡಾಯ ಸಾರಿದರೆ ಸೂಫಿ, ಇಸ್ಲಾಂ ಧರ್ಮದ ರಾಜಕೀಯ ಆರ್ಥಿಕತೆಯ ಜಡ ಅನುಸಂಧಾನದೊಂದಿಗೆ ಯುದ್ಧ ಸಾರಿತು. ಧರ್ಮವೆನ್ನುವುದು ಕೇವಲ ಆಚರಣೆಯ ವಿಧಾನ ಮಾತ್ರವಾಗಿರದೇ ವರ್ಗ, ಜಾತಿ ಆಧಾರಿತ ಅಸಮಾನ ಸಮಾಜದ ಮುಂದುವರಿಕೆಗೆ ಮಧ್ಯವರ್ತಿಯಾದಾಗ ಅಂಥ ಸಾಂಸ್ಥಿಕ ಧರ್ಮಗಳನ್ನು ಅನುಭಾವ ಪ್ರತಿರೋಧಿಸಿತು. "ಸಾಂಸ್ಥಿಕತೆ, ಅರಮನೆ, ಮಠಗಳ ಹಂಗಿನಲ್ಲಿ ಅನುಭಾವ ಅರಳುವುದಿಲ್ಲ, ಹೀಗಾಗಿ ಸೂಫಿಗಳು, ಶರಣರು, ದಾಸರು, ಶಿವಯೋಗಿಗಳು ಧಾರ್ಮಿಕ ಬಂಡಾಯಗಾರರೇ ಆಗಿದ್ದಾರೆ." (ಬಿದರಹಳ್ಳಿ ನರಸಿಂಹಮೂರ್ತಿ). ತತ್ವಪದಕಾರರೂ ಕೂಡ ಧಾರ್ಮಿಕ ಬಂಡಾಯಗಾರರು. ಇದರ ಎರಡನೆಯ ಮುಖ್ಯ ಲಕ್ಷಣವೆಂದರೆ ಜಾತಿಗಳಿಗೆ ಅತೀತವಾದ ಬದುಕಿನ ಅನ್ವೇಷಣೆ. ಇದು ಮೂಲತಃ ಗುರುಮಾರ್ಗವಾಗಿದ್ದು, ಗುರುಶಿಷ್ಯ ಸಂಬಂಧದಲ್ಲಿ ಜಾತಿ ಧರ್ಮಗಳ ಕಟ್ಟಳೆಗಳಿರುವದಿಲ್ಲ, ಗೋವಿಂದಭಟ್ಟ-ಶಿಶುನಾಳ ಶರೀಫ ಸಾಹೇಬ, ಕಡಕೋಳ ಮಡಿವಾಳಪ್ಪ-ಚೆನ್ನೂರ ಜಲಾಲಸಾಹೇಬ ಹೀಗೆ ಅಸಂಖ್ಯ ಜೋಡಿಗಳನ್ನು ಇಲ್ಲಿ ಗುರುತಿಸಬಹುದು. ಜ್ಞಾನವನ್ನು ಒಂದು ಧರ್ಮದ ಒಂದೇ ವರ್ಗಕ್ಕೆ ಸೀಮಿತಗೊಳಿಸಿದ ವರ್ಣಾಶ್ರಮಾಧಾರಿತ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅನುಭಾವ ಪಂಥಗಳು ಅದನ್ನು ಧಿಕ್ಕರಿಸಿ ಜಾತಿಧರ್ಮಗಳಿಗೆ ಅತೀತವಾದ ಲೋಕವನ್ನು ಶೋಧಿಸಿದವು.

ಅನುಭಾವಿಕ ನೆಲೆಯ ಇನ್ನೊಂದು ಮುಖ್ಯ ಲಕ್ಷಣವೆಂದರೆ ಯೋಗಮಾರ್ಗ. ದೇಹವೇ ಎಲ್ಲ ಸಾಧನೆಗಳ ತಾಣ. ದೇಹವನ್ನು ಹಲವು ತಾಲೀಮುಗೊಳಪಡಿಸಿ, ಮನುಷ್ಯನೇ ದೇವರಾಗಬಲ್ಲ ಎಂಬ ಚಿಂತನೆಯಿದು. ಇದು ಸಾವಿರಾರು ವರುಷಗಳಿಂದ ಭಾರತದಲ್ಲಿ ಶಿಷ್ಟಧರ್ಮ ಹಾಗೂ ಪ್ರಭುತ್ವದ ಧರ್ಮಗಳ ಭಾಗವಾಗಿ ಬೆಳೆದುಬಂದ ಭಾವನಾವಾದಿ ದರ್ಶನಗಳನ್ನು ನಿರಾಕರಿಸುತ್ತದೆ. ಇಲ್ಲಿ "ಯೋಗದ ಸಾಧನೆಯ ತುತ್ತತುದಿಯ ಅವಸ್ಥೆ ಸಾಧಕರು ತಾವೇ ಶಿವರಾಗುವ ಕಾರಣ ಬೇರೆ ದೇವರ ಕಲ್ಪನೆ ಇಲ್ಲ" (ರಹಮತ್ ತರೀಕೆರೆ). ಅನುಭಾವ ಮೂಲತಃ ನಾಸ್ತಿಕತೆಯನ್ನು ಪ್ರತಿಪಾದಿಸುತ್ತದೆ. ಯೋಗಸಾಧನೆಯ ಮೂಲಕ ಯಾರಾದರೂ ದೇವರಾಗಬಲ್ಲರು. ನಾಥ ಮತ್ತು ಸೂಫಿಪಂಥಗಳೆರಡೂ ಇದೇ ನೆಲೆಯನ್ನು ಒಳಗೊಂಡಿವೆ. ಅನುಭಾವಿಕ ನೆಲೆಯ ಮತ್ತೊಂದು ಲಕ್ಷಣವೆಂದರೆ ಇದು ದುಡಿಯುವ ವರ್ಗ, ಕೆಳವರ್ಗ ಮತ್ತು ಕೆಳಜಾತಿಗಳಿಗೆ ಸಂಬಂಧಿಸಿದ್ದು, ಶಿಷ್ಟಧರ್ಮಗಳ ಪುರೋಹಿತಶಾಹಿಯ ಮೆರವಣಿಗೆಗೆ ಪ್ರತಿಕ್ರಿಯೆಯಾಗಿ ದಲಿತರು, ಕೆಳವರ್ಗದವರು, ಮಹಿಳೆಯರು ಅನುಭಾವ ಚಳವಳಿಯಲ್ಲಿ ಕಾಣಿಸಿಕೊಂಡರು. ಹೀಗಾಗಿ ಇದು ಎಷ್ಟೋ ಬಾರಿ ಭಕ್ತಿಯ ಮುಖವಾಡವನ್ನು ನಿಗೂಢ ಆಚರಣೆಗಳನ್ನು ಒಳಗೊಂಡಿತು. ಅನುಭಾವ, ಲಿಂಗತಾರತಮ್ಯವನ್ನು ನಿರಾಕರಿಸುತ್ತದೆ. ಹೀಗಾಗಿ ಹಲವಾರು ಮಹಿಳಾ ಅನುಭಾವಿಗಳೂ ಕಂಡುಬರುತ್ತಾರೆ. ಲೈಂಗಿಕತೆ ಯೋಗಸಾಧನೆಯ ಒಂದು ಮಾರ್ಗವಾಗಿ ನಾಥ, ಶಾಕ್ತ ಮೊದಲಾದ ಪಂಥಗಳಲ್ಲಿ ಆಚರಿಸಲ್ಪಟ್ಟಿತು. ಪುರುಷ ಸಾಧನೆಗೆ ಸಾಧನವಾಗಬೇಕಾದ ಮುಜುಗರದಲ್ಲಿ ಕಾಲಾಂತರದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯಾದಂತಿದೆ. ಕನ್ನಡ ತತ್ವಪದಕಾರ್ತರಲ್ಲಿ ಶಿವಲಿಂಗಮ್ಮ ಜತ್ತಿಯಂಥ ಅಪರೂಪದ ಹೆಸರು ಕಂಡುಬರುತ್ತದೆ.

ವಸಾಹತುಶಾಹಿ ಹಾಗೂ ಬಂಡವಾಳಶಾಹಿಯ ಆಗಮನದ ಮೂಲಕ ಕೋಮುವಾದ ಕಣ್ಣು ಬಿಡುವ ಹೊತ್ತಿನಲ್ಲಿ ಬರೆದ ತತ್ವಪದಕಾರರು ವಸಾಹತುಶಾಹಿಗೆ ಹಾಗೂ ಅದರ ಹೊಸ ಆರ್ಥಿಕ, ರಾಜಕೀಯ ವ್ಯವಸ್ಥೆಗಳಿಗೆ ಕೆಳಸ್ತರದಿಂದ ಪ್ರತಿಕ್ರಿಯೆ ನೀಡಿದ್ದಾರೆ. ಧರ್ಮಾಧಾರಿತವಾಗಿ ಮನುಷ್ಯರನ್ನು ಒಡೆದು ಆಳುವ ನೀತಿ ಆರಂಭವಾದ ಕಾಲದಲ್ಲಿ ಹಿಂದೂ-ಮುಸ್ಲಿಮ್ ಸಾಮರಸ್ಯವನ್ನು ಪ್ರತಿಪಾದಿಸಿದ್ದಾರೆ. ತತ್ವಪದಗಳ ಸ್ವರೂಪವನ್ನು ತಿಳಿಯುವುದಕ್ಕಾಗಿ ಐದು ಜನ ತತ್ವಪದಕಾರರ ಐದು ತತ್ವಪದಗಳನ್ನು ನೆನಪಿಸಿಕೊಳ್ಳಬಹುದು. ಶರೀಫರ 'ಹಾಕಿದಾ ಜನಿವಾರವಾ ಸದ್ಗುರನಾಥಾ ಹಾಕಿದ ಜನಿವಾರವಾ' ಎಂಬ ತತ್ವಪದ ಜಾತ್ಯತೀತ ಗುರುಶಿಷ್ಯ ಸಂಬಂಧದ ಮೂಲಕ ಸಾಮರಸ್ಯವನ್ನು ಪ್ರತಿಪಾದಿಸುತ್ತದೆ. ಉಪನಯನದಲ್ಲಿ ತಂದೆ ಮಗನಿಗೆ ಜನಿವಾರ ತೊಡಿಸುತ್ತಾನೆ. ವಂಶಪಾರಂಪರ್ಯವಾಗಿ ಪಡೆದುಕೊಂಡು ಬಂದ ಅಕ್ಷರ ಮತ್ತು ಜ್ಞಾನದ ಹಕ್ಕನ್ನು, ಆ ಮೂಲಕ ಮೇಲ್ವರ್ಗದ ಸಾಂಸ್ಕೃತಿಕ ಹಕ್ಕನ್ನು ಹಸ್ತಾಂತರಿಸುತ್ತಾನೆ. ಬ್ರಾಹ್ಮಣ್ಯದ ನಿರಂತರತೆಯ ಪ್ರತಿಷ್ಠಾಪನೆಯ ಪ್ರಕ್ರಿಯೆ ಇದು. ಇಲ್ಲಿ ಜ್ಞಾನಸಂಬಂಧವು ವಂಶ, ಲಿಂಗ, ಜಾತಿ ಹಾಗೂ ಕುಟುಂಬದ ಚೌಕಟ್ಟಿನಲ್ಲಿ ಬಂಧಿತವಾಗಿದೆ. ಆದರೆ ಶರೀಫರ 'ಪದ'ದಲ್ಲಿ ಜನಿವಾರ ತೊಡಿಸಿ, ಮಂತ್ರಬೋಧೆ ಮಾಡುವವ ತಂದೆಯಲ್ಲ-ಗುರು, ಗುರುನಾಥ. ಅವರ ಸಂಬಂಧ ಜಾತಿ, ಕುಲ, ಗೋತ್ರ, ಭವಗಳಿಗೆ ಅತೀತವಾದದ್ದು, ಒಂದು ಜ್ಞಾನವನ್ನು ಬಂಧಿಸುವ ಕ್ರಿಯೆಯಾದರೆ ಇನ್ನೊಂದು ಜ್ಞಾನಶಕ್ತಿಯ ಮೂಲಕವೇ ಬಂಧನಗಳನ್ನು ಭಗ್ನಗೊಳಿಸುವ ಮುರಿದುಹಾಕುವ ಕ್ರಿಯೆ. ಜಾತೀಯತೆ, ಮತೀಯತೆ, ವಂಶಪಾರಂಪರ್ಯಗಳ ಬಂಧನಕ್ಕೀಡಾದ ಜ್ಞಾನವನ್ನು ಜಾತಿ, ಮತ, ಅನುವಂಶಿಕತೆಯಾಚೆಗಿನ ಬಯಲಿಗೆ ತಂದು ನಿಲ್ಲಿಸುವ ಹೋರಾಟ. ಆದ್ದರಿಂದ ವೈದಿಕ ಪಾರಿಭಾಷೆಯ ಜನಿವಾರವು ತನ್ನ ಮೂಲಾರ್ಥವನ್ನು ಕಳೆದುಕೊಂಡು ಅವಧೂತಾರ್ಥವನ್ನು ಪಡೆಯುತ್ತದೆ. ಕೆಡವುವ ಆವೇಶ ಹಾಗೂ ಕಟ್ಟುವ ಸಂಭ್ರಮಗಳೆರಡೂ ಮೇಲಿನ ಸಾಲುಗಳಲ್ಲಿ ವ್ಯಕ್ತವಾಗುತ್ತವೆ.

ಕೈವಾರ ತಾತಯ್ಯನವರ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ಪದವು ಆರ್ಥಿಕತೆ-ಭಕ್ತಿ-ಅನುಭಾವಗಳ ಸಂಬಂಧವನ್ನು ಹಿಂಸೆಯ ನೆಲೆಯಲ್ಲಿ ಚರ್ಚಿಸುತ್ತದೆ. ಇದು ಭಾಗವತ ಪರಂಪರೆಯ ಕೀರ್ತನದ ರೂಪವನ್ನು ಹೋಲುವಂತೆ ಕಂಡರೂ ಆಳದಲ್ಲಿ ಅದನ್ನು ನಿರಾಕರಿಸುತ್ತದೆ. ಶರೀಫ, ಶೈವ ವೀರಶೈವ ಪರಿಭಾಷೆಯಲ್ಲಿ ಮಾತನಾಡುತ್ತಲೇ ಅವುಗಳನ್ನು ನಿರಾಕರಿಸಿ ಅವಧೂತ ತಾತ್ವಿಕತೆಯನ್ನು ಪ್ರತಿಪಾದಿಸುವ



ಮಾದರಿಯನ್ನನುಸರಿಸುತ್ತಾನೆ. ಈತ ಭಾಗವತ ಪರಿಭಾಷೆಯಲ್ಲಿ ಮಾತನಾಡುತ್ತ ಅದನ್ನು ನಿರಾಕರಿಸುತ್ತಾನೆ. ಭಕ್ತಿಜ್ಞಾನ ವೈರಾಗ್ಯಗಳಿಗಾಗಿ ಪ್ರಾಪಂಚಿಕ ಬದುಕಿನ ಸುಖ-ದುಃಖಗಳನ್ನು ತಿರಸ್ಕರಿಸುವ ಧಾರ್ಮಿಕತೆಯ ಮಾದರಿ ಇವನದಲ್ಲ, ಬದಲಾಗಿ ಪ್ರಾಪಂಚಿಕ ಬದುಕು ಸೃಷ್ಟಿಸಿದ ಹಿಂಸೆಯನ್ನು ದಾಖಲಿಸುತ್ತ ಹಿಂಸೆಯಿಂದ ಪಾರಾಗಲು ಅನಿವಾರ್ಯವಾಗಿ ಭಕ್ತಿ ಮತ್ತು ಗುರುಮಾರ್ಗಗಳ ಸಂಕರಿತ ತಾತ್ವಿಕತೆಯನ್ನು ವಿಷಾದದಿಂದಲೇ ಸ್ವೀಕರಿಸುವ ವಾಸ್ತವವನ್ನು ಅವನ ಹಲವಾರು ತತ್ವಪದಗಳು ಹಲವು ನೆಲೆಗಳಿಂದ ವಿವರಿಸುತ್ತವೆ.

'ಈ ಊರೊಳಗೆ ಇಷ್ಟು ಉತ್ಪಾತವೇನೋ ದುರಿತ ಸಂಹಾರಿ ನಾರೇಯಣ ಹರಿ

ವಿಶ್ವಾಸಘಾತಕನು ಇಲ್ಲಿರುವ ಶಾನುಭೋಗ ಕೆಟ್ಟ ದುಷ್ಟ ಭಂಢಗುರಿಕಾರ'

ವಸಾಹತುಶಾಹಿ ಜಮೀನ್ದಾರಿ ಮತ್ತು ಪುರೋಹಿತಶಾಹಿಗಳ ಒಟ್ಟಂದವೇ ಈ ಶಾನುಭೋಗ. 'ವಿಶ್ವಾಸಘಾತಕ ಇಲ್ಲಿರುವ ಶಾನುಭೋಗ' ಎಂಬ ಸಾಲು ಪುರೋಹಿತಶಾಹಿ ವಸಾಹತುಶಾಹಿಯೊಂದಿಗೆ ಪಡೆದ ನೈಚ್ಯಾನುಸಂಧಾನವನ್ನು ಪ್ರಶ್ನಿಸುತ್ತದೆ. ಇಲ್ಲಿರುವ ಪಾಳೆಪಟ್ಟುಗಳು, ಪಾಳೆಗಾರಿಕೆ ಅರಸೊತ್ತಿಗೆಗಳು, ಪುರೋಹಿತ ವರ್ಗದ ಧಾರ್ಮಿಕ ಆಚರಣೆಗಳ ಮೂಲಕವೇ ಸಾಮಾಜಿಕ ಸ್ಥಾನೀಕರಣವನ್ನು ಸ್ಥಾನಬದ್ಧತೆಯನ್ನು ಪಡೆಯುತ್ತಿದ್ದವು. ಈ ಜಮೀನ್ದಾರಿಕೆ, ಶಾನುಭೋಗಿಕೆಗಳು ವಸಾಹತುಶಾಹಿ ಜನರನ್ನು ಆಳಲು ರೂಪಿಸಿದ ನಿಯಮಗಳನ್ನು ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುತ್ತಿದ್ದು ಕೆಲವೊಮ್ಮೆ ನಿಯಮಗಳ ರಚನೆಯಲ್ಲೂ ವಸಾಹತುದಾರರಿಗೆ ಮಾರ್ಗದರ್ಶಿಗಳಾಗಿದ್ದವು. ಶಾನುಭೋಗಿಕೆಯ ವಿಶ್ವಾಸಘಾತುಕತನ, ದೇಶದ್ರೋಹದ ಕ್ರಿಯೆಯಾದಂತೆಯೇ ಆ ನಿಯಮಗಳನ್ನು ಜಾರಿಗೆ ತ[illegible] ಜನರನ್ನು ಈಡುಮಾಡುತ್ತಿದ್ದ ಹಿಂಸೆ ಕೂಡ ಭೀಕರ[illegible] 'ಕೆಟ್ಟ ದುಷ್ಟ ಭಂಡಗುರಿಕಾರ' ಎಂಬ ಪದಗ[illegible] ಹಿಂಸಾತ್ಮಕ ಸ್ವರೂಪವನ್ನು ವಿವರಿಸುತ್ತವೆ.

ಮೋಟ್ನಳ್ಳಿ ಹಸನ್‌ಸಾಹೇಬರ ತತ್ವಪದವು, [illegible] ಶೈವ, ಇಸ್ಲಾಂ ಇತ್ಯಾದಿ ಸ್ಥಾಪಿತ ಧರ್ಮಗಳ ಆಚ[illegible] ನಿರರ್ಥಕತೆಯನ್ನು ವಿವರಿಸುತ್ತ ಆರೂಢ ಪರಂ[illegible] ಸೌಹಾರ್ದತಾ ನೆಲೆಯನ್ನು ತಿಳಿಸುತ್ತದೆ. 'ಅಲ್ಲಲ್ಲಾ [illegible] ಶಿವನಿಲ್ಲಿಲ್ಲ ಶಿವನೆಲ್ಲಿಲ್ಲಾ? ನಿನ್ನ ನೀ ತಿಳಿ [illegible] ಪರಬ್ರಹ್ಮನಲ್ಲಾ?' ಹಸನ್ ಸಾಹೇಬ ಈ ತತ್ವಪ[illegible] ಮುಖ್ಯವಾಗಿ ವೈದಿಕ, ವೀರಶೈವ ಹಾಗೂ [illegible] ಧರ್ಮಗಳ ಜಡ ಆಚರಣೆಗಳನ್ನು ನಿರಾಕರಿಸುತ್ತಾ[illegible] ಮೂರು ಮಾರ್ಗಗಳ ಭಕ್ತಿಮಾರ್ಗಕ್ಕಿಂತ ಯೋಗ[illegible] ಅಥವಾ ಸಾಧನಮಾರ್ಗವೇ ಯೋಗ್ಯವೆಂಬುದು [illegible] ಅಭಿಮತ. ಅವನ ರಚನೆಯಲ್ಲಿ ಬ್ರಾ[illegible] ಮೂಲಭೂತವಾದ ಅಥವಾ ವರ್ಣಾಶ್ರಮ ಧರ್ಮ[illegible] ಪ್ರತಿಪಾದಿಸುವ ಶಾಸ್ತ್ರ ಪುರಾಣಗಳನ್ನು ನಿರಾಕರಿಸ[illegible] ಹಾಗೆಯೇ ವ್ಯಕ್ತಿಗತ ಮೋಕ್ಷದಲ್ಲೋ ಪರ್ಯಾವಸಾನ[illegible] ವೈದಿಕ 'ಸನ್ಯಾಸ'ತ್ವವನ್ನೂ ವಿಡಂಬಿಸಲಾಗಿದೆ. ಎರ[illegible] ಭಾಗದಲ್ಲಿ 'ಶರಣ' ಸಂಸ್ಕೃತಿಯು ಆ ಕಾಲದಲ್ಲಿ ತಲು[illegible] ದುಸ್ಥಿತಿಯ ವಿವರಣೆ ಇದೆ- 'ಗಡ್ಡ, ಜ[illegible] ಗೊಡ್ಡಾಕಳಿನಂತೆ ಚರಿಸ್ಯಾಡಿದರಿಲ್ಲ'. ವೀರಶೈವ [illegible] ಆರೇಳುನೂರು ವರುಷಗಳ ನಂತರ ತ[illegible] ಅಧೋಗತಿಯನ್ನು ವಿವರಿಸುತ್ತ ಅ[illegible] ನಿರಾಕರಿಸುತ್ತಾನೆ. ಕಿವಿಗೆ ಬೆರಳಿಟ್ಟು ಕೂ[illegible] ಧರ್ಮಶಾಸ್ತ್ರ ಪಠಿಸುವ, ಸ್ಥಾಪಿತ ಇಸ್ಲಾಂ ಧರ್ಮ[illegible] ಮೂರನೆಯ ಹಂತದಲ್ಲಿ ವಿರೋಧಿಸುತ್ತಾನೆ. ಇ[illegible] ಪರ್ಯಾಯವಾಗಿ 'ಇಟಪುರುಷನ' ಅರಿ[illegible] ಮಾರ್ಗವನ್ನು ಸೂಚಿಸಿದ್ದಾನೆ.

ಕಡಕೋಳ ಮಡಿವಾಳಪ್ಪನ 'ಶರಣಾರ್ಥಿ' ತತ್ವಪದವು ತತ್ವಪದಕಾರರ ಧಾರ್ಮಿಕ ಸೌಹಾ[illegible] ಪರಿಕಲ್ಪನೆಯ ಸ್ವರೂಪವನ್ನು ಹಾಗೂ [illegible] ಹಿಂದಿರುವ ತಾತ್ವಿಕ-ವಿನ್ಯಾಸಗಳನ್ನು ಖಚಿ[illegible] ನಿರೂಪಿಸುತ್ತದೆ. ಸ್ಥಾಪಿತ ಧರ್ಮಗಳು ಜಡಗ[illegible] ಆಂತರಿಕವಾಗಿ ಪುರೋಹಿತಶಾಹಿ [illegible] ಮೌಢ್ಯಗಳನ್ನು ಬೆಳೆಸಿ ಜನಸಮುದಾಯ[illegible] ಶೋಷಿಸುತ್ತಿದ್ದವು ಹಾಗೂ ಜಡಗೊಂಡ ಧರ್ಮ[illegible] ಪರಸ್ಪರ ದ್ವೇಷ ಅಸಹನೀಯತೆಗಳ ಕಾರ[illegible] ಧಾರ್ಮಿಕ ಹಿಂಸೆಗೆ ವೇದಿಕೆಯಾಗುತ್ತಿದ್ದವ[illegible] ಬಗೆಯ ಧಾರ್ಮಿಕ ಹಿಂಸೆಗೆ ಪರ್ಯಾಯವಾಗಿ[illegible] ಧರ್ಮಜಾತಿ ಜನಾಂಗಗಳ ಜನಸಮುದಾ[illegible] ಸೌಹಾರ್ದತೆಯಿಂದ ಬದುಕನ್ನು ರೂಪಿಸಿಕೊಳ್ಳ[illegible] ಒತ್ತಾಸೆಯಿಂದ 'ಸಾಮರಸ್ಯ'ದ ತಾತ್ವಿಕತೆ[illegible] ಪ್ರತಿಪಾದಿಸಲಾಗಿದೆ.

'ಹಲವು ನಾಮರಿಗೆ ಹಲವು ರೂಪರಿಗೆ [illegible] ಕ್ರಿಯರಿಗೆ ಶರಣಾರ್ಥಿ

ಹಲವು ಜಾಣರಿಗೆ ಹಲವು ಮುಗ್ಧರಿಗೆ [illegible] ಛಲರಿಗೆ ಶರಣಾರ್ಥಿ'

ಶಿವಲಿಂಗಮ್ಮ ಜತ್ತಿಯವರ ತತ್ವಪದವು ಸ್ತ್ರೀ[illegible] 'ಅನುಭಾವ'ದಲ್ಲಿ ಪಾಲುದಾರಳಾಗಿ ಧಾ[illegible] ಅಸಮಾನತೆಯ ಹಿಂಸೆಯಿಂದ ಮುಕ್ತಿ ಪಡೆದ ಸ[illegible] ಸಂಭ್ರಮದಿಂದ ದಾಖಲಿಸುತ್ತದೆ. ವಚನಕಾರ್ತಿ[illegible] ಅನುಭವ ಮಂಟಪ ಸಿಕ್ಕಂಥ ಸಂಭ್ರಮವದು. [illegible] ಪದ್ಯ ತತ್ವಪದಕಾರರು ಹೇಳುವ ಗುರುಮ[illegible] ಸ್ವರೂಪವನ್ನು ವಿವರಿಸುತ್ತದೆ. ಸಾಧಕಿಯ[illegible] ಸಾಧನಾಮಾರ್ಗದಲ್ಲಿ ಲೀನಳಾಗಿರುವುದನ್ನು ತೀವ್ರತೆ[illegible] ಸಂಭ್ರಮಗಳಿಂದ ಬಣ್ಣಿಸುತ್ತದೆ. 'ಮಗಾ ಹುಟ್ಟಿತವ್ವ [illegible] ಮಗಾ ಹುಟ್ಟಿತವ್ವ' ತತ್ವಪದವನ್ನು ಇಲ್ಲಿ ಗಮನಿಸ[illegible] ಜ್ಞಾನದ ಸಾಕ್ಷೀಕರಣವನ್ನು ಮಗುವಿನ ಜನನದ ಪ್ರತಿ[illegible] ಈ ತತ್ವಪದ ನಿರೂಪಿಸುತ್ತದೆ. ಇದೊಂದು ಹೊ[illegible] ಪ್ರತಿಮೆ. 'ಹೆಣ್ಣು ದೇಹ ಮತ್ತು ದೇಹಬದ್ಧವಾ[illegible] ಜ್ಞಾನದ ದಾರಿಗೆ ಅಡೆತಡೆಗಳು ಎಂಬ ಸಾಂಪ್ರ[illegible] ಧರ್ಮ-ಕಲ್ಪನೆಯನ್ನು ಮೀರಿದ ಅಭಿವ್ಯಕ್ತಿ ಇದು[illegible] ಜಗತ್ತಿನೊಂದಿಗಿನ ಸಂಬಂಧವನ್ನು ತುಂಡರಿಸಿ ಮ[illegible] ಜಗತ್ತಿನ ಸಂಬಂಧವನ್ನು ಏರ್ಪಡಿಸುವ ಮಗನ [illegible] ಸಂಭ್ರಮದ ರೂಪಕ ಅರಿವಿನ ಹುಟ್ಟಿನ ಸಂಭ್ರ[illegible] ಅಭಿವ್ಯಕ್ತಿಸುತ್ತದೆ. ಹೀಗೆ ಅನುಭಾವದ [illegible] ನೆಲೆಗಳನ್ನು ಈ ತತ್ವಪದಗಳು ವಿವರಿಸುತ್ತವೆ. ತತ್ವ ಪದ ಸಂಪಾದನೆಯ ಚಾರಿತ್ರಿಕ ಕಾರ್ಯದ [illegible] ಮುನ್ನ ಇನ್ನೂ ಹೆಚ್ಚಿನ ಚರ್ಚೆ ನಡೆಯಲಿ.

● ಡಾ. ಎಂ.ಡಿ.ಒ[illegible]

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭೂಲೋಕ ಶಾಪ, ಸ್ವರ್ಗಲೋಕ ವರ

ಲಭ್ಯವಿರುವ ಪುರಾಣಗಳನ್ನು ತಾತ್ವಿಕವಾಗಿಯಾಗಿ ...ದರೂ, ಭಾವನಾತ್ಮಕವಾಗಿಯಾದರೂ ವಿಶ್ಲೇಷಿಸಿಬಿಡ ...ಮು. ಆದರೆ ಐತಿಹಾಸಿಕವಾಗಿ ವಿವರಿಸಲು ಯತ್ನಿಸಿದರೆ ...ಷ್ಟು ತೊಡಕುಗಳುಂಟಾಗುತ್ತವೆ. ಹಾಗಾದಾಗ ...ತಿಯು ವಿಕಾಸವಾದ ಅಥವಾ ನಡೆದುಬಂದ ...ಯನ್ನು ಗಮನಿಸಿದರೆ ಪುರಾಣಗಳಲ್ಲಿ ಏನನ್ನು ಹೇಳಿದ್ದಾರೆ ...ಬುದನ್ನು ಒಂದು ಹಂತಕ್ಕೆ ಗುರುತಿಸಬಹುದು. ಏನೇ ... ಅವು ಒಗಟುಗಳನ್ನು ಒಡೆಯುವ ಕೆಲಸವೇ ...ತ್ತದೆ ಮತ್ತು ನಾವು ಕಂಡುಕೊಂಡ ಉತ್ತರಗಳೂ ...ದ ಉತ್ತರಕ್ಕೆ ಸಮೀಪವಾಗಿರುವವು ಎಂದು ...ತ್ತದೆಯೇ ಹೊರತು ಸಂಪೂರ್ಣ ಸತ್ಯವೆಂದು ...ಖಂಡಿತವಾಗಿ ಹೇಳಲಾಗದು. ವರ್ಗ ಸಂಕೇತಗಳು ...ವಾಗಿ ವ್ಯಕ್ತವಾಗುವಾಗ ಮತ್ತು ವರ್ಗ ಅಥವಾ ...ಗಳನ್ನು ಅನುಸರಿಸುವವರು ತಮ್ಮ ನೆಲೆಗಳನ್ನು ...ಪಡಿಸಿಕೊಳ್ಳಲು ಮತ್ತು ಅಧಿಕಾರ ಸ್ಥಾಪಿಸಲು ...ವಂತಹ ಪಾಡುಗಳನ್ನು, ಹುನ್ನಾರಗಳನ್ನು ...ಸದಿರುವಷ್ಟು ಅಸೂಕ್ಷ್ಮವಾಗಿರುವಂತಹ ಜನರು ...ತಗಳ ಒಗಟುಗಳನ್ನು ಬಿಡಿಸಲು ಹೋಗುವುದೇ ...ಆಗಲೇ ಭಾವನಾತ್ಮಕ ವಿಷಯಕ್ಕೆ ಅದನ್ನು ಒಳಪಡಿಸಿ ...ಪ್ರದ್ಧೆಗಳನ್ನು ಬೆಳೆಸಿಕೊಂಡುಬಿಡುವುದು.

...ಇಂತಹ ಸಮಯದಲ್ಲಿ ಮತ್ತೊಂದು ಬುದ್ಧಿವಂತರ ...ಪ್ರ ತಲೆ ಎತ್ತಿತು. ಅವರು ಮೌಢ್ಯವನ್ನು ಸ್ವೀಕರಿಸುವಷ್ಟು ...ಸಮತಿಗಳಾಗಿರಲಿಲ್ಲ. ಸಂಸ್ಕೃತಿ ಮತ್ತು ಮಾನವಶಾಸ್ತ್ರ ...ಮನ ಮಾಡಿ ಹುನ್ನಾರಗಳನ್ನು ಬಯಲಿಗೆಳೆಯುವಷ್ಟು ...ತವಾದಿಗಳೋ ಅಥವಾ ಅದನ್ನು ವಿರೋಧಿಸಿ, ...ಸುವಷ್ಟು ಗಟ್ಟಿಗರೋ ಆಗಿರಲಿಲ್ಲ. ಅದು ಅವರಿಗೆ ...ಗಿಯೂ ಇರಲಿಲ್ಲ. ಹಾಗಾಗಿ ಅವರು ತಾವೇ ...ಕೊಂಡ ಮಾರ್ಗವೆಂದರೆ ಅದು ತಾತ್ವಿಕ ಮಾರ್ಗ.

... ಮಾರ್ಗದಲ್ಲಿ ವ್ಯಕ್ತಿಗತ ವಿವರಣೆಗಳಿಗೆ ಮತ್ತು ...ನಗಳಿಗೆ ಹೇರಳವಾದ ಅವಕಾಶಗಳಿವೆ. ಮೌಢ್ಯವನ್ನು ...ರಿಸುತ್ತಾ, ಪುರಾಣದ ಪ್ರತಿಮೆಗಳನ್ನು ಮನ್ನಿಸುತ್ತಾ ... ತಮ್ಮದೇ ಆದಂತಹ ತಾತ್ವಿಕ ವಿವರಣೆಗಳನ್ನು ...ಲು ಪ್ರಾರಂಭಿಸಿದರು. ಹೊಸತರ ದೃಷ್ಟಿಯಂತೆಯೂ, ...ನೆಲೆಯಿಂದ ಕಂಡಂತಾದರೂ ಅಲ್ಲಿ ನಿರಾಕರಣೆ ...ರುವ ಕಾರಣದಿಂದ ಇತರರು ಮನ್ನಿಸತೊಡಗಿದರು ... ಮುಂದೆ ಅವರದೇ ಆದ ತಾತ್ವಿಕ ಪ್ರಸ್ಥಾನಗಳನ್ನು ... ಸಿದ್ಧಗೊಳಿಸಿದರು.

...ಉಪನಿಷತ್ತು ಮತ್ತು ಇತರೇ ಜಿಜ್ಞಾಸುಪೂರ್ಣ ...ಸನಗಳಾಗಿದ್ದವರಿಗೆ ಇಂತಹ ತಾತ್ವಿಕ ನಿರೂಪಣೆ ...ೂ ಕಷ್ಟವೆನಿಸುವುದಿಲ್ಲ. ಇದೊಂದು ಮೌಢ್ಯವನ್ನು ...ಸಂತಹ ಮಾರ್ಗವಾದರೂ ಸೃಜನಶೀಲ ಕೃತಿಗಳಿಗೆ ... ಗೌರವವನ್ನು ಪಡೆದುಕೊಳ್ಳಬಹುದೇ ಹೊರತು ...ತಿಕ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳು ...ಕೊಳ್ಳುವಂತಹ ಅಧಿಕಾರಯುತವಾದ ಅಧ್ಯಯನದ ... ಸೇರಲಾರವು.

...ಹೌದು, ತಾತ್ವಿಕತೆ ಒಂದು ಹಂತದ ಸಮಾಧಾನವನ್ನೂ, ...ವಾದಂತಹ ದೃಷ್ಟಿಕೋನವನ್ನು ಕೊಡುವುದಾದರೂ ...ತ್ವದ ದಾಖಲೆಗಳಾಗವು. ಅವರವರ ಜೀವನಕ್ಕೆ ...ಂದಿರುವಂತಹ ಲೇಪಗಳಾಗಿ ತತ್ವ ಸಿದ್ಧಾಂತಗಳು ... ಬಗೆಯ ಪ್ರತಿಮೆಗಳನ್ನು ಸೃಷ್ಟಿಸುವವು. ಮುಂದೆ ... ತಾವು ಹುಟ್ಟಿದ ಕಾರಣವನ್ನೂ, ಪ್ರೇರೇಪಣೆಗಳನ್ನೂ ...ಸುಪಡಿಸಿಕೊಂಡು ಬರಿಯ ಪ್ರತಿಮೆಗಳಾಗಿಯೇ ...ಹೊಂಡುಬಿಡುವವು. ಇವೇ ಅನುಕರಣೀಯ ...ಯುಗಳ ತಾತ್ವಿಕ ಪತನ.

...ತ್ವಿಕವಾಗಿ ವಿಶ್ಲೇಷಿಸುವವರು ಕೂಡ ಸುಳ್ಳುಗಾರರೂ ... ಮರುಳು ಮಾಡುವಂತಹ ಮೋಸಗಾರರೇ. ಅದು ...ಗೆಯ ದಾರಿಯನ್ನು ಹಿಡಿಯುವುದೋ ಅಥವಾ ...ಜಕಾರಿಣಿಯಾಗಿರುವುದೋ ಅದು ಆತನ

ವ್ಯಕ್ತಿಗತವಾದಂತಹ ಸ್ವಾರ್ಥಪರತೆ ಅಥವಾ ನಿಸ್ವಾರ್ಥಪರತೆಯ ಮೇಲೆ ನಿಂತಿರುತ್ತದೆ.

ಆನಂದಕ್ಕೆ ವಿವಿಧ ಮಾರ್ಗಗಳು

'ಚುಲ್ಲ ನಿದ್ದೇಶ' ಎಂಬ ಬೌದ್ಧ ಗ್ರಂಥ ಅಂದಿನ ಭಾರತದಲ್ಲಿ ಪ್ರಚಲಿತವಿದ್ದ ಹಲವು ಮತಧರ್ಮಗಳನ್ನು ಅವುಗಳ ಶಾಸ್ತ್ರ ಹಾಗೂ ಆಚಾರಗಳ ಆಧಾರದಿಂದ ಗುರುತಿಸುತ್ತದೆ. ಆಜೀವಕ ಶ್ರಾವಕ(ಶಿಷ್ಯ)ರ ಗುಂಪಿನವರು ಆಜೀವಕರೆಂದು ಕರೆಯಿಸಿಕೊಳ್ಳುತ್ತಿದ್ದರು. ಅವರು ತಮ್ಮ ಜೀವನೋಪಾಯಕ್ಕಾಗಿ ವಿಶೇಷ ನಿಯಮಗಳನ್ನು ಅನುಸರಿಸುತ್ತಿದ್ದ ಭಿಕ್ಷುಗಳು. ನಿಗತ್ತ ಶ್ರಾವಕರು, ಇವರು ಎಲ್ಲಾ ಬಂಧನಗಳಿಂದ ಮುಕ್ತರಾದ ಭಿಕ್ಷುಗಳು. ಇವರನ್ನು ನಿಗೌತರೆಂದೂ ಕರೆಯುತ್ತಿದ್ದರು. ಜಟಿಲಶ್ರಾವಕರು, ತಮ್ಮ ಜಡೆಗಳನ್ನು ಗಂಟು ಹಾಕಿಕೊಳ್ಳುತ್ತಿದ್ದ ಭಿಕ್ಷುಗಳು, ಪರಿವ್ರಾಜಕ ಶ್ರಾವಕರೆಂದರೆ ಸಮಾಜದಿಂದ ದೂರವಿದ್ದಂತಹ ಭಿಕ್ಷುಗಳು. ಹೀಗೆ ಹಲವು ಬಗೆಯ ಸಂನ್ಯಾಸಿಗಳನ್ನು, ಭಿಕ್ಷುಗಳನ್ನು ಮತ್ತು ಯತಿಗಳನ್ನು ನೋಡಬಹುದಿತ್ತು. ಈ ಬಗೆಯ ಯಾವುದೇ ಸಾಧಕರು ಮೋಕ್ಷಾಪೇಕ್ಷಿಗಳಾಗಿರುತ್ತಿದ್ದರೇ ಹೊರತು, ತಮ್ಮ ಸಾಧನೆಯನ್ನು ಯಾವುದೇ ಲೌಕಿಕ ಫಲಾಪೇಕ್ಷೆಗಾಗಿಯೋ, ಅಧಿಕಾರಕ್ಕಾಗಿಯೋ ಅಥವಾ ಸ್ವಹಿತಕ್ಕಾಗಿಯೋ ಬಳಸುತ್ತಿರಲಿಲ್ಲ. ನಿರ್ವಾಣ ಅಥವಾ ಮೋಕ್ಷಪೇಕ್ಷೆಯ ಕಡೆಗೆ ಮಾತ್ರ ಮುಖ ಮಾಡಿದ್ದರು.

ವೈದಿಕರ ಯಜ್ಞ ಅಥವಾ ಇನ್ನಾವುದೇ ಬಗೆಯ ಆಚರಣೆಗಳೆಲ್ಲವೂ ಪುತ್ರ ಸಂತಾನಕ್ಕಾಗಿಯೋ, ರಾಜ್ಯ ವಿಸ್ತಾರಕ್ಕಾಗಿಯೋ, ಶಕ್ತಿ ಸಂಪಾದನೆಗಾಗಿಯೋ, ಶತ್ರುನಾಶಕ್ಕಾಗಿಯೋ, ಒಟ್ಟಾರೆ ಅವರ ಗಮನವು ಲೌಕಿಕವಾಗಿದ್ದಲ್ಲದೇ ಕೈವಲ್ಯಾಕಾಂಕ್ಷೆಯನ್ನು ಹೊಂದಿರಲಿಲ್ಲ. ಇಂತಹ ಯಜ್ಞಾಚರಣೆಗಳನ್ನು ಧಿಕ್ಕರಿಸಿ ನಿರ್ವಾಣಕ್ಕಾಗಿ ಹಾತೊರೆದವರು ವೈದಿಕ ಪದ್ಧತಿಗಳಿಂದ, ಆರ್ಯರ ನಂಬುಗೆಗಳಿಂದ ಹೊರಗೆ ಬಂದರು. ಲೌಕಿಕ ಲಾಭಗಳೂ ಮತ್ತು ಸಾಂಸಾರಿಕ ಆಸಕ್ತಿಗಳೂ ಆದಂತಹ ಸಂತಾನಭಾಗ್ಯ ಸಾಮ್ರಾಜ್ಯ ವಿಸ್ತಾರ, ವಸ್ತ್ರಾಭರಣಗಳ ವ್ಯಾಮೋಹ, ಅಧಿಕಾರ, ಶಕ್ತಿ ಸಂಪಾದನೆ, ಶತ್ರು ನಾಶ ಇತ್ಯಾದಿಗಳನ್ನು ಸಾಕ್ಷೀಕರಿಸಿದರೂ ಉಳಿಯುವಂತಹ ಅತೃಪ್ತಿ ಅಥವಾ ನಿರಾಸಕ್ತಿ ಜೀವನದಲ್ಲಿ ಜಿಗುಪ್ಸೆಗೆ ಕಾರಣವಾಗುತ್ತಿತ್ತು. ಈ ಬಗೆಯಲ್ಲಿ ಆವರಿಸುವಂತಹ ಜಿಗುಪ್ಸೆಯು ಎಂತಹ ಭೋಗ ವೈಭವದಲ್ಲಿ ಇದ್ದರೂ ವ್ಯಕ್ತಿಗತವಾಗಿ ಸುಖವಾಗಿರಲು ಸಾಧ್ಯವಿರುತ್ತಿರಲಿಲ್ಲ. ಶಾಂತಿಯ ಭಾಗ್ಯ ಲಭಿಸುತ್ತಿರಲಿಲ್ಲ. ಮನಸ್ಸಿನ ಪ್ರಶಾಂತತೆಯನ್ನು ಕಂಡುಕೊಳ್ಳಲು, ಜಿಗುಪ್ಸೆಯನ್ನು ನಿವಾರಿಸಿಕೊಳ್ಳಲು ಅನೇಕರು ಅನೇಕ ತಂತ್ರಗಳನ್ನು ಕಂಡುಕೊಂಡರು. ಅವರಲ್ಲಿ ಕೆಲವರು ಸಂಸಾರವನ್ನು, ಸುಖ ಲೋಲುಪತೆಯನ್ನು ನಶ್ವರ ಮತ್ತು ಹೇಯವೆಂದೂ ತಿರಸ್ಕರಿಸಿದರೆ ಮತ್ತೆ ಕೆಲವರು ಜಗತ್ತನ್ನು ಅದ್ಭುತವಾದುದೆಂದು ಕಂಡುಕೊಂಡು ಅದನ್ನು ಸಂಪೂರ್ಣವಾಗಿ ಸುಖಿಸುತ್ತಾ, ಅದರಿಂದ ಜಿಗುಪ್ಸೆ ಉಂಟಾಗದಂತೆ ತಾವು ಶಕ್ತರಾಗಿದ್ದು, ಅದಕ್ಕೆ ಅಂಟಿಕೊಳ್ಳದಂತೆ ಹೊರಗೇ ಉಳಿದರು. ಈ ಎರಡನೆಯ ವಿಭಾಗಕ್ಕೆ ಸೇರಿದವರು ಬಹುಪಾಲು ಶಿವನ ಮಾರ್ಗದವರು.

ಸಂಸಾರವನ್ನು ಹೇಯವೆಂದು ಕರೆಯುವುದನ್ನು ಅವರು ಒಪ್ಪುತ್ತಿರಲಿಲ್ಲ. ದೇವತೆಗಳೇ ಮೊದಲಾದ ಆರ್ಯ ವರ್ಗದ ಗಂಧರ್ವಾದಿ ಗುಂಪುಗಳು ಭೂಮಿಯನ್ನು ಅಥವಾ ಭೂಲೋಕವನ್ನು ಕ್ಷುಲ್ಲಕವೆಂದು ಕಡೆಗಣಿಸಿದಂತೆ ತಿರಸ್ಕರಿಸಿರಲಿಲ್ಲ.

ಶಾಪಗ್ರಸ್ತ ಪಾಪಿಗಳು

ವೈದಿಕರಾಗಲಿ ಅಥವಾ ಗಂಧರ್ವ, ಯಕ್ಷ, ಕಿಂಪುರುಷರಾದಿಯಾಗಿ ಇತರ ದೇವತೆಗಳಾಗಲಿ ಭೂಮಿಯ ಬಗ್ಗೆ ಯಾವ ಗೌರವವನ್ನೂ ತಳೆದಿರಲಿಲ್ಲ. ಭೂಲೋಕದಲ್ಲಿ ಜನ್ಮ ತಾಳುವುದು ಶಾಪದ ಫಲವೆಂದೇ ಅವರ ಭಾವನೆಯಾಗಿತ್ತು. ಸ್ವರ್ಗದಲ್ಲಿ ಯಾವುದಾದರೊಂದು ತಪ್ಪು ಮಾಡಿದಾಗ ಶಾಪ ಪಡೆದು ಭೂಲೋಕದಲ್ಲಿ ಜನ್ಮ ತಳೆಯುತ್ತಿದ್ದರು. ಮನುಷ್ಯ ವಿರೋಧಿ, ಭೂಮಿಯೆಂಬ ಜೀವಂತ ಗ್ರಹದ ವಿರೋಧಿಗಳು ಅವರಾಗಿದ್ದರು. ಭೂಲೋಕದಲ್ಲಿ ಜನ್ಮ ತಳೆದ ಮೇಲೂ ಅವರು ಸದಾ ಸ್ವರ್ಗಕ್ಕೆ ಹೋಗುವುದೇ ಅವರ ಉದ್ದೇಶವಾಗಿತ್ತು. ಸ್ವರ್ಗದಲ್ಲಿ ಸುಖಿಸುವ ಕಲ್ಪನೆಯಲ್ಲಿ ಭೂಮಿಯ ಮೇಲಿನ ಜೀವನವನ್ನು ತಿರಸ್ಕರಿಸುತ್ತಿದ್ದರು. ಮಾನವರಾಗಿ ಹುಟ್ಟುವುದು ಶಾಪಗ್ರಸ್ತರು ಮತ್ತು ಪಾಪಿಗಳು ಎಂಬ ಭಾವನೆಯೇ ಅವರಲ್ಲಿ ಇದ್ದದ್ದು.

ಮಹಾಭಾರತದಲ್ಲಿ ಅಷ್ಟಾವಸುಗಳು ಶಾಪದಿಂದಾಗಿ ಗಂಗೆಯಲ್ಲಿ ಹುಟ್ಟುತ್ತಾರೆ. ಅವರು ಎಷ್ಟರಮಟ್ಟಿಗಿನ ತಿರಸ್ಕಾರವನ್ನು ತೋರಿಸುತ್ತಾರೆಂದರೆ, ಗಂಗೆ ಮಗುವು ಹುಟ್ಟಿದ ಕೂಡಲೇ ನದಿಗೆ ಎಸೆದು ಕೊಲ್ಲುತ್ತಾಳೆ.

ಬೈಬಲ್ಲಿನಲ್ಲಿಯೂ ಇಂತಹ ಪ್ರಕೃತಿ ವಿರೋಧಿ ಪರಿಕಲ್ಪನೆಯಿದೆ. ಆದಾಮ ಮತ್ತು ಹವ್ವರು ಸ್ವರ್ಗದಲ್ಲಿ ದೇವರು ಹೇಳಿದಂತೆ ಕೇಳಿಕೊಂಡು ಸುಖವಾಗಿದ್ದವರು, ಜ್ಞಾನವೃಕ್ಷದ ಹಣ್ಣನ್ನು ತಿಂದು ಬೆತ್ತಲೆ, ಮರೆ, ಸಂಕೋಚ ಇತ್ಯಾದಿಗಳ ಅರಿವು ಉಂಟಾದಾಗ ದೇವರು ಶಪಿಸುತ್ತಾನೆ. ಸ್ವರ್ಗವಾದ ಏದೆನ್ ತೋಟದಿಂದ ಇಬ್ಬರನ್ನೂ ಕಳುಹಿಸಿಬಿಡುತ್ತಾನೆ. ಹೆರುವುದು, ಹೆರುವಾಗ ನೋಯುವುದು, ಗಂಡನ ಒಡೆತನದಲ್ಲಿರಬೇಕಾದ ಅನಿವಾರ್ಯತೆ ಹೆಣ್ಣಿಗಿರುವುದು ಇತ್ಯಾದಿ ಶಾಪಗಳನ್ನು ಹೆಣ್ಣಿಗೆ ಕೊಟ್ಟರೆ, ಗಂಡಿಗೆ ಜೀವಮಾನವಿಡೀ ದುಡಿಯುವ ಶ್ರಮವನ್ನು ಭರಿಸುವ ಶಾಪವನ್ನು ಕೊಡುತ್ತಾನೆ.

ಹೀಗೆ ಕ್ರೈಸ್ತರಲ್ಲೂ ಮತ್ತು ಹಿಂದೂಗಳಲ್ಲೂ ಮನುಷ್ಯ ಜನ್ಮವಿದು ಪಾಪಿಯ ಜನ್ಮವೆಂದು ಗೋಳಾಡುವ ವಾಡಿಕೆ ಇದೆ. ತಾವು ಪಾಪಿ, ಪಾಪಿ ಎಂದು ಇಬ್ಬರೂ ಗೋಳಿಡುತ್ತಾರೆ.

ಹೇಯ ಸಂಸಾರ

ಶ್ರೇಷ್ಠ ಮತ್ತು ಕನಿಷ್ಠತೆಗಳನ್ನು ನಂಬುವವನು ಭೇದಗಳನ್ನು ಸೃಷ್ಟಿಸುತ್ತಾನೆ. ಸ್ವರ್ಗ ಮತ್ತು ಭೂಮಿಗಳನ್ನು ಬೇರೆಯಾಗಿ ಪರಿಗಣಿಸುವವನು ತನ್ನ ಪ್ರಾಮುಖ್ಯತೆಯನ್ನು ಸ್ವರ್ಗಕ್ಕೆ ಕೊಡುವ ಕಾರಣ ಸುಖವಲ್ಲದೇ ಮತ್ತೇನೂ ಇಲ್ಲ. ಈ ಭೂಮಿಯಲ್ಲಿ ಹುಟ್ಟಿದ ಬಳಿಕ ದುಡಿಯಬೇಕು, ಆಹಾರ ಸೇವಿಸಬೇಕು, ಮಲಮೂತ್ರಗಳನ್ನು ವಿಸರ್ಜಿಸಬೇಕು, ಸಾವು, ನೋವುಗಳಲ್ಲಿ ನರಳಬೇಕು ಇತ್ಯಾದಿ. ತಾಯಿಯ ಗರ್ಭದಲ್ಲಿ ಮಗುವಿಗೆ ಒಂದು ಪ್ರತ್ಯೇಕವಾದ ಕೋಶವೊಂದು ಇರುತ್ತದೆ ಎಂಬ ಅರಿವಿಲ್ಲದ ಆಗಿನವರು ಹೊಟ್ಟೆಯಲ್ಲಿರುವ ಮಲಮೂತ್ರಗಳಲ್ಲಿ ಮಗುವಾಗಿ ಮಲಗಿದ್ದು ನರಳಿಕೊಂಡಿರಬೇಕಾಗುತ್ತದೆ ಎಂದು ಭಾವಿಸಿದ್ದರು.

ಶಂಕರಾಚಾರ್ಯ ತಮ್ಮ ಶಿವಾಪರಾಧಕ್ಷಮಾಪಣ ಸ್ತೋತ್ರದಲ್ಲಿ ಈ ರೀತಿಯಾಗಿ ಹೇಳುತ್ತಾರೆ:

"ಮೊದಲು ಪಾಪ ಕರ್ಮದ ಫಲವಾಗಿ ನಾನು ತಾಯಿಯ ಗರ್ಭದಲ್ಲಿ ಇರುವಾಗಲೇ ಪಾಪ ನನ್ನನ್ನು ಬಹುವಾಗಿ ಪೀಡಿಸಿತು. ಅಲ್ಲಿನ ಮಲಮೂತ್ರಗಳ ಮಧ್ಯದಲ್ಲಿದ್ದ ನನ್ನನ್ನು ಜಠರಾಗ್ನಿ ಬೇಯಿಸಿತು. ಅಲ್ಲಿ ಏನೇನು ದುಃಖಗಳು ಕಾಡಿಸಿದವು ಎಂಬುದನ್ನು ವರ್ಣನೆ ಮಾಡಿ ಹೇಳುವುದು ಯಾರಿಂದ ತಾನೇ ಸಾಧ್ಯ? ಶಿವ ಶಿವ ಶಿವ ಭೋ, ಶ್ರೀ ಮಹಾದೇವ ಶಂಭೋ.

ಬಾಲ್ಯದಲ್ಲಿ ನನ್ನ ದುಃಖಗಳು ಅತಿರೇಕವಾಗಿದ್ದವು; ಮಲ ಮೆತ್ತಿದ ದೇಹ, ಸದಾ ಸ್ತನ್ಯಪಾನದ ಆಸಕ್ತಿ, ನನ್ನ ಇಂದ್ರಿಯಗಳನ್ನು ನಾನೇ ಬಳಸಿಕೊಳ್ಳಲಾಗದ ದೌರ್ಬಲ್ಯ ತಾವು ಮಾಡಿದ ಪಾಪ ಫಲದಿಂದ (ಸೊಳ್ಳೆ, ನೊಣ ಮೊದಲಾದವುಗಳಾಗಿ) ಹುಟ್ಟಿದ ಜಂತುಗಳು ಬೇರೆ ನನ್ನನ್ನು ಪೀಡಿಸಿದವು. ನಾನಾ ರೋಗಗಳಿಗೆ ಒಳಗಾಗಿ ದುಃಖದಿಂದ ರೋದನ ಮಾಡುತ್ತಾ ಕೇವಲ ಅಸ್ವತಂತ್ರನಾಗಿ ಪರವಶನಾಗಿದ್ದೆ ಆದ್ದರಿಂದ ಶಂಕರನ ಸ್ಮರಣೆ ಮಾಡಲಿಲ್ಲ. ಶಿವ ಶಿವ ಶಿವ ಭೋ, ಶ್ರೀ ಮಹಾದೇವ ಶಂಭೋ."

ಹೀಗೆ ಹಂತಹಂತವಾಗಿ ತನ್ನ ಬಾಲ್ಯ, ಯೌವನ ಮತ್ತು ವೃದ್ಧಾಪ್ಯಗಳನ್ನು ತಿರಸ್ಕರಿಸುತ್ತಾ, ದುಃಖಿಸುತ್ತಾ ಜೀವನವನ್ನೇ ತಿರಸ್ಕರಿಸುತ್ತಾರೆ. ಶಂಕರಾಚಾರ್ಯರ ಕೃತಿಗಳಲ್ಲಿ ಎಲ್ಲಿಯೂ ತಾವು ನಂಬಿರುವ ಸಿದ್ಧಾಂತಕ್ಕೆ, ತಾವೇ ನ್ಯಾಯ ಒದಗಿಸುವುದಿಲ್ಲ. ತಾನೇ ಬ್ರಹ್ಮನ್ ಎನ್ನುವ ಶಂಕರಾಚಾರ್ಯರೇ ಅತಿ ಹೆಚ್ಚು ದೇವತಾಸ್ತುತಿಗಳನ್ನು, ಶೋಕಗೀತೆಗಳನ್ನು ಬರೆದಿರುವುದು. ಶಿವನ ಬಳಿಯಾಗಲಿ, ದೇವಿಯ ಮುಂದಾಗಲಿ ತೋಡಿಕೊಳ್ಳುವ ಅವರ ಗೋಳಿನ ಗೀತೆಗಳಲ್ಲಿ ಅವರು ಜೀವನವನ್ನು, ಸಂಸಾರವನ್ನು ಹೇಯವೆಂದು ತಿರಸ್ಕರಿಸುವುದು, ನೈಸರ್ಗಿಕವಾದಂತಹ ಹುಟ್ಟು, ಜೈವಿಕ ಅವಸ್ಥೆಗಳು, ಮರಣ ಇತ್ಯಾದಿಗಳನ್ನು ನಿರಾಕರಿಸುವಂತಹ ನಕಾರಾತ್ಮಕವಾದ ಧೋರಣೆಗಳನ್ನು ಧಾಳಾಗಿ ಕಾಣುತ್ತೇವೆ.

ಇರಲಿ, ಬೈಬಲ್ಲಿನಲ್ಲಾಗಲಿ ಅಥವಾ ಭಾರತೀಯ ಪುರಾಣಗಳಲ್ಲಾಗಲಿ ಯಾವ ಸ್ವರ್ಗವನ್ನು ಅತ್ಯುತ್ತಮವೆಂದೂ, ಯಾವ ಭೂಮಿಯನ್ನು ಅಧಮವೆಂದೂ, ಶಾಪಗ್ರಸ್ತರಿಗೆ ಮತ್ತು ಪಾಪಿಗಳಿಗೆ ಸ್ಥಳವೆಂದು ಹೇಳಿದರೋ ಅದೇ ಪರಿಕಲ್ಪನೆ ಮುಂದೆ ಕ್ರಮೇಣವಾಗಿ ಮಾರ್ಪಾಟಾಯಿತು. ಉಪನಿಷತ್ತಿನ ಋಷಿಗಳಿಂದಾಗಿ, ತಂತ್ರ ಸಾಧನೆಯ ಶಾಕ್ತ ಮತ್ತು ಶೈವರಿಂದಾಗಿ, ಆಧ್ಯಾತ್ಮಿಕ ದೃಷ್ಟಿ ಮತ್ತು ಕೈವಲ್ಯದ ಪರಿಕಲ್ಪನೆಗಳನ್ನು ಹೊಂದಿದ ದಾರ್ಶನಿಕರಿಂದಾಗಿ ಭೂಮಿಯನ್ನು, ಪ್ರಾಕೃತಿಕವಾದಂತಹ ಅವಸ್ಥೆಗಳನ್ನು ಹೇಯವೆಂದು, ತುಚ್ಛವೆಂದು ನಿಂದಿಸುವುದು ನಿಂತಿತು. ಜನನ ಮತ್ತು ಮರಣವನ್ನು ಮೀರಿದಂತಹ ಸ್ಥಿತಿ, ಅಸ್ತಿತ್ವದ ಸಮಭಾವ ಸ್ಥಿತಿಯನ್ನು ಜನನ ಮರಣಗಳನ್ನು ಮೀರಿರುವಂತಹ ಅಮರತ್ವವೆಂದು ಹೇಳಲಾಯಿತು. ಎಲ್ಲಾ ಬಂಧನಗಳಿಂದ ಕಳಚಿಕೊಂಡು, ವಸ್ತು ಮತ್ತು ಪ್ರಪಂಚವನ್ನು ಸಾಕ್ಷಿಯಾಗಿ ನೋಡುವ ಒಂದು ಹೊಸ ಮಾರ್ಗವು ಸಾಧಿಸಿ ತೋರಿಸಲ್ಪಡತೊಡಗಿದವು. ಈ ಮಾರ್ಗದಲ್ಲಿ ವಸ್ತುವನ್ನು, ಪ್ರಪಂಚವನ್ನು, ವ್ಯಕ್ತಿಯ ಮತ್ತು ಪ್ರಕೃತಿಯ ಯಾವುದೇ ಅವಸ್ಥೆ ಮತ್ತು ಸ್ಥಿತಿಗತಿಗಳನ್ನು ಮೆಚ್ಚುತ್ತಾ ಅಂಟಿಕೊಳ್ಳದೇ, ತಿರಸ್ಕರಿಸುತ್ತಾ ಹೇಯವೆಂದು ಜರಿಯದೇ ಬರಿದೇ ನೋಡುವ ಮಾರ್ಗವು ಸ್ವರ್ಗ ಮತ್ತು ಭೂಲೋಕದ ಕಲ್ಪನೆಗಳನ್ನು ತುಂಡರಿಸತೊಡಗಿತು.


ಅಮರತ್ವ ಮತ್ತು ಅಸ್ತಿತ್ವ

ಪ್ರಪಂಚದಲ್ಲಿ ದೊರಕುವುದನ್ನು ತಳ್ಳಿ ಹಾಕದೇ ಅವನ್ನು ಭೋಗಿಸುತ್ತಾ, ದೊರಕದೇ ಇರುವುದನ್ನು ಭ್ರಮಿಸುತ್ತಾ, ಹಾತೊರೆಯುತ್ತಾ ಖಿನ್ನರಾಗದೇ, ಇಂತಹ ಭಾವಗಳಿಂದ ಮುಕ್ತವಾಗಿರುವಂತಹ ಒಂದು ಸ್ಥಿತಿಯನ್ನು ಕಂಡುಕೊಂಡರು. ಯಾವ ದ್ವಂದ್ವಗಳೂ ಇಲ್ಲದೇ ಪ್ರಶಾಂತವಾಗಿ ಅದರಲ್ಲಿ ವಿಹರಿಸುವ ಸ್ಥಿತಿಗೆ ಶಾಂತಿಯೆಂದೂ, ಅದರಿಂದ ಉಂಟಾಗುವ ಭಾವಕ್ಕೆ ಆನಂದವೆಂದು ಕರೆದರು. ಹೀಗೆ ಸ್ವರ್ಗದ ಉಚ್ಛ ಕಲ್ಪನೆಯು ಆನಂದದ ಕಡೆಗೆ ಹೊರಳಿತು.

ವೈದಿಕರದು ಲೌಕಿಕ ಸುಖಾಪೇಕ್ಷೆಯಾದರೆ, ಋಷಿಗಳು ಮತ್ತು ದಾರ್ಶನಿಕರು ಸತ್ಯಾನಂದದ ಕಡೆ ಹೊರಳಿದರು. ಅವರದು ವಸ್ತು, ಅಧಿಕಾರ ಇತ್ಯಾದಿಗಳ ಮೇಲೆ ಆಧಾರಿತವಾದಂತಹ ಸುಖವಾದರೆ, ಇವರದು ಏನೂ ಇಲ್ಲದೇ ಇರುವಂತಹ, ಬಿಟ್ಟುಕೊಡುವಂತಹ ಸ್ಥಿತಿಯ ಆನಂದ. ಇವರಿಗೆ ಪಾಪಪುಣ್ಯಗಳ ಬಂಧನವೂ ಇರುವುದಿಲ್ಲ. ತಾವು ಪಾಪಿಗಳೆಂದು ಕರೆದುಕೊಳ್ಳುವುದಿಲ್ಲ. ಮಡಿ, ಮೈಲಿಗೆಗಳಿರುವುದಿಲ್ಲ. ಪ್ರಾಕೃತಿಕವಾಗಿರುವಂತಹ ಯಾವ ಪ್ರಕ್ರಿಯೆಗಳನ್ನೂ ಪಾಪ ಎಂದು ಅನ್ನುವುದಿಲ್ಲ. ದೇಹ ಪೋಷಣೆಗೆ ಹಿಂದೆ ಸರಿಯುವುದಿಲ್ಲ. ಹಸಿವು, ನಿದ್ರೆ, ನೀರಡಿಕೆ, ಮೈಥುನ ಇತ್ಯಾದಿಗಳನ್ನು ನಿರಾಕರಿಸುವುದಿಲ್ಲ. ಇಂತಹ ಧೋರಣೆಯ ಮಾರ್ಗವು ಶೈವ ಮಾರ್ಗಕ್ಕೆ ಬಹಳ ಹತ್ತಿರವಾಯಿತು. ಪ್ರಕೃತಿಯನ್ನೂ ಅಥವಾ ಶಕ್ತಿಯನ್ನೂ ಒಳಮಾಡಿಕೊಂಡಿರುವುದರಿಂದ ನೈಸರ್ಗಿಕವಾದಂತಹ ಸಂಗತಿಗಳನ್ನು ನಿರಾಕರಿಸಲಿಲ್ಲ.

ಶಿವನನ್ನು ಧ್ಯಾನಿಸುತ್ತಾ ನೈಸರ್ಗಿಕವಾದ ವಿಷಯಗಳನ್ನು ಹೇಯವಾಗಿ ಕಂಡ ತಬ್ಬಾದಂಬರದ ಕವಿ ಶಂಕರಾಚಾರ್ಯರ ಧೋರಣೆ ಆಶ್ಚರ್ಯವೆನಿಸುವುದು ಮಾತ್ರವಲ್ಲದೇ ಅವರಿಗೆ ಶಾಕ್ತ, ಶೈವ, ವೈಷ್ಣವಗಳಾದಿಯಾಗಿ ಯಾವುದೇ ಮಾರ್ಗಗಳ ಸ್ಪಷ್ಟತೆಯಿಲ್ಲದೇ ಗೊಂದಲಕ್ಕೀಡಾಗಿದ್ದರೇನೋ ಎಂದು ಅನಿಸುತ್ತದೆ.







ಎಲ್ಲಿದೆ ಒಳ್ಳೆಯ ದಿನಗಳು? ಎಲ್ಲಿದೆ ಕಪ್ಪು ಹಣ?

ಆರೆಸ್ಸೆಸ್‌ನ ರಾಜಕೀಯ ಮುಖವಾಗಿರುವ ಬಿಜೆಪಿ ಈ ಬಾರಿ 2014ರ ಚುನಾವಣೆಗಳಲ್ಲಿ ಪ್ರಚಂಡ ಬಹುಮತ ಗಳಿಸಿ ದಿಲ್ಲಿಯ ಗದ್ದುಗೆ ಏರಿದ್ದೇ ತಡ, ಚಡ್ಡಿಗಳ ಬೆಲ್ಟ್ ಸಂಪೂರ್ಣ ಸಡಿಲವಾಗಿದೆ. ದಿನಗಳೆದಂತೆ ಅವರ ಆಟಾಟೋಪ ಮುಗಿಲು ಮುಟ್ಟುತ್ತಿದೆ. ಆರೆಸ್ಸೆಸ್‌ನ ಈ ಫ್ಯಾಸಿಸ್ಟ್ ಪಡೆಗಳನ್ನು ಹೇಳುಕೇಳುವವರಿಲ್ಲ ಎಂದಾಗಿದೆ. ಅವರ ಲಂಗುಲಗಾಮಿಲ್ಲದ ನಾಲಿಗೆಗಳಿಂದ ಕೊಚ್ಚೆಯ ಪ್ರವಾಹವೇ ಹರಿಯತೊಡಗಿದೆ. ಅವರೀಗ ತಮ್ಮ 'ಹಿಂದೂ ರಾಷ್ಟ್ರ' ನಿರ್ಮಾಣದ ಅಜೆಂಡಾಗಳನ್ನೆಲ್ಲ ಪೂರ್ಣ ಪ್ರಮಾಣದಲ್ಲಿ, ಬಹಿರಂಗವಾಗಿ ಮತ್ತು ಯಾರ ಪರಿವೆಯೂ ಇಲ್ಲದೆ ದೇಶದಾದ್ಯಂತ ಜಾರಿಗೊಳಿಸಲು ಹೊರಟಿದ್ದಾರೆ. ಈ ಹಿಂದೆ ಎನ್‌ಡಿಎ ಸರ್ಕಾರವಿದ್ದ ಕಾಲದಲ್ಲಿ ಪಠ್ಯಪುಸ್ತಕಗಳ ಕೇಸರೀಕರಣದಂತಹ ಒಂದೆರಡು ಕಾರ್ಯಸೂಚಿಗಳನ್ನು ಕೈಗೆತ್ತಿಕೊಂಡಿದ್ದರಾದರೂ ಮಿತ್ರಪಕ್ಷಗಳಿಂದಾಗಿ ಪೂರ್ತಿ ಬಾಲ ಬಿಚ್ಚಲು ಅವಕಾಶ ಸಿಕ್ಕಿರಲಿಲ್ಲ. ಆದರೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಲಾಗಾಯ್ತು ಕಾನೂನಿನ ಭಯವೇ ಇಲ್ಲದೆ ನ್ಯಾಯವ್ಯವಸ್ಥೆಗೇ ಸೆಡ್ಡುಹೊಡೆಯಲಾರಂಭಿಸಿದ್ದಾರೆ. ಇತ್ತೀಚೆಗೆ ತಮ್ಮ ಸಂಖ್ಯಾಬಲ ಬಳಸಿ ಗಂಗೊಳ್ಳಿ, ಮಂಗಳೂರುಗಳಲ್ಲಿ ಆರೋಪಿಗಳನ್ನು ಬಿಡುಗಡೆ ಮಾಡಿಸಿಕೊಂಡಿರುವುದು ಪ್ರಜಾಸತ್ತೆಗೆ ಎದುರಾಗಿರುವ ಗಂಭೀರ ಅಪಾಯದ ಸೂಚಕ.


ಇವತ್ತು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕೋಮು ಘಟನೆಗಳು, ಹೇಳಿಕೆಗಳು ಮುಂತಾದುವನ್ನೆಲ್ಲಾ ಜೋಡಿಸುವ ಕೊಂಡಿ ಒಂದೇ ಆದರೂ ಕೆಲವು 'ಸರ್ವಜ್ಞ' ಮಾಧ್ಯಮ ವಿಶ್ಲೇಷಕರು ಮತ್ತು ಟಿವಿ ಆಂಕರ್‌ಗಳು ಇವೆಲ್ಲ ಒಂದಕ್ಕೊಂದು ಸಂಬಂಧವಿರದ ಪ್ರತ್ಯೇಕ ಘಟನೆಗಳೆಂದು ಹೇಳುವಾಗ ಮರಳಲ್ಲಿ ಕೊರಳು ಹುದುಗಿಸುವ ಉಷ್ಟ್ರ ಪಕ್ಷಿಯ ನೆನಪಾಗುತ್ತದೆ. ಮೋದಿಪರ ಕಾರ್ಪೊರೇಟುಗಳು ಮಾಧ್ಯಮಗಳನ್ನು ಖರೀದಿಸಿರುವುದು ನೆನಪಾಗುತ್ತದೆ. ಮೋದಿ ಭಜನೆ ಮಾಡಲೊಪ್ಪದ ಸಂಪಾದಕರು ಹಾಗೂ ವರದಿಗಾರರು ಎದುರಿಸುತ್ತಿರುವ ಬೆದರಿಕೆ, ಕಿರುಕುಳ, ಶಿಕ್ಷೆಗಳ ನೆನಪಾಗುತ್ತದೆ. ನಿಜ ಏನೆಂದರೆ ಈ ಲವ್ ಜಿಹಾದ್; ಸಂಸ್ಕೃತ ಮಾಸಾಚರಣೆ; ಹಿಂದಿ ದಿವಸ್; ಶಿಕ್ಷಕರ ಪುರಿತ ಶಿಕ್ಷಕ ದಿನಾಚರಣೆ; ಇತಿಹಾಸ ಸಂಶೋಧನಾ ಮಂಡಳಿಗೆ ಕಟ್ಟರ್ ಸಂಘಿಯೊಬ್ಬನ ನೇಮಕ; ರಾಷ್ಟ್ರೀಯ ಭದ್ರತಾ ಸಲಹೆಗಾರನಾಗಿ ಚೆಡ್ಡಿ ಸಂಘಟನೆ ವಿವೇಕಾನಂದ ಫೌಂಡೇಷನ್ ಮುಖ್ಯಸ್ಥನ ನೇಮಕ; ಆರೆಸ್ಸೆಸ್ ಸ್ಥಾಪನಾ ದಿನದಂದು ಸರಸಂಘಚಾಲಕನಿಗೆ ದೂರದರ್ಶನದಲ್ಲಿ ಭಾಷಣಕ್ಕೆ ಅವಕಾಶ; ಪಠ್ಯಕ್ರಮ ಬದಲಾವಣೆಗೆ ಚಾಲನೆ; ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ಪ್ರಸ್ತಾಪ; ಜ್ಯೋತಿಷ್ಯವೆ ಅತ್ಯಂತ ಶ್ರೇಷ್ಠ ವಿಜ್ಞಾನ ಎನ್ನುವ ಸಂಸದರು; ಜ್ಯೋತಿಷಿಗಳ



ಸಲಹೆ ಕೇಳುವ ಮೂಢನಂಬಿಕೆಯ ಮಂತ್ರಿಗಳು; ಪ್ಲಾಸ್ಟಿಕ್ ಸರ್ಜರಿ, ವಿಮಾನ, ಟಿವಿ, ಕಾರು, ಅಣುಬಾಂಬ್ ಮತ್ತು ಪ್ರನಾಲ ಶಿಶು ತಂತ್ರಜ್ಞಾನಗಳ ಮೂಲ ಭಾರತ ಎನ್ನುವ ಅಸಂಬದ್ಧ ಹೇಳಿಕೆಗಳಿಗೆ ತಲೆದೂಗುವ ಪ್ರಧಾನಿ; ಭಗವದ್ಗೀತೆಯನ್ನು ರಾಷ್ಟ್ರೀಯ ಧರ್ಮಗ್ರಂಥವಾಗಿ ಘೋಷಿಸಬೇಕೆಂದು ಕರೆಕೊಡುವ ಮಂತ್ರಿ; ಮತ್ತೆ ರಾಮಮಂದಿರ ನಿರ್ಮಾಣಕ್ಕೆ ಅರಚಾಟ; ತಾಜ್‌ಮಹಲ್ ಹಿಂದೂಗಳ ತೇಜೋಮಹಾಲಯ ಎಂಬಿತ್ಯಾದಿ ಹೇಳಿಕೆಗಳು; ಕ್ರೈಸ್ತ ಚರ್ಚುಗಳ ಮೇಲೆ ಪುನಃ ಶುರುವಾದ ದಾಳಿ; ಮತಾಂತರ ತಡೆ, ಗೋಹತ್ಯಾ ನಿಷೇಧ ಕಾಯ್ದೆಗಳಿಗೆ ಹೆಚ್ಚಿದ ಕೂಗು; "ಮರಳಿ ಮನೆಗೆ" ಹೆಸರಲ್ಲಿ ಬಲವಂತದ, ಆಮಿಷದ ಮರುಮತಾಂತರಗಳು; "ರಾಮ್‌ಜಾದೆ, ಹರಾಮ್‌ಜಾದೆ" ಮೊದಲಾದ ಪ್ರಚೋದನಾಕಾರಿ ಭಾಷಣಗಳು; ಒಂದು ಕಾಲದಲ್ಲಿ ಮೋದಿ ಕೂಡ ಇದೇ ಥರ ಮಾತಾಡುತ್ತಿದ್ದ ಸತ್ಯವನ್ನು ಬರೆಯಲು ಭಯಪಡುತ್ತಿರುವ ಮಾಧ್ಯಮಗಳು; ನಕಲಿ ಎನ್ಕೌಂಟರ್‌ಗಳಲ್ಲಿ ಬಂಧಿತರಾಗಿದ್ದ ಪೊಲೀಸ್ ಅಧಿಕಾರಿಗಳು ಒಬ್ಬೊಬ್ಬರಾಗಿ ಬಿಡುಗಡೆಯಾಗುತ್ತಿರುವುದು; ಗಾಂಧಿ ಸ್ಥಾಪಿಸಿದ ನವಜೀವನ ಟ್ರಸ್ಟ್, ಹರಿಜನ ಸೇವಕ ಸಂಘಗಳ ಕೇಸರೀಕರಣ; ಸ್ವಚ್ಛತೆಯೊಂದನ್ನು ಬಿಟ್ಟು ಉಳಿದೆಲ್ಲಾ ಗಾಂಧಿ ಮೌಲ್ಯಗಳಿಗೆ ತಿಲಾಂಜಲಿ; ಗಾಂಧಿ ಹಂತಕ ಗೋಡ್ಸೆಯ ಗುಣಗಾನ ಆರಂಭ.......ಇತ್ಯಾದಿ ನೂರಾರು ಘಟನೆಗಳ ಹಿಂದೆ ಇರುವುದು ಆರೆಸ್ಸೆಸ್ ಮತ್ತದರ ಪರಿವಾರ ಸಂಘಟನೆಗಳೆ ಹೊರತು ಇನ್ಯಾರೂ ಅಲ್ಲ.


ಅತ್ತ ದೇಶದ ಜನತೆ ಇಂತಹ ವಿವಾದಗಳ ಸುಳಿಯಲ್ಲಿ ಮುಳುಗಿರುವಾಗ ಇತ್ತ ಮೋದಿ ಸರ್ಕಾರ ದೇಶದ ನೆಲ, ಜಲ ಸಂಪತ್ತನ್ನು ಬುಲೆಟ್ ರೈಲಿನ ವೇಗದಲ್ಲಿ ಕಾರ್ಪೊರೇಟುಗಳಿಗೆ ಧಾರೆ ಎರೆಯುತ್ತಿದೆ. ಕಾರ್ಮಿಕ ಕಾಯಿದೆಗಳನ್ನು ಮಾಲಿಕರಿಗೆ ಅನುಕೂಲವಾಗುವ ರೀತಿ ಬದಲಾಯಿಸಲಾಗಿದೆ. ಪರಿಸರ ಮಾಲಿನ್ಯದ ಬಗ್ಗೆ ಒಂದಿನಿತೂ ಕಾಳಜಿ ಇಲ್ಲದೆ ತರಾತುರಿಯಲ್ಲಿ ಸುಮಾರು 140 ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆ. ವಾತಾವರಣ ಮಾಲಿನ್ಯ ಅಸಹನೀಯ ಮಟ್ಟಕ್ಕೇರಿದ್ದರಿಂದ ಹೊಸ ಉದ್ದಿಮೆಗಳಿಗೆ ನಿಷೇಧ ಹೇರಲಾಗಿದ್ದ ಗುಜರಾತಿನ ವಾಪಿ ಔದ್ಯಮಿಕ ವಲಯದಲ್ಲಿ ಮತ್ತೆ ಚಿಗುರುತ್ತಿರುವ ಹೊಸ ಕಾರ್ಖಾನೆಗಳು ಎಗ್ಗಿಲ್ಲದೆ ರಾಸಾಯನಿಕ ತ್ಯಾಜ್ಯಗಳನ್ನು ಹೊರಸೂಸತೊಡಗಿವೆ.

ಈ ಗಲಾಟೆಗಳ ನಡುವೆ ಬೆಲೆಗಳು ಗಗನಕ್ಕೇರುತ್ತಲೇ ಇವೆ. ಮಾಧ್ಯಮಗಳಲ್ಲಿ ಹೆಚ್ಚೆಚ್ಚು ಮಹಿಳಾ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿವೆ. ರೈತರ ಆತ್ಮಹತ್ಯೆ ಎಂದಿನಂತೆ ಮುಂದುವರಿದಿದೆ. ಪಾಕಿಸ್ತಾನ, ಚೀನಾಗಳು



ಹೆಚ್ಚು ಆಕ್ರಮಣಶೀಲವಾಗಿವೆ. ಗ್ರಾಮೀಣ ಕೂಲಿ ಆಶಾಕಿರಣವಾಗಿದ್ದ ನರೇಗಾ ಯೋಜನೆಗೆ ... ಪ್ರಯೋಗವಾಗಿದೆ. ಬಜೆಟ್ಟಿನಲ್ಲಿ ಆರೋಗ್ಯ, ... ಗ್ರಾಮೀಣಾಭಿವೃದ್ಧಿಯಂತಹ ಸಾಮಾಜಿಕ ಕಾಯ... ಗಳಿಗಾಗಿ ಮೀಸಲಾಗಿಟ್ಟ ದುಡ್ಡನ್ನು ಕಸಿದುಕೊಳ್ಳಲಾಗ... 'ಅಚ್ಛೇ ದಿನ್ ಆಯೆಂಗೆ' ಎಂದು ಭರವಸೆ ... ವೋಟು ಪಡೆದವರನ್ನು ಜನ ಕೇಳಬೇಡವೇ: ... ಒಳ್ಳೆಯ ದಿನಗಳು? ಎಲ್ಲಿದೆ ನೂರು ದಿನಗಳೊ... ಪ್ರತಿಯೊಬ್ಬ ಪ್ರಜೆಯ ಕಿಸೆಗೆ ಬಂದು ಬೀಳಲಿದ್ದ ಲಕ್ಷ... ರೂಪಾಯಿ ಕಪ್ಪು ಹಣ?

ವಾಸ್ತವವೇನೆಂದರೆ ಕಪ್ಪುಹಣ, 'ಅಭಿವೃದ್ಧಿ'ಯ... ವಿಷಯಗಳು ಕೇವಲ ಜನರಿಗೆ ಮಂಕುಬೂದಿ ... ವೋಟು ಬಾಚಿಕೊಳ್ಳುವ ಸಾಧನವಾಗಿದ್ದವು. ವೋ... ಗಳಿಸಿ ಸೀಟು ಗಟ್ಟಿಮಾಡಿಕೊಂಡ ಬಳಿಕ 'ಹಿಂದೂ ... ನಿರ್ಮಾಣ, ಅಲ್ಪಸಂಖ್ಯಾತರು ಹಾಗೂ ದಲಿತರ ... ಮತ್ತು ಕಾರ್ಪೊರೇಟುಗಳ ಕಿಸೆಭರ್ತಿ ಇವೇ ಮು... ಜನವಿರೋಧಿ ಅಂಶಗಳ ಚೆಡ್ಡಿ ಅಜೆಂಡಾ ತಡರಹಿ... ಜಾರಿಗೊಂಡಿದೆ. ಇದನ್ನು ಅರ್ಥಮಾಡಿಕೊಳ್ಳುವ ... ಜನ ಮಂಕುಬೂದಿಗೆ ಬಲಿಯಾಗುತ್ತಲೆ ಇರುತ್ತಾರೆ. ಅ... ವಿಷಯವೆಂದರೆ ಜನಕ್ಕೆ ಅರ್ಥವಾಗಿ ಎದ್ದೇಳುವ ... ಕಾಲ ಮಿಂಚಿಹೋಗಬಹುದು.



ಬ್ರಹ್ಮಾಂಡನ ಮದುವೆಯೂ ಸಚ್ಚಿದಾನಂದನ ರೇಪೂ

ಮೂಢನಂಬಿಕೆಗಳ ಕಥೆ ಬಿಡಿ, ಕೆಲವು ಸಹಜ ಲೆಕ್ಕಾಚಾರಗಳ ತರ್ಕಗಳಿಗೇ ಅರ್ಥವಿರುವುದಿಲ್ಲ. ವಿಜ್ಞಾನ-ಸಾಕ್ಷರತೆ ಬೆಳೆಯುತ್ತಾ ಹೋದಂತೆ ಮೌಢ್ಯ ಕ್ರಮೇಣ ಅವನತಿಯತ್ತ ಸಾಗುತ್ತದೆ ಎಂಬುದು ಸಾಮಾನ್ಯ ಲೆಕ್ಕಾಚಾರ. ಆದರೆ ಇವನ್ನೇ ಬಳಸಿಕೊಂಡು ಮೌಢ್ಯ ಮತ್ತಷ್ಟು ವಿಜೃಂಭಿಸುತ್ತದೆ ಎಂದು ಯಾರೂ ಗ್ರಹಿಸಿರಲೇ ಇಲ್ಲ. ಇಂದು ಜನರ ಸಾಕ್ಷರತೆ ಹಾಗು ಆಧುನಿಕ ವೈಜ್ಞಾನಿಕ ಸಂಶೋಧನೆಯನ್ನು ಬಳಸಿಕೊಂಡೇ ಮೌಢ್ಯ ಮತ್ತಷ್ಟು ಬೆಳೆಯುತ್ತಿರುವುದು ವಾಸ್ತವ.

ಬೀದಿ ಬದಿಯ ಪುಸ್ತಕ ಮಾರಾಟಗಾರರಿಂದ ಹಿಡಿದು ದೊಡ್ಡ ದೊಡ್ಡ ಪುಸ್ತಕ ಮಳಿಗೆಗಳಲ್ಲಿ ಅತೀ ಹೆಚ್ಚು ಸೇಲಾಗುವಂತಹ ಕೃತಿಗಳೆಂದರೆ ಜ್ಯೋತಿಷ್ಯ, ದೇವರು ನಂಬಿಕೆಗಳ ಬಗೆಗಿನ ವಿಚಾರಗಳೇ. ಟೀವಿಯಲ್ಲಿನ ಬುರುಡೆ ಜ್ಯೋತಿಷಿಗೂ ಭವಿಷ್ಯ ಹೇಳಲು ಬೇಕು ಆಧುನಿಕ ಲ್ಯಾಪ್‌ಟಾಪ್ ಕಂಪ್ಯೂಟರ್! ವೀಕ್ಷಕ ಹುಟ್ಟಿದ ದಿನ, ಸಮಯ ಹೇಳಿದಾಕ್ಷಣ ಅದನ್ನು ಕ್ಲಿಕ್ಕಿಸಿದರೆ ಆತನ ಭವಿಷ್ಯದಲ್ಲಿ ಸದ್ಯಕ್ಕೆ ಶನಿ ಯಾವ ಮನೆಯಲ್ಲಿದ್ದಾನೆ, ಕುಜ ಎಲ್ಲಿ ಎಷ್ಟು ಸಮಯದಿಂದ ವಕ್ರದಿಸಿ ಕುಂತಿದ್ದಾನೆ, ಹಾಗಾಗಿ ದೋಷಗಳೇನು-ಪರಿಹಾರಗಳೇನು ಎಲ್ಲವೂ ಅಲ್ಲಿ ಡಿಸ್ ಪ್ಲೇ ಆಗಿ ವೀಕ್ಷಕನಿಗೆ ಅದರ ವಿಶ್ಲೇಷಣೆ ಜ್ಯೋತಿಷಿಯಿಂದ ದೊರೆಯುತ್ತದೆ. ವೈಜ್ಞಾನಿಕ ತಂತ್ರಜ್ಞಾನದಿಂದ ಇಲ್ಲಿ ಗುಣಿಸಿ ಭಾಗಿಸಿ ಲೆಕ್ಕ ಹಾಕಿ ಭವಿಷ್ಯ ಹೇಳುವ ಅಗತ್ಯವೇ ಇಲ್ಲ, ಎಲ್ಲವೂ ಯಾವುದೋ ಹೋರೋಸ್ಕೋಪ್ ಪ್ರೋಗ್ರಾಂ ಮೂಲಕ ಲ್ಯಾಪ್‌ಟಾಪ್‌ನಲ್ಲಿ ಫೀಡ್ ಆಗಿರುತ್ತದೆ.

ತೀರಾ ಇತ್ತೀಚೆಗೆ ಹಬ್ಬಲ್ಪಟ್ಟ ಟೀವಿ ಮಾಧ್ಯಮದಿಂದ ತರಹೇವಾರಿ ಜ್ಯೋತಿಷಿಗಳಲ್ಲದೇ, ಭಾಗ್ಯ ತರುವ ಧನಲಕ್ಷ್ಮಿ ಯಂತ್ರ, ಹನುಮಾನ್ ಚಾಲೀಸಾ ಮಾರುವ ಢೋಂಗಿ ಜನರು ಹೆಚ್ಚುತ್ತಿದ್ದಾರೆ. ಇವರೆಲ್ಲ ಮೋಸಗಾರರೆಂದು ಗೊತ್ತಿದ್ದೂ ಕೂಡ ನಂಬಿಕೆಯ ಹಿನ್ನೆಲೆಯಲ್ಲಿ ಇವರನ್ನು ಕಾನೂನು ಕುಲಭದಲ್ಲಿ ಮುಟ್ಟಲಾಗದು. ಬೆಳ್ಳಂಬೆಳಗ್ಗೆ ಟೀವಿ ಆನ್ ಮಾಡಿದರೆ ಸಾಕು ಕಳ್ಳ ಜೋತಿಷಿಗಳು ತಾವೇ ಈ ಜಗದ ಆಗುಹೋಗುಗಳ ನಿಯಂತ್ರಕರೆಂಬಂತೆ ಪೋಸು ಕೊಡುತ್ತಾ ಜನರನ್ನು ತಮ್ಮ ಬುಟ್ಟಿಗೆ ಕೆಡವುವ ಹಾಳು ತಂತ್ರಕ್ಕಿಳಿದುಬಿಡುತ್ತಾರೆ.

ಒಬ್ಬನದ್ದು ರಾಶಿಫಲವಾದರೆ ಮತ್ತೊಬ್ಬನದ್ದು ಸಂಖ್ಯಾಶಾಸ್ತ್ರ, ಇನ್ನೊಬ್ಬನದ್ದು ಕರ್ಣಪಿಶಾಚಿನಿ ತಂತ್ರವಾದರೆ ಮಗದೊಬ್ಬ ಸ್ವಪ್ನ ಶಕುನವನ್ನು ಹೇಳುವಂತವನು. ಇಂತಹ ವೆರೈಟಿ ಕಳ್ಳರನ್ನು ಎದುರುಹಾಕಿಕೊಳ್ಳಬಹುದೇ ಹೊರತು ಇವರನ್ನು ನಿಶ್ಯರ್ಥವಾಗಿ ನಂಬುವವರನ್ನು ಎದುರುಹಾಕಿಕೊಳ್ಳುವುದು ಬಲು ಕಷ್ಟ. ಇಂತಹ ನಂಬುಗಸ್ಥರೇ ಇವರಿಗೆಲ್ಲ ಆಧಾರ. ಅಂಥವರಲ್ಲೊಬ್ಬ ಈ ಸಚ್ಚಿದಾನಂದ ಬಾಬು ಎನ್ನುವ ದುರಾತ್ಮ.

ಪುರಾತನ ಶಾಸ್ತ್ರಜ್ಞರೇ ಈ ಜೋತಿಷ್ಯವನ್ನು "ಪಂಚ



ಭವೇತ್ ಪಂಚ ನ ಭವೇತ್" ಎಂದು ಕರೆದಿದ್ದಾರೆ. ಅಂದರೆ ಫಿಫ್ಟಿ ಫಿಫ್ಟಿ ಎಂದರ್ಥ. ಇಂತಹ ಜೋತಿಷ್ಯವನ್ನು ತಾನು ಅರೆದು ಕುಡಿದು ವೈಜ್ಞಾನಿಕವಾಗಿ ಆಳವಾದ ಸ್ಟಡಿ ಮಾಡಿದ್ದೇನೆಂದೇ ಬಿಂಬಿಸಿಕೊಳ್ಳುವ ಈ ಬಾಬು ತನ್ನನ್ನು ತಾನು ವೈಜ್ಞಾನಿಕ ಜ್ಯೋತಿಷಿಯೆಂದೇ ಕರೆದುಕೊಳ್ಳುತ್ತಾನೆ. ಜೋತಿಷ್ಯ ಜ್ಞಾನದಲ್ಲಿ ಈತನದ್ದು ಅಲ್ಟಿಮೇಟ್. ಎಲ್ಲವಕ್ಕೂ ಈತನಲ್ಲಿ ಉತ್ತರವುಂಟು. ಕಳ್ಳರು ಬರಲು-ಬಾರದಿರಲು, ವಿಚ್ಛೇದನ ಆಗಲು-ಆಗದಿರಲು, ಕೊನೆಗೆ ರೇಪ್ ಆಗಲು-ಆಗದಿರಲೂ ಕೂಡ ಈತನಲ್ಲಿ ಡೇಟಾ (ಅಂಕಿಅಂಶ) ಗಳಿವೆಯಂತೆ. ಹಾಗಾಗಿ ರಾಶಿ ಗನುಗುಣವಾಗಿ ಉಣ್ಣಲು ತಿನ್ನಲು ಕೊನೆಗೆ ಸಂಡಾಸಿಗೆ ಹೋಗಲು ಎಲ್ಲಕ್ಕೂ ಈತನಲ್ಲಿ ದಾಖಲೆಗಳಿವೆಯಂತೆ. ಹಾಗೇ ಅವುಗಳಾಧಾರದಲ್ಲಿ ಪರಿಹಾರಗಳೂ ಕೂಡ. ವೈಜ್ಞಾನಿಕ ಜ್ಯೋತಿಷಿಯಾದ ತಾನು ಎಲ್ಲಿ ಬಲ್ಲವನೆಂಬ ಅಹಂ ಇರುವ ಈತ ಜೇಠ್ಮಲಾನಿ ರಾಮನ ಬಗ್ಗೆ ಮಾತಾಡಿದರೂ ಉರಿದುಕೊಂಡು ತನ್ನ ಪೋಷಕ ಮೀಡಿಯಾದ ಮೂಲಕ ಬೈಯ್ಯುತ್ತಾನೆ; ಯೋಗೀಶ್ ಮಾಸ್ಟರರ 'ದುಂಡಿ' ಕೃತಿಗೂ ಬೈಯ್ಯುತ್ತಾನೆ. ಯಾಕೆಂದರೆ "ಐ ಯಾಮ್ ದ ಅಲ್ಟಿಮೇಟ್?" ಅಲ್ಲವೇ? ಇಂತವನೀಗ ತನ್ನ "ರೇಪ್ ಡೇಟಾ"ವನ್ನು ಸಮಯವಲ್ಲದ ಸಮಯದಲ್ಲಿ ಹೊರ ತೆಗೆದು ಜನರಿಂದ ಉಗಿಸಿಕೊಂಡು ಮೂರಾಬಟ್ಟೆಯಾಗಿರುವುದು ಮಾತ್ರ ತಮಾಷೆಯಾಗಿದೆ.

ಅವತ್ತು ಬ್ರಹ್ಮಾಂಡ ಗುರೂಜಿ ಎನ್ನುವ ಜೋಕರ್ ಕಾಲಜ್ಞಾನಿ ಇಷ್ಟು ಸಮಯ ಯಾರೂ ಮದುವೆಯಾಗಬಾರದು; ಆದರೆ ಗಂಡಾಂತರ ಕಾದಿದೆ ಎಂದಿದ್ದ. ಅದರದ್ದೇ ಮತ್ತೊಂದು ಮುಖ ಎನ್ನುವಂತಿರುವ ಈ ಬೊಗಳೆ ಬಾಬು ರೇಪ್ ಬಗ್ಗೆ ರೀಸರ್ಚ್ ಮಾಡಿ ಹೊಸ ಇತಿಹಾಸ ಬರೆದು ಈಗ ನಗೆಪಾಟಲಿಗೀಡಾಗಿದ್ದಾನೆ.

ತನ್ನ ಭವಿಷ್ಯ ತನಗೇ ಉಲ್ಟಾ ಹೊಡೆಯುವ ಸಂಗತಿಯೇ ಗೊತ್ತಿಲ್ಲದ (ಮಾಧ್ಯಮಗಳಿಂದ ಈ ಸಂಬಂಧದ ಕ್ಲಿಪ್ಪಿಂಗ್ಸ್ ಅನ್ನು ನಂತರ ಕಿತ್ತು ಹಾಕಿಸಲಾಯ್ತು) ಈತ ಜನರ ಹಣೆಬರಹ ಓದಿ ಹೇಳುತ್ತಾನಂತೆ ಹ್ಹಾ! ಹ್ಹಾ!

- ಶಶಿ ಪುತ್ತೂರು, ದಕ

ದಶರಥ ರಾಜ ಕೊಪ್ಪರಿಗೆಯಲ್ಲಿ ಪಾಯಸ ಮಾಡಿಸಿದ್ದನೇ?

ಕಳೆದ ಸಂಚಿಕೆಯಲ್ಲಿ ಶ್ರೀಯುತ ಅನುರಾಗ್ ಎನ್ನುವವರು ರಾಮನ ಬಹುಪತ್ನಿತ್ವದ ಉಲ್ಲೇಖದ ಬಗ್ಗೆ ಸ್ಪಷ್ಟೀಕರಣ ಕೇಳಿಬರೆದದ್ದು ನೋಡಿ ಇದನ್ನು ಬರೆಯುತ್ತಿದ್ದೇನೆ.

ಪುರಾಣ ಕಥೆಗಳ ಪ್ರಕಾರ ಅಯೋಧ್ಯೆಯಲ್ಲಿ ಹಲವಾರು ಅರಸರು ಆಳ್ವಿಕೆ ನಡೆಸಿದ್ದರು. ಇಂತಹ ರಘು... ಶ್ರೀರಾಮ ಚಕ್ರವರ್ತಿ ದಶರಥನ ಮಗ. ಆತನನ್ನು ... ಮಾಡಿಕೊಡುವಾಗ ಸಿಕ್ಕ ಭರ್ಜರಿ ಉಡುಗೊ... ಅಸಂಖ್ಯಾತ ಕನ್ಯಾಮಣಿಗಳೂ ಇದ್ದರೆಂಬ ಉ... ರಾಮಾಯಣದಲ್ಲೇ ಸಿಗುತ್ತದೆ. ಆತನಿಗೆ ಪಟ್ಟದ ... ಒಬ್ಬಳೇ ಇದ್ದಿರಬಹುದಾದರೂ ಉಪಪತ್ನಿಯರು ಹ... ಇದ್ದರು. ಇದು ಆ ಕಾಲದಲ್ಲಿ ರಾಜಮಹಾ... ವಿಷಯದಲ್ಲಿ ಸರ್ವೇ ಸಾಮಾನ್ಯವಿತ್ತು.

ಒಂದು ದನವನ್ನು ಉದ್ದ ಹಗ್ಗದಲ್ಲಿ ಹುಲ್ಲಿದ್ದ... ಹಾಕಿದರೂ ಕೂಡ ಅದು ಕುತ್ತಿಗೆ ಚಾಚಿ ... ಬಾಯಿಹಾಕ ನೋಡುವುದೇ ಹೆಚ್ಚು, ರಾಜರುಗಳ ... ಆಕಾಂಕ್ಷೆಯನ್ನು ಅಧಿಕಾರದಿಂದ ಹೊರತಾಗಿ ಸೇವೆಯ ಭಾವವಷ್ಟೇ ಉಳ್ಳ ಉಪಪತ್ನಿಯಂದಿರು ಪ್ರತಿಫಲಾಪೇಕ್ಷೆಯಿಲ್ಲದೇ ತೀರಿಸುತ್ತಿದ್ದರು.

ಇಲ್ಲಿ ನೋಡಿ, ಶ್ರೀರಾಮಚಂದ್ರನಿಗೆ ಒಬ್ಬಳೇ ... ಇರುವ ಸಂಗತಿ ಎಲ್ಲರಿಗೂ ತಿಳಿದಿರುವಂತೆ ಆತನ... ದಶರಥನಿಗೆ ಮೂವರು ಹೆಂಡಂದಿರು ಇರುವ ಸಂಗ... ಗೊತ್ತಿದ್ದದ್ದೇ. ಆದರೆ ಮೇಲಿನ ರೀತಿಯಲ್ಲೇ ... ರಾಮಾಯಣದ ಪ್ರಕಾರವೇ ಹೇಳುವುದ... ದಶರಥನಿಗಿದ್ದದ್ದು ಮೂವರು ಹೆಂಡಂದಿರು ಮಾ... ಬದಲಾಗಿ 350. (ಕೆಲವರು ಕೃಷ್ಣನಿಗೂ ಮಿಗಿಲು 6... ಎಂದೂ ಹೇಳುತ್ತಾರೆ). 'ಈ ಟಿವಿ'ಯಲ್ಲಿ ... ರಾಮಾಯಣ ಪ್ರವಚನ ಹೇಳುವ ಉಡುಪಿ ... ರಾಜ್ಯದ ಬಹುದೊಡ್ಡ ವಿದ್ವಾಂಸರೇ ಒಮ್ಮೆ ಈ ಪ್ರವ... ದಶರಥನಿಗೆ ಮುನ್ನೂರು ಚಿಲ್ಲರೆ (ರೌಂಡ್ ಫಿಗರ... ಸ್ವಷ್ಟ ಸಂಖ್ಯೆ) ಹೆಂಡಂದಿರು ಎಂದದ್ದನ್ನು ಕೇಳಿದ್ದೆ. ... ಈ ಬಹು ಪತ್ನಿತ್ವಕ್ಕೂ ಒಂದು ಕಥೆ ಇದೆ. ಅದೇ... ಕ್ಷತ್ರಿಯರನ್ನ ಕೊಲ್ಲ ಹೊರಟ ಪರಶುರಾಮನ ಭ... ಪರಶುರಾಮ ಮದುವೆ ಕಂಕಣ ಕೈಯ್ಯಲಿ... ಕೊಲ್ಲುತ್ತಿರಲಿಲ್ಲವಂತೆ. (ತಾಳಿ ಕಟ್ಟಿದ ದಿನದಿಂದ ... ವರ್ಷ ಕಾಲ ವರನ ಕೈಯಲ್ಲಿ ಈ ಕಂಕಣ ಇರು... ಹೀಗಾಗಿ ದಶರಥ ಪ್ರತಿ ವರ್ಷವೂ ಮದುವೆಯಾ... ಇದ್ದಿದ್ದನಂತೆ. ಬಳಿಕ ಯಾಕೋ ತಾನು ಹೆದರುತ್ತಿದ್ದ... ಹೆಸರನ್ನೇ ತನ್ನ ಮಗನಿಗಿಟ್ಟುಬಿಟ್ಟ ಈ ರಾಜ. ... ಪುತ್ರಕಾಮೇಷ್ಟಿಯಾಗ ಮಾಡಿದ ದಶರಥ ತನ್ನ... ಹೆಂಡಂದಿರಿಗೂ ಪಾಯಸ ಹಂಚಬೇಕಾಗಿ ಬ... ಕೊಪ್ಪರಿಗೆ ಪಾಯಸವೂ ಸಾಕಾಗುತ್ತಿರಲಿಲ್ಲವೇನೊ...

ಇದೇ ಅಯೋಧ್ಯೆಯನ್ನಾಳಿದ ಮತ್ತೊಬ್ಬ ದೊರೆ...

ಮರ್ಲಿನ್ ಮನ್ರೋ ಎಂಬ ಸೆಕ್ಸ್ ಸಿಂಬಲ್

'ಸಮ್ ಲೈಕ್ ಇಟ್ ಹಾಟ್', 'ಆಲ್ ಅಬೌಟ್ ...ವ್', 'ದಿ ಮಿಸ್‌ಫಿಟ್ಸ್', 'ಬಸ್ ಸ್ಟಾಪ್', 'ಹೌ ಟು ...ರಿ ಎ ಮಿಲೇನಿಯರ್', 'ರಿವರ್ ಆಫ್ ನೋ ರಿಟರ್ನ್' ...ದಂತೆ ಅನೇಕ ಚಿತ್ರಗಳಲ್ಲಿ ನಟಿಸಿ, ಜಗತ್ತಿನಾದ್ಯಂತ ...ಕ ಸಂಖ್ಯೆಯ ಅಭಿಮಾನಿಗಳನ್ನು ಗಳಿಸಿ, ಬದುಕು ...ಒಡ್ಡುವ ಅಷ್ಟೂ ಸವಾಲುಗಳನ್ನು ಸ್ವೀಕರಿಸಿ ಕಡೆಗೆ ...ಂತಮಯ ಸ್ಥಿತಿ ತಲುಪಿ ಅತೀ ಸಣ್ಣ ವಯಸ್ಸಿಗೆ ...ಕೊಂಡ ಅಮೆರಿಕದ ಸೆಕ್ಸ್ ಸಿಂಬಲ್ ಮರ್ಲಿನ್ ...ನ್ರೋ ತಾನು ಇಪ್ಪತ್ತೆಂಟನೇ ವಯಸ್ಸಿನಲ್ಲಿದ್ದಾಗ ನೀಡಿದ್ದ ...ದರ್ಶನವೊಂದನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ...

ಪ್ರಶ್ನೆ: ನೀವು ಗಂಡಸರನ್ನು ಸೆಳೆಯುವ ಸಲುವಾಗಿಯೇ ...ರ್ಷಕ ಬಟ್ಟೆಗಳನ್ನು ಧರಿಸುತ್ತೀರಂತೆ ಹೌದೇ?

ಮರ್ಲಿನ್ ಮನ್ರೋ: ಅದರಲ್ಲಿ ತಪ್ಪೇನಿದೆ? ಗಂಡಸರು ...ೂ ಹೆಂಗಸರು ಪರಸ್ಪರ ಆಕರ್ಷಿಸುವಂಥ ಬಟ್ಟೆಗಳನ್ನು ...ಸುವಲ್ಲಿ ಒಂಥರಾ ಮಜಾ ಇರುತ್ತೆ.

ಪ್ರಶ್ನೆ: ನೀವು ಲೋ ಕಟ್ ಗೌನುಗಳನ್ನು ಧರಿಸುವುದರ ...ೇನು?

ಮರ್ಲಿನ್: ಇದರ ಬಗ್ಗೆ ನಾನು ಗಂಭೀರವಾಗಿ ...ಾಲೋಚನೆಯೇ ಇಲ್ಲ.


ಪ್ರಶ್ನೆ: ಬಿಡುವಿನ ಸಮಯದಲ್ಲಿ ಏನು ಮಾಡುತ್ತೀರಿ?

ಮರ್ಲಿನ್: ಚಿತ್ರರಂಗದಲ್ಲಿ ತಮ್ಮ ಕೆರಿಯರನ್ನು ...ಭದ್ರಗೊಳಿಸಿಕೊಳ್ಳಬಯಸುವ ನನ್ನಂತಹ ನಟಿಯರಿಗೆ ...ಬಿಡುವು ಅನ್ನೋದೇ ಇರುವುದಿಲ್ಲ. ಇದ್ದರೂ ಸ್ವಲ್ಪ ಸಮಯ ...ತ್ರ. ಆ ವೇಳೆಯನ್ನು ಪುಸ್ತಕಗಳನ್ನು ಓದುವುದಕ್ಕಾಗಿ ...ಮೀಸಲಿಡುತ್ತೇನೆ.

ಪ್ರಶ್ನೆ: ಒಬ್ಬ ಆದರ್ಶ ವ್ಯಕ್ತಿ ಅಂದರೆ ನಿಮ್ಮ ಪ್ರಕಾರ ...ಇರಬೇಕು?

ಮರ್ಲಿನ್: ಆದರ್ಶ ವ್ಯಕ್ತಿ ಅನ್ನೋದರ ಬಗ್ಗೆ ನನಗೆ ...ಕೆ ಇಲ್ಲ. ಅಂತಹ ವ್ಯಕ್ತಿಗಳು ಸಿಗುವುದು ಕಷ್ಟ.

ಪ್ರಶ್ನೆ: ಹಾಲಿವುಡ್ಡಿನ ಸೆಕ್ಸಿ ನಟಿಯಾಗಿರುವುದರ ಬಗ್ಗೆ ...ಗೆ ಏನನ್ನಿಸುತ್ತದೆ?



ಮರ್ಲಿನ್: ಈ ಪ್ರಶ್ನೆಯ ಅಗತ್ಯವಿದೆಯೇ?

ಪ್ರಶ್ನೆ: ನಿಮ್ಮ ಶರೀರವನ್ನು ಇಷ್ಟು ಸೊಗಸಾಗಿ ಇಟ್ಟುಕೊಂಡಿದ್ದೀರಿ. ಇದರ ಹಿಂದಿನ ಮರ್ಮವೇನು?

ಮರ್ಲಿನ್: ವಾಕ್, ವ್ಯಾಯಾಮ ಮತ್ತು ದೇಹವನ್ನು ಚೆನ್ನಾಗಿ ಇಟ್ಟುಕೊಳ್ಳುವುದರ ಬಗ್ಗೆ ಮಾರ್ಗದರ್ಶನ ನೀಡುವ ಪುಸ್ತಕಗಳನ್ನು ಓದುವುದು.

ಪ್ರಶ್ನೆ: ಹೊಸ ತಲೆಮಾರಿನ ನಟಿಯರು ನಿಮ್ಮನ್ನು ಅನುಕರಣೆ ಮಾಡಲು ಕಾರಣವೇನು?

ಮರ್ಲಿನ್: ಇದು ಪ್ರಜಾಪ್ರಭುತ್ವ ದೇಶ. ಇಲ್ಲಿ ಯಾರು ಏನು ಬೇಕಾದರೂ ಮಾಡಬಹುದು. ಯಾವುದೂ ಇಲ್ಲಿ ಏಕಸ್ವಾಮ್ಯವಲ್ಲ.

ಪ್ರಶ್ನೆ: ನಿಮ್ಮ ಜನ್ಮಸ್ಥಳ, ದೇಶ ಇತ್ಯಾದಿಗಳ ಬಗ್ಗೆ ಹೇಳಿ...

ಮರ್ಲಿನ್: ನಾನು ಹುಟ್ಟಿದ್ದು ಲಾಸ್ ಏಂಜಲೀಸ್‌ನಲ್ಲಿ, ನಾನೊಬ್ಬ ಅಮೆರಿಕನ್.

ಪ್ರಶ್ನೆ: ನಿಮಗೆ ಬಹಳಷ್ಟು ಮಂದಿ ಬಾಯ್ ಫ್ರೆಂಡ್ಸ್ ಇದ್ದಾರಂತೆ?

ಮರ್ಲಿನ್: ನೀವು ಹೆಚ್ಚು ಹೆಚ್ಚು ಗಾಸಿಪ್ ಕಾಲಂಗಳನ್ನು ಓದುತ್ತೀರಿ ಅನ್ನಿಸುತ್ತದೆ.

ಪ್ರಶ್ನೆ: ಒಬ್ಬ ಹುಡುಗಿಯಾಗಿ ಹೇಳಿ... ಪಡ್ಡೆಗಳು ನಿಮ್ಮನ್ನು ನೋಡಿ ಶಿಳ್ಳೆ ಹೊಡೆಯುವಾಗ ಏನನ್ನಿಸುತ್ತದೆ?

ಮರ್ಲಿನ್: ಶಿಳ್ಳೆಗಳಿಗೆ ಬೇಸರ ಪಟ್ಟುಕೊಳ್ಳುವ ಹುಡುಗಿಯರು ಯಾವುದಾದರೂ ಬಂಜರು ದ್ವೀಪದಲ್ಲಿ ವಾಸಿಸಬೇಕಷ್ಟೇ.

ಪ್ರಶ್ನೆ: ನಿಮ್ಮ ಮೆಷರ್ ಮೆಂಟ್ ಏನು?

ಮರ್ಲಿನ್: 37-23.5-37.5.

ಪ್ರಶ್ನೆ: ಕ್ಯಾಲೆಂಡರುಗಳಿಗಾಗಿ ನೀವು ಬೆತ್ತಲೆಯಾಗಿ ಪೋಸ್ ಕೊಟ್ಟಿದ್ದು ನಿಜಾನಾ?

ಮರ್ಲಿನ್: ನಿಜ.

ಪ್ರಶ್ನೆ: ನೀವು ಕ್ಯಾಮೆರಾದಾಚೆಗೂ ನಟಿಸುತ್ತೀರಾ?

ಮರ್ಲಿನ್: ಕ್ಯಾಮೆರಾ ಎದುರಷ್ಟೇ ನಟಿಸುತ್ತೇನೆ. ಮನೆಯಲ್ಲಿದ್ದಾಗ ನಾನು ನಾನಾಗಿರದೆ ಸೆಕ್ರೆಟರಿ, ಸೇಲ್ಸ್ ಗರ್ಲ್, ಟೀಚರ್, ಕ್ಲರ್ಕ್ ಮುಂತಾದವುಗಳಾಗಿ ಇರಲು ಸಾಧ್ಯವೇ? ಇಷ್ಟಕ್ಕೂ ನಮ್ಮ ವರ್ಕನ್ನು ಮನೆಯವರೆಗೂ ಯಾಕೆ ಕೊಂಡೊಯ್ಯಬೇಕು?



ಪ್ರಶ್ನೆ: ನಿಮ್ಮ ಇಷ್ಟದ ಕೆಲಸ ಯಾವುದು?

ಮರ್ಲಿನ್: ವಾಕ್ ಮಾಡೋದು. ಬೇಕಾದರೆ ಗಂಟೆಗಟ್ಟಲೆ ಒಬ್ಬಳೇ ವಾಕ್ ಮಾಡುತ್ತೇನೆ. ಅದಿಷ್ಟ ನನಗೆ.

ಪ್ರಶ್ನೆ: ನೀವು ಸ್ಕೂಲಿನಲ್ಲಿದ್ದಾಗ ಪಾಪ್ಯುಲರ್ ಆಗಿದ್ರಾ?

ಮರ್ಲಿನ್: ಇಲ್ಲ. ಆದರೆ ಬಹಳಷ್ಟು ಒಳ್ಳೆಯ ಗೆಳೆಯರನ್ನು ಹೊಂದಿದ್ದೆ.

ಪ್ರಶ್ನೆ: ವಾರದಲ್ಲಿ ಎಷ್ಟು ಡೇಟ್ಸ್ ಇರುತ್ತವೆ?

ಮರ್ಲಿನ್: ಸಿನಿಮಾಗಳಲ್ಲಿ ನಟಿಸುವ ಸಂದರ್ಭದಲ್ಲಿ ನನಗೆ ಬಿಡುವೇ ಇರಲ್ಲ. ಇಷ್ಟಕ್ಕೂ ವಾರದಲ್ಲಿ ಇಷ್ಟುಬಾರಿ ಹೊರಗೆ ಹೋಗಬೇಕು, ಅಷ್ಟುಬಾರಿ ಹೊರಗೆ ಹೋಗಬೇಕು ಅನ್ನೋ ಮಾತೇ ನನಗೆ ಸಿಲ್ಲಿಯಾಗಿ ಕಾಣುತ್ತೆ. ಬಿಡುವಿದ್ದ ವೇಳೆಯಲ್ಲಿ ಯಾರಾದರೂ ಡೇಟಿಂಗ್‌ಗೆ ಆಹ್ವಾನಿಸಿದರೆ, ಅವರ ಕಂಪನಿ ನನಗೆ ಹಿಡಿಸಿದರೆ ಮಾತ್ರ ಹೋಗುತ್ತೇನೆ. ಇಲ್ಲದೆ ಹೋದ ಪಕ್ಷದಲ್ಲಿ ಸುಮ್ಮನೆ ಮನೆಯಲ್ಲಿರುತ್ತೇನೆ.

ಪ್ರಶ್ನೆ: ನೀವು ನಟಿಯಾಗಿರದಿದ್ದರೆ ಬೇರೆ ಏನಾಗುತ್ತಿದ್ದಿರಿ?

ಮರ್ಲಿನ್: ಇಟ್ಸ್ ಫನ್ನಿ! ನಟಿಯ ಹೊರತಾಗಿ ನನ್ನ ತಲೆಯಲ್ಲಿ ಈವರೆಗೆ ಬೇರೆ ಆಲೋಚನೆಗಳೇ ಬಂದಿಲ್ಲ.

ಪ್ರಶ್ನೆ: ನಿಮ್ಮ ಮೊದಲ ಲವರ್ ಯಾರು?

ಮರ್ಲಿನ್: ಯಾರೂ ಇಲ್ಲ.

ಪ್ರಶ್ನೆ: ನಿಮ್ಮ ನೆಚ್ಚಿನ ಹವ್ಯಾಸಗಳು ಯಾವುವು?

ಮರ್ಲಿನ್: ಸಮಯವಿದ್ದಾಗ ಸ್ವಿಮ್ ಮಾಡುತ್ತೇನೆ. ಹಾಗೆಯೇ ದಾಖಲೆಗಳನ್ನು ಸಂಗ್ರಹಿಸುವುದರಲ್ಲಿ, ಪುಸ್ತಕಗಳನ್ನು ಓದುವುದರಲ್ಲಿ, ಡ್ಯಾನ್ಸ್ ಮಾಡುವುದರಲ್ಲಿಯೂ ನನಗೆ ಆಸಕ್ತಿ.

ಪ್ರಶ್ನೆ: ನಿಮ್ಮ ಮತ್ತು ಜೋ ಡಿಮ್ಯಾಗಿಯೋ ನಡುವಿನ ರೋಮ್ಯಾನ್ಸ್ ನಿಜಾನಾ?

ಮರ್ಲಿನ್: ಡಿಮ್ಯಾಗಿಯೋ ನನ್ನ ಒಳ್ಳೆಯ ಸ್ನೇಹಿತ. ಜೆಂಟಲ್ ಮ್ಯಾನ್ ಕೂಡ.

ಪ್ರಶ್ನೆ: ನೀವು ಮುಂಗೋಪಿಯಂತೆ?

ಮರ್ಲಿನ್: ಸ್ವಲ್ಪಮಟ್ಟಿಗೆ ಮುಂಗೋಪಿ, ಯಾರಾದರೂ ನನ್ನ ಬಗ್ಗೆ ಸುಳ್ಳುಗಳನ್ನು ಬರೆದಿದ್ದನ್ನು ಓದಿದಾಗ ಆ ಕೋಪ ತಂತಾನೇ ಕಡಿಮೆಯಾಗುತ್ತದೆ!

ಪ್ರಶ್ನೆ: ಒಬ್ಬ ಪುರುಷನಲ್ಲಿ ನಿಮಗೆ ಮೊದಲು ಆಕರ್ಷಣೆ ಉಂಟುಮಾಡುವ ಅಂಶ ಯಾವುದು? ಆತನ ಲುಕ್ಕೋ ಅಥವಾ ವ್ಯಕ್ತಿತ್ವವೋ?

ಮರ್ಲಿನ್: ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ನಾನು ವ್ಯಕ್ತಿತ್ವಕ್ಕೆ ಮೊದಲ ಆದ್ಯತೆ ಕೊಡುತ್ತೇನೆ. ಅದರಲ್ಲೂ ಸೆನ್ಸ್ ಆಫ್ ಹ್ಯೂಮರ್ ಇರುವವರು ನನಗೆ ಅತೀ ಬೇಗ ಇಷ್ಟವಾಗಿಬಿಡುತ್ತಾರೆ.

ಪ್ರಶ್ನೆ: ನಿಮ್ಮ ಬೆಸ್ಟ್ ಗರ್ಲ್ ಫ್ರೆಂಡ್ ಯಾರು?

ಮರ್ಲಿನ್: ನನಗೆ ಯಾವ ಗರ್ಲ್ ಫ್ರೆಂಡ್ ಕೂಡ ಇಲ್ಲ, ಆದರೆ ಫ್ರೆಂಡ್ಸ್ ಇದ್ದಾರೆ.

ಪ್ರಶ್ನೆ: ನಿಮ್ಮ ಜೊತೆ ನಟಿಸಿದ್ದ ಜೇನ್ ರಸೆಲ್‌ಗೂ ನಿಮಗೂ ಏನೋ ಅಟ್ಯಾಚ್ಮೆಂಟ್ ಇತ್ತು ಅಂತ ಒಂದು ಸುದ್ದಿ...

ಮರ್ಲಿನ್: ಅಂಥಾದ್ದೇನೂ ಇಲ್ಲ. ಇಂತಹ ಗಾಸಿಪ್‌ಗಳನ್ನು ಯಾಕೆ ಹಬ್ಬಿಸುತ್ತಾರೋ ಗೊತ್ತಿಲ್ಲ. ನಾನು ಇಲ್ಲಿಯತನಕ ನೋಡಿರುವ ಕೆಲವೇ ಒಳ್ಳೆಯ ಮಂದಿಯಲ್ಲಿ ಜೇನ್ ಕೂಡ ಒಬ್ಬಳು. ಅವಳು ನನ್ನೊಟ್ಟಿಗೆ 'ಜೆಂಟಲ್‌ಮೆನ್ ಪ್ರಿಫರ್ ಬ್ಲೊಂಡ್ಸ್'ನಲ್ಲಿ ನಟಿಸಿದ್ದಳು. ಅವಳನ್ನು ನನ್ನ ಫ್ರೆಂಡ್ ಅಂತ ಪರಿಗಣಿಸುತ್ತೇನೆ.

ಪ್ರಶ್ನೆ: ಡೇಟಿಂಗ್ ವಿಷಯಕ್ಕೆ ಬಂದರೆ ನಿಮಗೆ ಇಂಥದ್ದೇ ನಿರ್ದಿಷ್ಟ ಐಡಿಯಾ. ಅಂತ ಏನಾದರೂ ಇದೆಯೇ?

ಮರ್ಲಿನ್: ಒಂದು ನಿಶ್ಶಬ್ದ ಸಂಜೆಯ ಹೊತ್ತು ನನಗೆ ಇಷ್ಟವಾಗುವ ವ್ಯಕ್ತಿಯ ಜೊತೆ ಮಾತಾಡುವುದರಲ್ಲಿ ನನಗೆ ಒಂಥರಾ ಮುದ ಸಿಗುತ್ತದೆ.

ಪ್ರಶ್ನೆ: ನೀವು ಧರಿಸುವ ಲೋ ಕಟ್ ಗೌನ್ ಬಗೆಗಿನ ಟೀಕೆಯ ಬಗ್ಗೆ ಏನು ಹೇಳುತ್ತೀರಿ?

ಮರ್ಲಿನ್: ನನಗೆ ಟೀಕೆಗಳ ಬಗ್ಗೆ ಆಸಕ್ತಿ ಇಲ್ಲ.


ಪ್ರಶ್ನೆ: ನೀವು ಮದುವೆಯಾಗುವ ಹುಡುಗ ಹೇಗಿರಬೇಕು?

ಮರ್ಲಿನ್: ಹೇಗೆ ಹೇಳಲಿ? ನಾನಿನ್ನೂ ಮದುವೆಯ ಬಗ್ಗೆ ಯೋಚನೆಯನ್ನೇ ಮಾಡಿಲ್ಲ. ಮುಂದೊಮ್ಮೆ ಮದುವೆಯಾಗಿ ಮಕ್ಕಳನ್ನು ಹೆರುವುದು ಖಚಿತ. ಅದಕ್ಕೂ ಮೊದಲು ನನ್ನ ವೃತ್ತಿ ಬದುಕಿನಲ್ಲಿ ಸಾಧಿಸಬೇಕಾದ್ದು ಸಾಕಷ್ಟಿದೆ.

ಪ್ರಶ್ನೆ: ನೀವು ಚಿತ್ರತಾರೆಯಾಗುವ ಮುನ್ನ ಯಾವ ಬಗೆಯ ಬದುಕನ್ನು ಬದುಕಿದ್ದಿರಿ?

ಮರ್ಲಿನ್: ಅದರಲ್ಲಿ ಒಂದಿಷ್ಟು ಕಷ್ಟದ ದಿನಗಳು ಮತ್ತು ಒಂದಿಷ್ಟು ಸುಖದ ದಿನಗಳು ಬೆರೆತುಕೊಂಡಿವೆ. ಶಾಲೆಗೆ ಹೋದೆ, ಆಮೇಲೆ ಒಂದಿಷ್ಟು ಬೇರೆ ಬೇರೆ ಬಗೆಯ ಉದ್ಯೋಗಗಳನ್ನು ಮಾಡಿದೆ. ಒಂದಿಷ್ಟು ನಿರಾಶೆಗಳನ್ನು ಕಂಡೆ. ಕಡೆಗೆ ಇಲ್ಲಿಗೆ ಬಂದು ನಿಂತಿದ್ದೇನೆ.

● ಹೃದಯಶಿವ



ಗೌರಿ ಮೇಡಂ ಪಾತ್ರದ ಬಗ್ಗೆ ಓದಿ, ಕೇಳಿ ತುಂಬಾ ಸಂತೋಷವಾಯಿತು. ಇದಕ್ಕೆ ಕಾರಣರಾದ ಲಂಕೇಶ್ ಬಳಗಕ್ಕೆ, ದೊಡ್ಡಸ್ವಾಮಿಯವರಿಗೆ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣವಾದ ಎಲ್ಲರಿಗೂ ಧನ್ಯವಾದಗಳು.

ಪತ್ರಿಕೆ ಹಿಂದಿನಿಂದಲೂ ಹಿಂದೂ ಮೂಲಭೂತವಾದದ ಕೆಟ್ಟ ಆಚರಣೆಗಳ ಬಗ್ಗೆ ಅರಿವು ಮೂಡಿಸುತ್ತಿದೆ. ಹಾಗೆಯೇ ಒತ್ತಾಯದ ಇಸ್ಲಾಮೀಕರಣ, ಕ್ರೈಸ್ತೀಕರಣಗಳ ಬಗ್ಗೆ ಮತ್ತು ಮತಾಂಧತೆ ಹಾಗು ಮೌಢ್ಯದ ಬಗ್ಗೆಯೂ ಅರಿವು ಮೂಡಿಸುವ ಪ್ರಯತ್ನಕ್ಕೆ ಕೈಹಾಕಬೇಕಿದೆ.

ಹಿಂದೂತ್ವವಾದಿಗಳು ಸದಾ "ದಮ್ಮಿದ್ದರೆ ಪ್ರಗತಿಪರರು ಆ ಧರ್ಮಗಳ ಬಗ್ಗೆಯೂ ಮಾತನಾಡಲಿ, ಬರೆಯಲಿ ನೋಡೋಣ. ಹಿಂದೂಗಳನ್ನು ಮಾತ್ರ ಯಾಕೆ ಟೀಕೆ ಮಾಡುತ್ತೀರಾ?" ಎಂದು ಬೊಬ್ಬೆಹೊಡೆಯುತ್ತಿರುತ್ತಾರೆ. ಅವರ ಬಾಯಿ ಮುಚ್ಚಿಸುವ ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ.

- ಅಭಿನಂದನ, ಸುರಪುರ

ಆಟವಾಡುತ್ತಲೇ ಹೊರಟು ಹೋದ ಕ್ರಿಕೆಟಿಗ ಫಿಲ್ ಹ್ಯೂಸ್ ಕುರಿತ ಗೌರಿ ಲಂಕೇಶ್‌ರ 'ಕಂಡ ಹಾಗೆ' ಅರ್ಥಪೂರ್ಣವಾಗಿತ್ತು.

- ಸುರೇಶ್ ಅಂಗಡಿ, ಹೂವಿನಹಡಗಲಿ

ಯಾವುದೇ ವಿಷಯದ ಬಗ್ಗೆ ಲೇಖನವನ್ನು ಬರೆಯುವಾಗ ಅದರ ಪೂರ್ವಾಪರ ವಿಚಾರಗಳನ್ನು ತಿಳಿದುಕೊಂಡಿರಬೇಕು. ವೇದಗಳ ಕುರಿತು ಲೇಖನವನ್ನು ಬರೆಯುವವರು ಮೊದಲು ವೇದವನ್ನು ಯಾರು ಚೆನ್ನಾಗಿ ತಿಳಿದುಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಉಪನಿಷತ್ತುಗಳ ಬಗ್ಗೆ ಮಾತನಾಡುವ ಮುನ್ನ ಅದರ ಮರ್ಮವನ್ನು ತಿಳಿಸಿಕೊಳ್ಳಿ. ಅದರಂತೆ ಹಿಂದೂ ಧರ್ಮದವರಾದ ನೀವು ಮೊದಲು ನನ್ನ ಧರ್ಮ ಎಂಥದ್ದು ಅನ್ನುವ ಪ್ರಜ್ಞೆ ರೂಢಿಸಿಕೊಳ್ಳಬೇಕು. ಎಲ್ಲಾ ಧರ್ಮಗಳ ಬಗ್ಗೆಯೂ ವಾರಕ್ಕೊಂದು ಒಂದು ಲೇಖನವನ್ನು ಪ್ರಕಟಿಸಿ. ಕೇವಲ ಹಿಂದೂ ಧರ್ಮವನ್ನೇ ಕುರಿತು ಬರೆಯಕೂಡದು. ಎಲ್ಲಾ ಧರ್ಮದಲ್ಲೂ ಮನುಷ್ಯರೇ ಇದ್ದಾರೆ, ಅದರಲ್ಲಿ ನೀವೂ ಒಬ್ಬರು ಎಂಬುದನ್ನು ಮರೆಯಬೇಡಿ.

- ಕೃಷ್ಣ ಎಸ್ ಪಾಟೀಲ್, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಬಹುದು ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

... ಹರಿಶ್ಚಂದ್ರ ಅರ್ಥಾತ್ ಸತ್ಯ ಹರಿಶ್ಚಂದ್ರ. ಆತನ ...ಂಧತೆ, ಮಾತಿಗೆ ತಪ್ಪದಿರುವ ನಡೆ ಜಗದ್ವಿಖ್ಯಾತವಾ...ತು. ಆದರೆ ಆತ ವರುಣದೇವನಿಗೆ ಮಾತುಕೊಟ್ಟು ...ನ್ನು ನಿರಂತರ ಸತಾಯಿಸಿದ ಕಥೆ ಅಷ್ಟೊಂದು ಪ್ರಚಾರ ... ಇಲ್ಲ. ಪುರಾಣದ ಕಥೆಯಲ್ಲಿ ತಮಗೆ ಪೂರಕ ...ಸುವ ಅಂಶವನ್ನಷ್ಟೇ ಬಿಂಬಿಸುತ್ತಾ ಮತ್ತಿನ್ನೇನನ್ನೋ ...ಚ್ಚಿಡುವವರಿಂದ ಇಂತಹ ಸಂಗತಿಗಳೂ ಹೊರಬರು... ಇಲ್ಲ. ರಾಮನ ಹೆಂಡಂದಿರ ಕಥೆಯೂ ಇಂಥಾದ್ದೇ ...ರಾಗ ಅವರೇ.

- ಅವಿನಾಶ್ ಎಂ.ಎಸ್. ನೆಲ್ಲಿಕಾರ್

"ವಿಜಯನಗರ ಸಾಮ್ರಾಜ್ಯವೋ, ಮೊಘಲರ ...ಕೆಯೋ ಎಲ್ಲರೂ ಜಿಗಣೆಗಳೇ ನಮ್ಮ ನೆತ್ತರಿಗೆ" ಎಂದಿದ್ದ ...ಂಪ್ರದಾಯವನ್ನು ನೆನಪು ಮಾಡಿದ್ದೂ 'ಕೊಚ್ಚೆ ಮನಸ್ಸಿನ ... ಭಾರತ' ಲೇಖನ. ಯುವಕ ಸರೋವರ್ ಕೇಂದ್ರ ...ಗೂ ರಾಜ್ಯ ಸರ್ಕಾರಗಳ ಧೋರಣೆ ಒಂದೇ ಎಂದು ...ಸ್ಪಷ್ಟಪಡಿಸಿದ್ದಾರೆ. ಆಳುವ ವರ್ಗದ ಲಕ್ಷಣ ಅದೇ ...ವೇ? ಆಳಿಸಿಕೊಳ್ಳುವವರ ಲಕ್ಷಣ ಗುಲಾಮರದ್ದು! ... ಮತ, ಭಾಷೆ, ಲಿಂಗಬೇಧವ ಬಿಟ್ಟು ಶೋಷಿತರೆಲ್ಲ ...ನಿಸಿ ಆಗಬೇಕಿದೆ ತಮ್ಮ ಗುಲಾಮಗಿರಿ ಬಿಡಿಸಿಕೊಳ್ಳಲು.

- ವಿಕಾಶ್ ಆರ್ ಮೌರ್ಯ

ಮುಖ್ಯವಾಹಿನಿಗೆ ನಕ್ಸಲರು

...ನಕ್ಸಲರು ಮುಖ್ಯವಾಹಿನಿಗೆ ಬರುವಲ್ಲಿ ಪತ್ರಿಕೆ ಮತ್ತು

'ಅಲೋನ್' ಎಂಬ ಥ್ರಿಲ್ಲರ್ ಸಿನಿಮಾ

ಯಾವುದೋ ಒಂದು ಬಗೆಯ ಖಿನ್ನತೆಗೆ ಗುರಿಯಾದ ಯುವತಿಯೊಬ್ಬಳು ನಾಲ್ಕು ದಿನ ತನ್ನ ಗೆಳತಿಯ ಮನೆಯಲ್ಲಿದ್ದು ಮನಸಿಗೆ ನೆಮ್ಮದಿ ತಂದುಕೊಳ್ಳುವ ಸಲುವಾಗಿ ಬೆಂಗಳೂರಿನಿಂದ ಮಂಗಳೂರಿಗೆ ಹೋಗುತ್ತಾಳೆ. ತನ್ನ ಗೆಳತಿಯ ಮನೆಯಲ್ಲಿ ಆಕಸ್ಮಿಕವಾಗಿ ಒಂದಿಷ್ಟು ಅನಿರೀಕ್ಷಿತ ಸಮಸ್ಯೆ, ಒತ್ತಡ, ಒಂಟಿತನ ಮುಂತಾದವುಗಳಿಗೆ ಗುರಿಯಾಗಿ ತೊಳಲಾಡುತ್ತಾಳೆ. ಆ ಸುಳಿಯಿಂದ ಹೊರ ಬರಲು ಹೇಗೆ ಪ್ರಯತ್ನಿಸುತ್ತಾಳೆ ಅನ್ನೋದು ಚಿತ್ರವೊಂದರ ಕತೆಯ ಎಳೆ. ಆ ಚಿತ್ರದ ಹೆಸರು 'ಅಲೋನ್' ಅಂತ.

ಜೆ.ಕೆ.ಎಸ್ ನಿರ್ದೇಶಿಸುತ್ತಿರುವ ಈ ಚಿತ್ರವು ಪಕ್ಕಾ ಥ್ರಿಲ್ಲರ್ ಸಿನಿಮಾ ಆಗಿದ್ದು ಈಗಾಗಲೇ ಚಿತ್ರದ ಮುಕ್ಕಾಲು ಭಾಗದಷ್ಟು ಚಿತ್ರೀಕರಣ ಮುಗಿಸಿಕೊಂಡಿದೆ. ಎರಡು ಹಾಡು ಮತ್ತು ಕ್ಲೈಮ್ಯಾಕ್ಸ್ ಮಾತ್ರ ಬಾಕಿ ಇದೆ. ಚಿತ್ರದಲ್ಲಿ ಕೇವಲ ಎಂಟೇ ಎಂಟು ಪಾತ್ರಗಳಿದ್ದು ಕ್ಲೈಮ್ಯಾಕ್ಸ್‌ನಲ್ಲಿ ಬಾಲಿವುಡ್ ನಟ ಸುನಿಲ್ ಶೆಟ್ಟಿ ವಿಶೇಷ ಸಿಸಿಬಿ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಗೋವಾದಲ್ಲಿ ನಡೆಯುವ ಈ ಕ್ಲೈಮ್ಯಾಕ್ಸ್ ಚಿತ್ರೀಕರಣಕ್ಕೆ ಹಡಗನ್ನು ಬಳಸಲಾಗುತ್ತಿದೆಯಂತೆ. ಎಲ್.ಅನಂತು, ರಾಮಲಿಂಗಯ್ಯ ಎನ್ನುವವರು ನಿರ್ಮಿಸುತ್ತಿರುವ ಈ ಚಿತ್ರಕ್ಕಾಗಿ ಕಾಪು ಬೀಚಿನಲ್ಲಿ ಮನೆಯೊಂದರ ಬೃಹತ್ ಸೆಟ್ ಹಾಕಲಾಗಿದೆಯಂತೆ.



ಕನ್ನಡದಲ್ಲಿ ಇದೇ ಮೊದಲಬಾರಿಗೆ ಎಫ್-65 ಕ್ಯಾಮೆರಾ ಬಳಸಿ ಚಿತ್ರ ತಯಾರಾಗುತ್ತಿದೆ. ಈ ಕ್ಯಾಮೆರಾದ ಬಾಡಿಗೆ ದಿನಕ್ಕೆ ಎಪ್ಪತ್ತು ಸಾವಿರ ಅನ್ನೋದು ವಿಶೇಷ. ಈವರೆಗೆ ಈ ಕ್ಯಾಮರಾ ಬಳಸಿ 'ಹೈದರ್', 'ಹೈವೇ', 'ಸಿಂಗಂ-2' ಮುಂತಾದ ಚಿತ್ರಗಳನ್ನು ಮಾಡಲಾಗಿದೆ. 'ಭಜರಂಗಿ'ಗೆ ಕ್ಯಾಮೆರಾ ಹಿಡಿದಿದ್ದ ಜಿ.ಆನಂದ್ ಈ ಚಿತ್ರದ ಕ್ಯಾಮೆರಮ್ಯಾನ್.

ಕನ್ನಡ, ತೆಲುಗು, ತಮಿಳಿನಲ್ಲಿ ತಯಾರಾಗುತ್ತಿರುವ 'ಅಲೋನ್' ಮೂಲಕ 'ರಾಜಾಹುಲಿ' ಚಿತ್ರದಲ್ಲಿ ವಿಲನ್ ರೋಲ್ ಮಾಡಿದ್ದ ವಸಿಷ್ಠ ಹೀರೋ ಆಗುತ್ತಿದ್ದಾರೆ. ಅವರ ಜೊತೆ ನಿಕಿತ ಪಟೇಲ್, ಇನಿಯ, ಸಾಧು ಕೋಕಿಲ, ತಬಲಾ ನಾಣಿ ಮತ್ತು ಇತರರು ನಟಿಸುತ್ತಿದ್ದಾರೆ. ಚಿತ್ರದಲ್ಲಿರುವ ಮೂರು ಹಾಡುಗಳಿಗೆ ಸುಜಿತ್ ಶೆಟ್ಟಿ ಮ್ಯೂಸಿಕ್ ಇರುತ್ತದೆ.

'ಕೋಲಾಹಲ' ತೆರೆಗೆ

'ಕೋಲಾಹಲ' ಎಂಬುದೊಂದು ಸಿನಿಮಾ ಕನ್ನಡದಲ್ಲಿ ತಯಾರಾಗಿದೆ. ಈ ಚಿತ್ರ ಈ ವಾರ ತೆರೆಗೆ ಬರುತ್ತಿದೆ. ಬೆಂಗಳೂರಿನ 'ಕೈಲಾಸ್' ಸೇರಿದಂತೆ ರಾಜ್ಯಾದ್ಯಂತ ಸುಮಾರು ಐವತ್ತೈದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಈ ಚಿತ್ರದಲ್ಲಿ ಎಲ್ಲರೂ ಹೊಸಬರೇ ತುಂಬಿ ತುಳುಕುತ್ತಿದ್ದಾರೆ.

ಆಂಧ್ರ ಪ್ರದೇಶದ ಭಾಸ್ಕರ್ ಈ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದು, ಸಾಯಿ ಅನ್ನುವವರು ನಿರ್ಮಾಣ ಮಾಡಿದ್ದಾರೆ. 'ಕೋಲಾಹಲ' ಒಂದು ಕಾಮಿಡಿ ಚಿತ್ರವಾಗಿದ್ದು ಜನರನ್ನು ನಗಿಸುತ್ತೇವೆ ಅನ್ನುವ ಭರವಸೆ ನಿರ್ದೇಶಕರದ್ದು. ದೊಡ್ಡ ದೊಡ್ಡ ಬಜೆಟ್ಟಿನ ದೊಡ್ಡ ದೊಡ್ಡ ಸ್ಟಾರ್‌ಗಳ ಚಿತ್ರಗಳೆಲ್ಲಾ ಮಕಾಡೆ ಮಲಗುತ್ತಿರುವ ಇಂತಹ ದಿನಗಳಲ್ಲಿ 'ಕೋಲಾಹಲ'ದಂತಹ ಕಡಿಮೆ ಬಜೆಟ್ಟಿನ, ಪರಿಚಿತ ಮುಖಗಳೇ ಇಲ್ಲದ ಚಿತ್ರಗಳು ಯಾವ ಮಟ್ಟದಲ್ಲಿ ಜನರನ್ನು ತಲುಪುತ್ತವೆ ಅನ್ನುವುದೇ ಪ್ರಶ್ನೆ.



ಇಷ್ಟಕ್ಕೂ 'ಚಿತ್ರ', 'ಫ್ರೆಂಡ್ಸ್', 'ಜಾಲಿ ಡೇಸ್', 'ಮೊಗ್ಗಿನ ಮನಸು', 'ಜೋಶ್' ತರಹದ ಚಿತ್ರಗಳನ್ನು ಹಿಟ್ ಮಾಡಿರುವ ಕನ್ನಡ ಪ್ರೇಕ್ಷಕ ಯಾವಾಗ ಏನು ಪವಾಡ ಮಾಡುತ್ತಾನೆ ಅಂತ ಸುಲಭದಲ್ಲಿ ಹೇಳಲಾಗದು ಅನ್ನೋದೂ ಅಷ್ಟೇ ಸತ್ಯ.

ಸುಪ್ರೀತ್ ನಿರ್ದೇಶನದಲ್ಲಿ ಪ್ರಭುದೇವ ಸ್ಟೆಪ್ಸ್




ಪಿ.ಲಂಕೇಶರ ಪ್ರಸಿದ್ಧ ಅಂಕಣ 'ಮರೆಯುವ ಮುನ್ನ' ನಿಮಗೆ ಗೊತ್ತು. ಈಗ ಆ ಹೆಸರಿನಲ್ಲಿ ಒಂದು ಸಿನಿಮಾ ಬರುತ್ತಿದೆ. ಈ ಚಿತ್ರದ ನಾಯಕ 'ಚಿತ್ರ', 'ಮನಸೆಲ್ಲ ನೀನೆ', 'ಒನ್ ಟೂ ತ್ರೀ' ಚಿತ್ರಗಳಲ್ಲಿ ನಟಿಸುವ ಮೂಲಕ ಒಂದು ಕಾಲದಲ್ಲಿ ಕನ್ನಡದಲ್ಲಿ ಭರವಸೆ ಮೂಡಿಸಿದ್ದ ನಾಗೇಂದ್ರ ಪ್ರಸಾದ್.

ಇವರ ಅಣ್ಣ ಪ್ರಭುದೇವ ತಮಿಳಿನಲ್ಲಿ ನಟನಾಗಿ, ನೃತ್ಯ ನಿರ್ದೇಶಕನಾಗಿ ನೆಲೆ ಕಂಡುಕೊಂಡಿದ್ದರೆ, ಮತ್ತೊಬ್ಬ ಸಹೋದರ ರಾಜು ಸುಂದರಂ ಅದೆಷ್ಟೋ ಹಾಡುಗಳಿಗೆ ಹೆಜ್ಜೆ ಹಾಕಿಸುವಲ್ಲಿ ಯಶಸ್ವಿಯಾಗಿದ್ದರು. ಇಷ್ಟಕ್ಕೂ ಪ್ರತಿಭಾನ್ವಿತ ನೃತ್ಯ ನಿರ್ದೇಶಕ ಮೂಗೂರು ಸುಂದರಂ ಅವರ ಮೂವರು ಮಕ್ಕಳ ಪೈಕಿ ಒಬ್ಬರಾದ ಈ ನಾಗೇಂದ್ರ ಪ್ರಸಾದ್ ಇತ್ತೀಚಿನ ವರ್ಷಗಳಲ್ಲಿ ಯಾವೊಂದು ಚಿತ್ರದಲ್ಲಿಯೂ ಕಾಣಿಸಿಕೊಂಡಿರಲಿಲ್ಲ, ಬದಲಿಗೆ ಮಲೇಶಿಯಾದಲ್ಲಿ ಒಂದು ಡ್ಯಾನ್ಸ್ ಅಕಾಡೆಮಿ ನಡೆಸುತ್ತಿದ್ದರು. ಇದೀಗ ಮತ್ತೆ ಕನ್ನಡ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಸುಪ್ರೀತ್ ಶಂಕರತ್ನ ಈ ಚಿತ್ರದ ನಿರ್ದೇಶಕ. ನಿರ್ದೇಶಕ ಪ್ರೇಮ್ ಬಳಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವವಿರುವ ಈ ಸುಪ್ರೀತ್ ಮೂಲತಃ ಸಂಕಲನಕಾರ. ಕೆ.ಎಂ.ಪ್ರಕಾಶ್, ಶ್ರೀನಿವಾಸ್ ಪಿ ಬಾಬು, ದೀಪು ಎಸ್ ಕುಮಾರ್ ಮುಂತಾದವರ ಬಳಿ ಸಹಾಯಕ ಸಂಕಲನಕಾರರಾಗಿ ಕೆಲಸ ಮಾಡಿದ್ದಾರೆ.

ಈ ಚಿತ್ರಕ್ಕೆ ಕುಮಾರ್ ಭದ್ರಾವತಿ ಮತ್ತು ಪ್ರಮೋದ್ ಶಿವಣ್ಣ ಹಣ ಹಾಕುತ್ತಿದ್ದು, ಇದರ ತಮಿಳು ಅವತರಣಿಕೆಗೆ ರಘು ಎಲ್.ಜೆ. ಎನ್ನುವವರು ಬಂಡವಾಳ ಹಾಕುತ್ತಿದ್ದಾರಂತೆ. ಈ ಚಿತ್ರದ ಮತ್ತೊಂದು ವಿಶೇಷತೆಯೆಂದರೆ ಮೂಗೂರು ಸುಂದರಂ ಹಾಗೂ ರಾಜು ಸುಂದರಂ ತಲಾ ಒಂದೊಂದು ಹಾಡಿಗೆ ಕೊರಿಯೋಗ್ರಫಿ ಮಾಡುತ್ತಿದ್ದು, ಹಾಡೊಂದರಲ್ಲಿ ಪ್ರಭುದೇವ ಕಾಣಿಸಿಕೊಳ್ಳುತ್ತಿದ್ದಾರೆ. ಹಾಗೆಯೇ ಒಂದು ವಿಶೇಷ ಹಾಡಿಗಾಗಿ ಮೂವತ್ತು ಕ್ಯಾಮೆರಾಗಳನ್ನು ಬಳಸಲಾಗುತ್ತಿದೆ. ಒಟ್ಟು ಎಂಬತ್ತು ದಿನಗಳ ಕಾಲ ಚಿತ್ರೀಕರಣಗೊಳ್ಳುವ 'ಮರೆಯುವ ಮುನ್ನ'ಕ್ಕೆ ಸೀನಿಯರ್ ಸೌಂಡ್ ಎಂಜಿನಿಯರ್ ಪಳನಿ ಡಿ ಸೇನಾಧಿಪತಿ ಸಂಗೀತ ಕೊಡುತ್ತಿದ್ದಾರೆ.

'ಸಿಗರೇಟ್'ಗೆ ಪರಿಸರವಾದಿ ಸಾಥ್!



'ಕಂಕಣ', 'ಋಷ್ಯಶೃಂಗ', 'ಖಂಡವಿದೆಕೋ ಮಾಂಸವಿದೆಕೋ', 'ಆಲೆಮನೆ', 'ಅಮರ ಮಧುರ ಪ್ರೇಮ', 'ಅಂತರಾಳ', 'ಅಪರಿಚಿತ', 'ಆಗಂತುಕ', 'ಕಾಡಿನ ಬೆಂಕಿ', 'ತಾಯಿ ಸಾಹೇಬ', 'ಶ್', 'ನನ್ನ ಪ್ರೀತಿಯ ಹುಡುಗಿ' ತರಹ ಚಿತ್ರಗಳಲ್ಲಿ ನಟಿಸುವ ಮೂಲಕ ತಮ್ಮದೇ ವಿಶಿಷ್ಟ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿರುವ ಸುರೇಶ ಹೆಬ್ಳೀಕರ್ ಕನ್ನಡದ ಮಟ್ಟಿಗೆ ಅಪರೂಪದ ಮ್ಯಾನರಿಸಂ, ಇಮೇಜ್ ಹೊಂದಿರುವ ನಟ. ನಟನೆಯ ಜೊತೆಗೆ 'ಇಕೋ-ವಾಚ್' ಎಂಬ ಸಂಸ್ಥೆಯೊಂದನ್ನು ಆರಂಭಿಸಿ ಒಂದಿಷ್ಟು ಗಣನೀಯ ಕೆಲಸಗಳನ್ನು ಮಾಡುವ ಮುಖೇನ ಪರಿಸರ ಪ್ರಜ್ಞೆ ಮೂಡಿಸಿದಂಥವರು ಇವರು. ತಮ್ಮ ನಿರ್ದೇಶನಕ್ಕೆ ರಾಷ್ಟ್ರ ಪ್ರಶಸ್ತಿ ಫಿಲಂ ಫೇರ್ ಅವಾರ್ಡ್‌ಗಳನ್ನೂ ಗಳಿಸಿರುವ ಇವರು ಇದೀಗ ಮತ್ತೆ ಸುದ್ದಿಯಾಗುತ್ತಿದ್ದಾರೆ. ಹೇಗೆ ಅಂತೀರಾ?

ಶಂಕರ್ ನಿರ್ದೇಶನದ 'ಸಿಗರೇಟ್' ಚಿತ್ರದಲ್ಲಿ ನಟಿಸುವ ಮೂಲಕ. ಧೂಮಪಾನ ಆರೋಗ್ಯಕ್ಕೆ ಹಾನಿಕಾರಕ ಅನ್ನುವ ಸಂದೇಶವನ್ನು ಸಮಾಜಕ್ಕೆ ರವಾನಿಸುವ ಆಶಯ ಹೊತ್ತಿರುವ 'ಸಿಗರೇಟ್' ಚಿತ್ರದಲ್ಲಿ ಹೆಬ್ಳೀಕರ್ ಅವರದ್ದು ಕೇಂದ್ರ ಪಾತ್ರ. ತಾವೊಬ್ಬ ಪರಿಸರವಾದಿ ಎಂಬ ಜವಾಬ್ದಾರಿಯನ್ನು ಅರಿತು ಈ ಚಿತ್ರದಲ್ಲಿ ಅಂಥದೊಂದು ಪಾತ್ರವನ್ನು ಹೆಬ್ಳೀಕರ್ ಮಾಡಿದ್ದಾರೆ. ಅಂದಹಾಗೆ ಜನವರಿಯಂಚಿಗೆ ಚಿತ್ರವು ತೆರೆಗೆ ಬರಲಿದೆ.

ಮೈತ್ರಿಯಾ ಕೊರಳಿಗೆ ಮಾಂ

ಸದಾನಂದ ಗೌಡರ ಮಗ ತನಗೆ ಅನ್ಯಾಯ ಮಾಡಿದ್ದಾನೆ ಎಂಬ ಆ ಮೇಲೆ ಇತ್ತೀಚೆಗಷ್ಟೇ ಸುದ್ದಿಯಲ್ಲಿದ್ದ ಮೈತ್ರಿಯಾ ಗೌಡ ಮತ್ತೆ ಸುದ್ದಿ ಅದೂ ಚಿತ್ರವೊಂದರಲ್ಲಿ ನಟಿಸುವ ಮೂಲಕ.

ಮೈತ್ರಿಯಾ ನಟಿಸುತ್ತಿರುವ 'ಲವ್ ಆನ್ ಎನ್‌ಎಚ್-4' ಚಿತ್ರಕ್ಕೆ ಶ್ರೀನಾಥ್ ಎನ್ನುವವರು ನಿರ್ದೇಶಕ. ಈ ಚಿತ್ರದಲ್ಲಿ ಮೈತ್ರಿ ಕೊರಳಿನಲ್ಲಿ ಮಾಂಗಲ್ಯ ಧರಿಸಿರುವುದು ಒಂದಿಷ್ಟು ಕುತೂ ಕಾರಣವಾಗಿದೆ. ಈಕೆ ಮಾಡುತ್ತಿರುವ ಈ ಪಾತ್ರ ನಿಜ ಜೀವನದ್ದಾ? ಗೌಡರ ಸುಪುತ್ರನಿಂದ ಒಳಗಾದ ಅನ್ಯಾಯದ ಬಗೆಗಿನದ್ದಾ? ಅನುಮಾನಗಳು ಉಂಟಾಗುತ್ತಿದೆ.

'ಲವ್ ಆನ್ ಎನ್‌ಎಚ್-4'ನಲ್ಲಿ ಮೈತ್ರಿಯಾ ಪಾತ್ರ ಎಂಥದ್ದು ಬಗ್ಗೆ ಡೈರೆಕ್ಟರ್ ಗುಟ್ಟು ಬಿಟ್ಟುಕೊಡುತ್ತಿಲ್ಲ!



'ಲವ್ ಆನ್ ಎನ್‌ಎಚ್-4'ನಲ್ಲಿ ಮೈತ್ರಿಯಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com